MYSORE LEGISLATIVE ASSEMBLY

ELEVENTH DAY.

Friday, 13th March 1959.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

Member's Representation.

Sri C. M. ARUMUGHAM (Kolar Gold Fields).—Mr. Speaker, Sir, what about my privilege motion ?

Mr. SPEAKER.—The Chief Minister has not come.

Sri C. M. ARUMUGHAM.—What has the Chief inistMer got to do with this ?

Mr. SPEAKER.—I have requested the Chief Minister if he can enlighten me before I make up my mind either to allow or disallow the motion. Unfortunately the Chief Minister has not come.

Sri C. M. ARUMUGHAM.—I have been submitting to the Chair for a long time. The budget discussion is going on ; the Chief Minister has not come.

Mr. SPEAKER.—We will take it up. It is only on account of the Chief Minister's absence that I am not taking it up now. We will take it up to-day.

BUDGET ESTIMATES FOR 1959-60—GENERAL DISCUSSION.

(*Continued.*)

ಶ್ರೀಮತಿ ನಾಗರತ್ನಮ್ಮ ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿರುವ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಸರ್ಕಾರದ ಲೋಪ ದೋಷಗಳೇನಾದರೂ ಇದ್ದರೆ ಟೀಕಿಸಲೂ ಸಲಹೆಕೊಡಲು ಸದಸ್ಯರಾದ ನಮಗೆ ಈ ಪ್ರಸಂಗದಲ್ಲಿ ಹೆಚ್ಚಿನ ಅವಕಾಶವುಂಟು. ನಾವು ಮಾತನಾಡುತ್ತೇವೆ, ಟೀಕಿಸುತ್ತೇವೆ, ಸಲಹೆಕೊಡುತ್ತೇವೆ. ಸರ್ಕಾರದವರೂ ಸಹ ಕೇಳುತ್ತಾರೆ. ಸಮಾಧಾನ ಹೇಳುತ್ತಾ ಯೋಚಿಸಲಾಗುವುದು ಗಮನಕೊಡಲಾಗುವುದು ಎಂದು ಉತ್ತರ ಕೊಡುತ್ತಾರೆ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆಂದು ಸಮಾಧಾನ ಪಟ್ಟುಕೊಳ್ಳುತ್ತೇವೆ. ಮಂತ್ರಿಗಳೂ ಸಹ ಚಿಕ್ಕದಾದ, ಸತ್ಯವೆಂದು ಕಾಣುವ, ವಿಚಾರಿಸಿದರೆ ಆ ಬಗ್ಗೆ ಸದಸ್ಯರಿಗೆ ಏನೇನೂ ಮಾಹಿತಿಗಳು ದೊರೆಯದಂತಹ ಬುದ್ಧಿವಂತಿಕೆಯ ಉತ್ತರಕೊಟ್ಟಿದ್ದೇವೆ, ನಮ್ಮ ಖಾತೆಗಳ ಬಗ್ಗೆ ಸುದೀರ್ಘವಾಗಿ ಪ್ರತಿಪಾದನೆ ಮಾಡಿದ್ದೇವೆ, ಎಂದು ತುಂಬ ಸಂತೋಷಪಟ್ಟುಕೊಳ್ಳುತ್ತಾರೆ. ವ್ಯವಹಾರಿಕವಾಗಿ ನಡೆಯುತ್ತಿರುವ ಈ ವ್ಯವಹಾರದಲ್ಲಿ ಸ್ವಲ್ಪ ಬದಲಾವಣೆ ಆಗಬೇಕಾದದ್ದು ಸೂಕ್ತವೆಂದು ನನ್ನ ಭಾವನೆ.

ವಿಧಾನಸಭಾ ಸದಸ್ಯರು ಮಾಡಿದ ರಚನಾತ್ಮಕ ಟೀಕೆ ಸಲಹೆಗಳನ್ನು ಎಷ್ಟರಮಟ್ಟಿಗೆ ಆಚರಣೆಗೆ ತಂದಿದ್ದೀರಿ ? ಅತಿಮುಖ್ಯವಾದವುಗಳನ್ನಾದರೂ ಜಾರಿಗೆ ತಂದಿದ್ದೀರಾ ? ಆ ಬಗ್ಗೆ ಇಂತಹವರ ಇಂತಹ ಸಲಹೆಗಳನ್ನು ಗಮನಿಸಿದ್ದೇವೆ ಎಂಬುದಕ್ಕೆ ವಿವರ ಕೊಡಬಲ್ಲಿರಾ ಎಂದು ಸರ್ಕಾರದವರನ್ನು ಕೇಳಿದರೆ ನೋಟೀಸ್ ಎಂದು ಹೇಳಿಬಿಡುತ್ತಾರೆ. ವಿಧಾನಸಭೆ ಮಂತ್ರಿಗಳಿಗೆ ಆಡಳಿತದ "ಅನುಭವ ಮಂಟಪ" ವಿದ್ದಂತೆ. ಸರಕಾರದ ಆಡಳಿತ ಮಂದಗತಿಯ ಮಲೇರಿಯಾ ರೋಗಕ್ಕೆ ಗುರಿಯಾಗಿದ್ದಾಗ, ಟೀಕೆ ಸಲಹೆಗಳು ಕ್ವಿನೈನ್ ಗುಳಿಗೆಯಂತೆ ಪರಿಹಾರ ನೀಡಬಲ್ಲುವು "ಅಧರಕ್ಕೆ ಕಹಿಯೂಗಿ ಕಂಡರೂ ಉದರಕ್ಕೆ ಸಿಹಿಯಾಗಬಲ್ಲುವು, ಈ ದೃಷ್ಟಿಯಿಂದ ನಮ್ಮ ಟೀಕೆಸಲಹೆಗಳನ್ನು ಆಯಾಯ ಮಂತ್ರಿಗಳು ಗಮನಿಸಿ ಕಾರ್ಯರೂಪಕ್ಕೆ ತಂದಲ್ಲಿ, ಉಭಯ ಕುಶಲೋಪರಿ ಸಾಂಪ್ರತವಾಗುತ್ತದೆ. ಈ ಪ್ರಸಂಗದಲ್ಲಿ ಮಂತ್ರಿಗಳು ಸಹಸ್ರಶೀರ್ಷ, ಸಹಸ್ರಾಕ್ಷ, ಸಹಸ್ರಕರ್ಣಗಳುಳ್ಳವರಾಗಿ ಸದಸ್ಯರ ಟೀಕೆ ಸಲಹೆಗಳನ್ನು ಗಮನಿಸಿ ಮುಖ್ಯವಾದುವುಗಳನ್ನು ಆಚರಣೆಗೆ ತರುವ ಪ್ರಯತ್ನಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸಹಸ್ರಾಕ್ಷ ಸಹಸ್ರಕರ್ಣರಾದರೆ, 'ಫಾಲನೇತ್ರ' ಎಲ್ಲಿಹೋಗಬೇಕು ?

ಶ್ರೀಮತಿ ನಾಗರತ್ನಮ್ಮ.—ಆರ್ಥಿಕ ಮಂತ್ರಿಗಳು ಉಳಿತಾಯವೆನ್ನಬಹುದಾದ ಆಯವ್ಯಯ ನಮ್ಮ ಮುಂದಿಟ್ಟಿದ್ದಾರೆ. ಗಣಿತಜ್ಞರು, ತಾಂತ್ರಿಕಜ್ಞರು, ಗುಣಿಸಿ, ಭಾಗಿಸಿ, ಪ್ಲಸ್, ಮೈನಸ್ ಮಾಡಿ

(ಶ್ರೀಮತಿ ನಾಗರತ್ನಮ್ಮ)

ಹೇಗಾದರೂ ಅರ್ಥಮಾಡಿಕೊಳ್ಳುತ್ತಾರೆ. ಜನಸಾಮಾನ್ಯರ ಪ್ರತಿನಿಧಿಯಾದ ಗಣಿತಜ್ಞರಲ್ಲದ ನನ್ನಂತಹವರು ಅರ್ಥಮಾಡಿಕೊಳ್ಳುವುದು ಸ್ವಲ್ಪ ತಲೆನೋವೆ. ಬಡ್ಜೆಟ್ ಲೆಕ್ಕಾಚಾರ ಹೇಗೆ ಎಂದು ನಾನೊಬ್ಬರನ್ನು ಪ್ರಶ್ನಿಸಿದೆ. ಸುಲಭವಾಗಿದೆಯಲ್ಲ "ಮೂರಿಪ್ಪತ್ತರಾರಕ್ಕು, ಅರು ಹನ್ನೆರಡಕ್ಕು, ಹನ್ನೆರಡೇ ಮತ್ತೆ ಆರಕ್ಕು, ಆಯವ್ಯಯ ಮಂಡನೆಯೇ ಹೀಗೆ ಮಮಜ್ಞ", ಎಂದು ಶ್ಲೋಕ ಹೇಳಿ ಆಶೆನಿರಾಶೆಗಳ ಬಿಸಿಲ್ ಗುದುರೆಯಂತಿರುವುದೇ ಬಡ್ಜೆಟ್ಟಿನ ಮರ್ಮ ಎಂದರು. ಸರಿ ಅರ್ಥವಾಯಿತೆಂದು ಒಪ್ಪಿಕೊಂಡೆ. ಆದರೆ "ಆದಾಯ ಇಳಿಯುತಿದೆ, ವೆಚ್ಚವೋ ಹೆಚ್ಚುತಿದೆ, ಸಾಲವದು ಬೆಳೆಯುತಿದೆ ಮಾರುತಿಯ ಬಾಲದಂತೆ" "ವರುಷಗಳು ಕಳೆದರೂ ಹರುಷವೆಂಬುದೆ ಇಲ್ಲ ಆರ್ಥಿಕದ ವಿಷಮತೆಯು ಸರಿಪಡಿಸಲಿಲ್ಲ ದೀನದಲಿತರ ಕಷ್ಟ ತಪ್ಪಲಿಲ್ಲ" ಎಂದು ಜನಸಾಮಾನ್ಯರು ಅಭಿಪ್ರಾಯ ಪಡುತ್ತಿದ್ದಾರೆ. ಹೆಚ್ಚುವರಿ ತೆರಿಗೆಗಳನ್ನು ಹಾಕದೆ ಪ್ರಕೃತಿದತ್ತವಾದ ನಾಡಿನ ಸಾಧನ ಸಂಪತ್ತುಗಳಿಂದ ಆದಾಯವನ್ನು ಹೆಚ್ಚಿಸಿಕೊಂಡು ಋಣಕ್ಕೆ ಕೈಯೊಡ್ಡದೆ ಉಳಿತಾಯದ ಬಡ್ಜೆಟ್ ಮಂಡಿಸಿದರೆ ಜನಸಾಮಾನ್ಯರ ಮೆಚ್ಚಿಗೆಗೆ ಪಾತ್ರರಾಗುತ್ತೀರಿ. ಆದಕಾರಣ ಆರ್ಥಿಕಮಂತ್ರಿಗಳು ಮುಂದಿನ ಸಾರಿ ಈ ರೀತಿಯ ಆಯ ವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಲೆಂದು ಆಶಿಸುತ್ತೇನೆ.

ಸರ್ಕಾರದ ನಾನಾ ಬಾಬುಗಳಲ್ಲಿರುವ ದುಂದು ಖರ್ಚುಗಳನ್ನೂ, ಅನಾವಶ್ಯಕ ಅಪವ್ಯಯಗಳನ್ನೂ ನಿಲ್ಲಿಸುವ ಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ಏಕೆ ಕೈಕೊಳ್ಳಬಾರದೆಂದು ಪ್ರಶ್ನಿಸಬೇಕಾಗುತ್ತದೆ. ಉದಾಹರಣೆಗೆ ಆಹಾರ ಬಾಬು ತೆಗೆದುಕೊಳ್ಳೋಣ. ಹಿಂದೆ ಕಂಟ್ರೋಲ್ ಇದ್ದ ಕಾಲದಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಆದರೂ ಚಿಂತೆಯಿಲ್ಲ, ಜನಗಳಿಗೆ ಎಲ್ಲಾ ದೃಷ್ಟಿಗಳಿಂದ ಉಪಯೋಗವಾಯಿತೆ? ಆಗಲಿಲ್ಲ. ಸರ್ಕಾರದ ಡಿಪೋಗಳಲ್ಲಿದ್ದ ಅಳತೆಮಾಡುವವರು, ಗುಮಾಸ್ತರು, ಅಧಿಕಾರಿಗಳು—ಎಲ್ಲರೂ ಎಂದು ಹೇಳಲಾರೆ-ಕೆಲವರು ಭಂಗಾರದ ಘಟ್ಟಿಗಳನ್ನೇ ಮಾಡಿಕೊಂಡರು. ಜನತೆಗೆ ದೊರೆತದ್ದು ಕಲ್ಲು ಮಣ್ಣಿನಿಂದ ಕೂಡಿದ ತಿಕ್ಕಿದರೆ ಹಿಟ್ಟಾಗುವ ಮುಗ್ಗಲು ಧಾನ್ಯ. ಈಗ ಮತ್ತೆ ಸರ್ಕಾರ ಧಾನ್ಯವ್ಯವಹಾರದ ಒಂದು ನಿರ್ದಿಷ್ಟ ಹತೋಟಿ ತೆಗೆದುಕೊಳ್ಳುವುದು ನಿರ್ಧಾರವಾಗಿದೆ. ಹಿಂದಿನ ಅನುಭವವನ್ನು ನೋಡಿದ್ದ ಕೇಳಿದ್ದ ನಮಗೆ ಒಂದು ವಿಧವಾದ ಸಂದೇಹ ಈಗಲೇ ಬಂದಿದೆ. ಒಂದು ಪಲ್ಲಕ್ಕೆ ಅತಿಕಡಿಮೆ ಎಂದರೆ ನಾಲ್ಕು ಸೇರು ಅತಿಹೆಚ್ಚೆಂದರೆ ಹತ್ತು ಸೇರುಗಳತನಕ ಸಣ್ಣಕಲ್ಲು ಮರಳುಸೇರಿಸುತ್ತಾರೆಂದು ತಿಳಿದುಬಂದಿದೆ, ಈ ಕೆಲಸವನ್ನು ಸರ್ಕಾರದಡಿಪೋಗಳ ಚಿತ್ರಗುಪ್ತರು ಮಾಡುತ್ತಾರೆ. ಅಳತೆಯಲ್ಲಿಯೂ ಅಷ್ಟೆ ಧಾನ್ಯ ಕೊಳ್ಳುವಾಗ 100 ಸೇರು ಇದ್ದರೆ ಗೋಡೌನಿಗೆ ಬಂದಾಗ 97-98 ಸೇರಿಗೆ ಇಳಿಯುತ್ತದೆ; ಮಾರಾಟಗಾರರಲ್ಲಿ ಬರುವಾಗ್ಯೆ 95-96 ಸೇರಿಗೆ ಇಳಿಯುತ್ತದೆ. ಹೀಗಿದೆ ಧಾನ್ಯದ ಅಳತೆ. ಹೀಗಾಗಿ ಆಹಾರ ಬಾಬಿನಲ್ಲಿ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ನಷ್ಟವಾಗಿದೆ. ಹೀಗಾಗದಂತೆ ನೋಡಿಕೊಳ್ಳಲು ಸರ್ಕಾರದವರು ಕೈಶುದ್ಧಿಯಿರುವ ದಕ್ಷ ಅಧಿಕಾರಿಗಳನ್ನು ನೇಮಿಸಬೇಕೆಂದು ಸೂಚಿಸುತ್ತೇನೆ. ಸರ್ಕಾರಿ ಗೋಡೌನಿನ ಧಾನ್ಯಕ್ಕೆ ವಿಚಿತ್ರಕ್ಷಯರೋಗ ಬೇರೆ ಬರುತ್ತದೆ. ಇದು ಇಲ ಹೆಗ್ಗಣಗಳಿಂದ ಬರುವುದಕ್ಕಿಂತಲೂ ಚಿತ್ರಗುಪ್ತರಿಂದ ಬರುವುದೇ ಹೆಚ್ಚು. ರಕ್ಷಣೆ ಕಾನೂನುಗಳಿಂದ ತಪ್ಪಿಸಿಕೊಳ್ಳುತ್ತಿರುವ ಈ ವ್ಯವಹಾರವನ್ನು ಕಂಡುಹಿಡಿದವರು ನಿಜವಾಗಿಯೂ ಸಾಮರ್ಥ್ಯಶಾಲಿಗಳು. ಕಾರಣ ಆಹಾರ ಮಂತ್ರಿಗಳು ವಿಶ್ವರೂಪಿಗಳಾಗಿ ಕೊನೆಗೆ ಸಿ.ಐ.ಡಿ. ಯಾಗಿಯಾದರೂ ಇಂತಹ ವಿಚಾರಗಳನ್ನು ಪತ್ತೆಹಚ್ಚಿ ಉಪಕಾರ ಮಾಡುವರೆಂದು ಹಾರೈಸುತ್ತೇನೆ.

ವ್ಯವಸಾಯ ಖಾತೆಯನ್ನು ನೋಡೋಣ. ಹೆಚ್ಚು ಆಹಾರ ಬೆಳೆಯಿರಿ ಎಂಬ ಚಳವಳಿ ಇದ್ದೇಇದೆ. ಇತ್ತೀಚೆಗೆ ಮುಂಗಾರು, ಹಿಂಗಾರು ಬೆಳೆಗಳ ಚಳವಳಿ ಪ್ರಾರಂಭವಾಗಿದೆ. ಇಷ್ಟೆಲ್ಲಾ ಇದ್ದರೂ ರೈತನಲ್ಲಿ ಉತ್ಸಾಹ ವಿಲ್ಲ. ವ್ಯವಸಾಯದ ಮೇಲೆ ಜಿಗುಪ್ಸೆಗೆ ಕಾರಣವೇನು? ರೈತನಿಗೆ ತಾನು ಉಂಡುಟ್ಟು ನಲಿಯುವಷ್ಟು ಸಂಪಾದನೆಯಿಲ್ಲ. ಸರ್ಕಾರ ರೈತರಿಗೆ ಕೊಡುವ ಪ್ರೋತ್ಸಾಹ ಸಹಾಯ ಸಾಲದು. ಒಬ್ಬ ರೈತನಿಗೆ ಜಮಿನು ಆಬಾದಿಗೆ 2,000 ರೂಪಾಯಿಗಳ ಸಾಲ ಕೊಡುತ್ತಾರೆಂದರೆ, ಆ ಸಾಲ ತೆಗೆದುಕೊಳ್ಳಲು ಭಗೀರಥ ಪ್ರಯತ್ನಮಾಡಬೇಕು. ಸಂಬಂಧಪಟ್ಟವರಿಗೆ ಧೂಪ, ದೀಪ, ನೈವೇದ್ಯ ಸಲ್ಲಬೇಕು. ದುಡ್ಡಿಲ್ಲ, ಕಾಸಿಲ್ಲ ಬಂದೆನಪ್ಪ ನಿನ್ನ ಬಳಿಗೆ, ಎಂದು ರೈತಹೇಳಿದರೆ, ಸಾಲವಿಲ್ಲ, ಶೂಲವಿಲ್ಲ ಹೋಗಪ್ಪ ನಿನ್ನ ಮನೆಗೆ ಎಂದು, ಎಲ್ಲರೂ ಅಲ್ಲದಿದ್ದರೂ, ಬಹುಜನ ಅಧಿಕಾರಿಗಳು ಹೇಳುವ ಪದ್ಧತಿಯಿದೆ.

ಸರ್ಕಾರ ಸೋಷಿಯಲ್ ವೆಲ್‌ಫೇರ್ ಖಾತೆಗೆ ಗಮನ ಕೊಟ್ಟಷ್ಟು ವ್ಯವಸಾಯ ಖಾತೆಗೆ ಗಮನಕೊಟ್ಟಿಲ್ಲ. "ಹೊಟ್ಟೆಗೆ ಹಿಟ್ಟಿದ್ದರಲ್ಲವೇ ಜುಟ್ಟಿಗೆ ಮಲ್ಲಿಗೆ ಹೂವು?" ರೈತನ ಆರ್ಥಿಕ ಪರಿಸ್ಥಿತಿ ಒಳಿತಾದರೆ ಸಮಾಜ ಕಲ್ಯಾಣ, ನಾಗರಿಕತೆಗಳ ಕಡೆಗೆ ರೈತ ತನಗೆ ತಾನೇ ಗಮನ ಕೊಡುತ್ತಾನೆ. ನಮ್ಮದು ಕರಿನಾಡು, ದಕ್ಷಿಣ ದೇಶದ ದವಸದ ಕಣಜ; ಆದರೂ ಸರಾಸರಿ ಅಂಕಿ ಸಂಖ್ಯೆಗಳ ಪ್ರಕಾರ ನಮ್ಮ ಬೆಳೆ ಸುಮಾರು 30 ಲಕ್ಷ ಟನ್. ನಮಗೆ ಸಾಕಷ್ಟು ಆಹಾರ ಬೆಳೆಯಲು ಅಸಮರ್ಥರಾಗಿದ್ದೇವೆ.

ಸರಕಾರ ರೈತನ ನಿರುತ್ಸಾಹ ಖಾಹಿಲೆಗೆ ಔಷಧಿ ಕೊಡುತ್ತಿಲ್ಲ; ಮಂತ್ರಹಾಕುತ್ತಿದ್ದಾರೆ. ತನ್ನ ಭೂಮಿಕಾಣಿಯ ಮೇಲೆ ರೈತನಿಗೆ ಅಭಿಮಾನ ಬಂದು ಹೆಚ್ಚುಬೆಳೆಯಲು ಬೇಕಾದ ಪ್ರೋತ್ಸಾಹ ಸಹಾಯಗಳನ್ನು ಒದಗಿಸಿ ಆಹಾರ ಸ್ವಪರಿಪೂರ್ಣತೆಯನ್ನು ಸಾಧಿಸಲೆಂದು ವಿನಂತಿಸುತ್ತೇನೆ.

ಆರೋಗ್ಯ ಖಾತೆಯ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಹಳ್ಳಿಗಾಡು ಪ್ರದೇಶದ ವೈದ್ಯಕೀಯ ಸೌಲಭ್ಯ ಎತ್ತಿನಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲದಂತೆಯೇ ಇದೆ. ಕೊನೆಯಪಕ್ಷ ಪ್ರತಿಯೊಂದು ಹೋಬಳಿಗೂ ಒಂದು ಮೆಟರ್ನಿಟಿ ಆಸ್ಪತ್ರೆ ಇದ್ದೇತೀರಬೇಕು. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯೆಯಾಗಿ ಹೋಗಿದ್ದೆ. ಮಂಗಳೂರಿನ ಹತ್ತಿರ ಕಾಪ್ ಎಂಬಲ್ಲಿ, ಕುಂದಾಪುರದಲ್ಲಿ ಹತ್ತು ಸಾವಿರ ಜನರಿದ್ದಾರೆ. ಕುಮಟಾ, ಬೀದರ್ ಜಿಲ್ಲೆಯ ಕಲ್ಯಾಣದಲ್ಲಿ 20 ಸಾವಿರ ಜನರಿದ್ದಾರೆ. ಇಲ್ಲೆಲ್ಲಿಯೂ ಮೆಟರ್ನಿಟಿ ಆಸ್ಪತ್ರೆಗಳಿಲ್ಲ. ಒಂದೆರಡು ಕಡೆ ಒಬ್ಬೊಬ್ಬರು ನರ್ಸ್ ಇದ್ದಾರೆ. ಅವರು ರಜಾಹೋದರೆ ಅವರ ಕೆಲಸವನ್ನು ಪುರಷ ಡಾಕ್ಟರೇ ಮಾಡಬೇಕಾಗಿದೆ. ಮಹಿಳೆಯರು ಸಂಖ್ಯಾಪ್ರಮಾಣದಲ್ಲಿ ಪುರುಷರಷ್ಟೇ ಇದ್ದಾರೆ. ನಿರ್ಲಕ್ಷಿಸಿದರೆ, ಮಹಿಳೆಯರ ಅನುಕೂಲತೆ ಬಗ್ಗೆ ಚಳವಳಿ ಹೂಡಬೇಕಾದೀತು. ದೇಶದಲ್ಲಿ ಡಾಕ್ಟರುಗಳ ಕೊರತೆ ತುಂಬಇದೆ ಎಂದು ಆರೋಗ್ಯ ಮಂತ್ರಿಗಳೇ ಹೇಳಿಕೆ ಕೊಟ್ಟಿದ್ದಾರೆ. ಆದರೆ ಮಣಿಪಾಲ್‌ನಲ್ಲಿರುವ ಖಾಸಗಿ ಮೆಡಿಕಲ್ ಕಾಲೇಜನ್ನು ಸವತಿಮತ್ಸರದಿಂದ ನೋಡುತ್ತಿದ್ದಾರೆ. ಅಲ್ಲಿ

ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಕಾಲೇಜ್ ವ್ಯವಸ್ಥಾಪಕರಿಗೂ, ಸರ್ಕಾರಕ್ಕೂ ಭಿನ್ನಾಭಿಪ್ರಾಯ ಬಂದಿದೆ ಎಂದು ತಿಳಿದುಬಂದಿದೆ. ಸಾವಿರಾರು ರೂಪಾಯಿ ಫೀಜುಕೊಟ್ಟು ಈಗ ಕಾಲೇಜಿಗೆ ಸೇರಿರುವ ವಿದ್ಯಾರ್ಥಿಗಳ ಗತಿಯೇನು? ಈ ಬಗ್ಗೆ ತೀರ್ಮಾನದಲ್ಲಿ ಉದಾರತೆ ಇರಲೆಂದು ಹೇಳಬಯಸುತ್ತೇನೆ. ದೇಶದಲ್ಲಿ ಮಹಿಳಾ ಡಾಕ್ಟರುಗಳ ಅಭಾವವಿರುವುದರಿಂದ ಮೆಡಿಕಲ್ ಕಾಲೇಜಿನಲ್ಲಿ ಮಹಿಳಾ ವಿದ್ಯಾರ್ಥಿನಿಯರ ಪ್ರವೇಶದ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಅವಕಾಶ ದೊರೆಯಬೇಕು. ಇನ್ನೂ ಒಂದೆರಡುಕಡೆ ಖಾಸಗಿ ಯವರಿಗೆ ಪ್ರೋತ್ಸಾಹ ಕೊಟ್ಟೋ, ಇಲ್ಲವೇ ಸರ್ಕಾರ ದವರೇ ಆಗಲಿ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಿಯೋ ಡಾಕ್ಟರುಗಳ ಅಭಾವದ ಪ್ರಶ್ನೆಯನ್ನು ಪರಿಹರಿಸಬೇಕು.

ಬೃಹತ್ ಬೆಂಗಳೂರಿನ ಕ್ಷಯರೋಗದ ಆಸ್ಪತ್ರೆಯ ಬಡಾವಣೆ ಆಗಲೇಬೇಕಾಗಿದೆ. ಆಸ್ಪತ್ರೆಯಲ್ಲಿ ಸ್ಥಳ ದೊರೆಯದೆ ಕೆಲರೋಗಿಗಳು ಸತ್ತಿದ್ದಾರೆ. ಈ ರೀತಿ ಯಾದರೆ ಸರ್ಕಾರಕ್ಕೆ ಕಲಂಕವಲ್ಲವೇ? ಆದಕಾರಣ ಕ್ಷಯರೋಗದ ಆಸ್ಪತ್ರೆಯಬಡಾವಣೆಯನ್ನು ಜಾಗ್ರತೆ ಮಾಡಿರೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಬೆಂಗಳೂರಿನ ಮಧ್ಯದಲ್ಲಿರುವ ಅಂಟು ಜಾಡ್ಯದ ಆಸ್ಪತ್ರೆಯನ್ನು ಬೇರೆಕಡೆ ಬದಲಾಯಿಸಿರೆಂದು ಎರಡು ವರ್ಷಗಳಿಂದ ಕೇಳುತಿದ್ದೇನೆ,ಬದಲಾಯಿಸುತ್ತೇವೆಂದು ನೀವು ಹೇಳುತ್ತಲೇ ಇದ್ದೀರಿ. ನುಡಿದಂತೆ ನಡೆಯುವ ಉದಾತ್ತ ತತ್ವಕ್ಕೆ ಬೆಲೆಕೊಟ್ಟು ಕೂಡಲೇ ಈ ಕಾರ್ಯ ಮಾಡುತ್ತೀರೆಂದು ನಂಬಿದ್ದೇನೆ. ಆಸ್ಪತ್ರೆಗಳಿಗೆ ಸರಬರಾಜಾಗುತ್ತಿರುವ ಔಷಧ ಕೆಲವು ಕಡೆ ದುರುಪ ಯೋಗವಾಗುತ್ತಿದೆ ಎಂಬ ದೂರು ಬಹಳವಾಗಿದೆ. ಇತರ ಸಾಮಾನುಗಳೂ ಸಹ ಕೊಟ್ಟ ಹಣಕ್ಕೆ ತಕ್ಕ ಮಾಲು ಸಪ್ಲೈಆಗುತ್ತಿಲ್ಲವೆಂತಲೂ ತಿಳಿದುಬಂದಿದೆ. ಈ ಅಕ್ರಮಗಳನ್ನು ಸರಿಪಡಿಸಲು ಆರೋಗ್ಯ ಮಂತ್ರಿ ಗಳು ಪೂರ್ಣನಿಗಾ ಕೊಡುತ್ತಾರೆಂದು ನಂಬಿದ್ದೇನೆ.

ವಿದ್ಯಾ ಖಾತೆಯಲ್ಲಿ ಸ್ವಲ್ಪಪ್ರಗತಿ ಕಂಡುಬರುತ್ತಿದೆ. ಸಂತೋಷ. ಈಸಾರಿ 11 ಕೋಟಿ 36 ಲಕ್ಷ ರೂಪಾಯಿ ಗಳು ಈ ಬಾಬಿಗೆ ಮಂಜೂರಾಗಿವೆ. ಧನ್ಯವಾದ ಗಳು. ಏಕೆಂದರೆ "ನ ಹಿ ಜ್ಞಾನೇನ ಸದೃಶಂ" ಎಂಬಂತೆ ಜ್ಞಾನಕ್ಕಿಂತ ಮಿಗಿಲಾದದ್ದಿಲ್ಲ. ಪ್ರೈಮರಿ ಶಾಲೆ, ಮಾಧ್ಯಮಿಕ ಶಾಲೆಗಳ ಕೊರತೆ ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಇದೆ, ಇದರಂತೆ ತಾಂತ್ರಿಕ ಶಿಕ್ಷಣ ಶಾಲಾ ಕಾಲೇಜುಗಳ ಕೊರತೆಯೂ ಇದೆ. ವಿದ್ಯಾಮಂತ್ರಿಗಳು ಇದರ ನಿವಾರಣೆಗೆ ಒಂದು ನಿರ್ದಿಷ್ಟಕಾರ್ಯಕ್ರಮವನ್ನು ಕೈಕೊಳ್ಳಲೆಂದು ಅಪೇಕ್ಷಿ ಸುತ್ತೇನೆ. ಹರಿಜನ ಮತ್ತು ಗಿರಿಜನರೇ ಮುಂತಾದ ಹಿಂದುಳಿದ ಪಂಗಡಗಳ ವಿದ್ಯಾಭ್ಯಾಸ ಕಡ್ಡಾಯವಾಗ ಬೇಕು. ಹಿಂದುಳಿದವರಿಗೆ ಒಂದು ಮನೆ ಕಟ್ಟಲು ಸಹಾಯ ಮಾಡುವುದಕ್ಕಿಂತಲೂ, ಒಂದು ನೂರು ಜ ಹಿಂದುಳಿದವರು ವಿದ್ಯಾವಂತರಾಗಲು ಮಾಡುವ ಸಹಾಯ ದೊಡ್ಡದು. ಹಿಂದುಳಿದವರ ವಿದ್ಯಾಭ್ಯಾಸದ ಬಗ್ಗೆ ಎಷ್ಟು ಉದಾರತೆ ತೋರಿಸಿದರೂ ಜನತೆ ಸ್ವಾಗತಿಸುತ್ತದೆ. ಸ್ಥಳೀಯ ಸಂಸ್ಥೆಗಳ ಅಧೀನದಲ್ಲಿ ರುವ ಶಾಲೆಗಳ ಉಪಾಧ್ಯಾಯರುಗಳಿಗೆ ಕಾಲಕ್ಕೆ ಸರಿಯಾಗಿ ವೇತನ ಸಲ್ಲುತ್ತಿಲ್ಲವೆಂಬದೂರು ಎಲ್ಲೆಲ್ಲಿಯೂ ಇದೆ. ನಡೆಸಲು ದಕ್ಷತೆ ಇರದ ಶಾಲೆ ಗಳನ್ನು ಸರ್ಕಾರ ವಹಿಸಿಕೊಂಡರೆ ಪುಣ್ಯಬಂದೀತು. ಬೆಂಗಳೂರಿನ ಮಾಗಡಿರೋಡ್ ಬಡಾವಣೆಯಲ್ಲಿ 30 ಸಾವಿರ ಪ್ರಜಾಸಂಖ್ಯೆ ಇದೆ. ಹರಿಜನರು ಕೂಲಿಕಾರರೇ ಹೆಚ್ಚಾಗಿದ್ದಾರೆ. ಹೈ ಸ್ಕೂಲ್ ಕೊಡು ತ್ತೇವೆಂದು ಸರ್ಕಾರ ಒಪ್ಪಿಕೊಂಡಿದೆ. ಈ ವರ್ಷವೇ ಪ್ರಾರಂಭಿಸಿ ಬಡವರ ಮಕ್ಕಳಿಗೆ ವಿದ್ಯಾದಾನ ಮಾಡಿದ ಪುಣ್ಯ ಕಟ್ಟಿಕೊಳ್ಳಿ ಎಂದು ವಿದ್ಯಾಮಂತ್ರಿ ಗಳಿಗೆ ವಿನಂತಿಸುತ್ತೇನೆ. ನ್ಯಾಯಶಾಸ್ತ್ರ ಓದಿರುವ ಮಹಿಳಾ ಪದವೀಧರರಿಗೆ ನ್ಯಾಯ ಇಲಾಖೆಯಲ್ಲಿ ಪ್ರಾತಿನಿಧ್ಯ ದೊರಕುತ್ತಿಲ್ಲ.

ಸರ್ಕಾರಿ ಆಡಳಿತದಲ್ಲಿರುವ ಕೆಲವು ಕಾರ್ಖಾನೆಗಳಲ್ಲಿ ಕೆಲವು ಅಕ್ರಮಗಳೂ ಅಪವ್ಯಯಗಳೂ ನಡೆದಿರುವುದು ಕಂಡುಬಂದಿದೆ. ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್‌ನಲ್ಲಿದ್ದ ಕೆಲವು ಅಕ್ರಮಗಳನ್ನು ಕಳೆದ ಅಧಿವೇಶನದಲ್ಲಿ ಆಧಾರಗಳ ಸಮೇತ ತಿಳಿಸಿದ್ದೆ. ಅಧಿಕಾರವರ್ಗವೂ ಎಚ್ಚರಿಕೆ ಕ್ರಮ ತೆಗೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಈ ಬಗ್ಗೆ ನಮ್ಮ ಮೆಚ್ಚಿಗೆಯುಂಟು. ಇನ್ನೂ ಒಂದೆರಡು ಕಂಪೆನಿಗಳಲ್ಲಿ ಈ ವ್ಯವಹಾರವಿದೆ. ನಿಮ್ಮ ಗಮನಕ್ಕೆ ತರುವ ಮುಂಚೆ ನೀವೇ ಗಮನಕೊಟ್ಟಲ್ಲಿ ಆಡಳಿತ ದಕ್ಷತೆಗೆ ಬೆಂಬಲ ಬರುತ್ತದೆ. ಅರಣ್ಯ ಖಾತೆಯಲ್ಲಿ ಸಾಗವಾನಿ, ಗಂಧದ ಮರದ ಕಳ್ಳಸಾಗಾಣಿಕೆ ನಡದೇ ಇದೆ. ಅರಣ್ಯ ಮಂತ್ರಿಗಳು ನಿಗಾಕೊಟ್ಟಲ್ಲಿ ಲಕ್ಷಾಂತರ ರೂಪಾಯಿಗಳ ಉಳಿತಾಯ ತೋರಿಸಿದ ಕೀರ್ತಿ ಬರುತ್ತದೆ. ಕೆಲವು ಅಕ್ರಮಗಳ ಮತ್ತು ದುಂದು ಖರ್ಚುಗಳ ನಿವಾರಣೆ ಬಗ್ಗೆ ಗೋರ್ವಾಲ ವರದಿಯಲ್ಲಿ, ಕೆಲವು ಉಪಯುಕ್ತ ಸಲಹೆಗಳಿವೆ. ಆ ವರದಿ ಪುರಸ್ಕ ರಿಸಲ್ಪಟ್ಟಿತೋ ತಿರಸ್ಕರಿಸಲ್ಪಟ್ಟಿತೋ ಗೊತ್ತಾಗಲಿಲ್ಲ, ಅದರಲ್ಲಿರುವ ಅತ್ಯಾವಶ್ಯಕ ಸಲಹೆಗಳನ್ನಾದರೂ ಜಾರಿಗೆ ತರುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು.

ಮರಾಮತ್ ಇಲಾಖೆ ಸ್ವಲ್ಪ ಚುರುಕಾಗಿದೆ ಸಂತೋಷ. ಆದರೆ ಆ ಇಲಾಖೆಯಲ್ಲಿರುವಷ್ಟು ದುಂದು ಖರ್ಚುಗಳೂ ಅಪವ್ಯಯವೂ ಮತ್ತಾವ ಖಾತೆ ಗಳಲ್ಲಿಯೂ ಇಲ್ಲ. ಇದನ್ನು ತಪ್ಪಿಸಲು ಪ್ರಯತ್ನಿಸಿದಲ್ಲಿ ಉಳಿತಾಯದ ಒಂದು ಹೊಸ ಬಾಬನ್ನೇ ಮಂತ್ರಿಗಳು ತೋರಿಸಿದಂತಾಗುತ್ತದೆ. ಈ ಬಗ್ಗೆ ಟೆಕ್ನಿಕಲ್ ಆಡಿಟ್ ತಂಡವನ್ನು ಏರ್ಪಡಿಸುವ ಸೂಚನೆಯನ್ನು ಆರ್ಥಿಕ ಮಂತ್ರಿಗಳು ಕೊಟ್ಟಿದ್ದಾರೆ. ಮೀನ ಮೇಷ ನೋಡದೆ ಕೂಡಲೇ ಮಾಡಿರೆಂದು ಕೇಳಿಕೊಳ್ಳುತ್ತೇನೆ. ಅನೇಕ ಬಾಬುಗಳಲ್ಲಿ ಕೋಟಿಗಟ್ಟಲೆ ಬಾಕಿ ತೋರಿಸಿದ್ದೀರಿ. ವಸೂಲಿಗೆ ಚುರುಕಾದ ಕಾರ್ಯಕ್ರಮ ಕೈಕೊಳ್ಳುತ್ತೀ ರೆಂದು ನಂಬಿದ್ದೇನೆ.

ಆಯವ್ಯಯದಲ್ಲಿ ಇಂಥಿಂಥ ಬಾಬುಗಳಿಗೆ ಇಷ್ಟು ಹಣ ವೆಂದು ಮಂಜೂರ್ ಮಾಡುತ್ತೀರಿ. ಆದರೆ ಅತಿ ಮುಖ್ಯವಾದ ಕೆಲವು ಬಾಬುಗಳ ಹಣವು ಅಜಾಗರೂ ಕತೆಯಿಂದಲೋ ತಾಂತ್ರಿಕಜ್ಞರ ಕೊರತೆಯಿಂದಲೋ ಖರ್ಚಾಗದೆ ಪುನಃ ಖಜಾನೆಗೇ ಶರಣಾಗತಿ ಹೊಂದಿ ರುವ ಪ್ರಸಂಗಗಳು ಸರ್ಕಾರಿ ಲೆಕ್ಕಪತ್ರಗಳಲ್ಲಿ ಕಂಡು ಬಂದಿದೆ. ಸಮರ್ಥ ಆಡಳಿತಗಾರರಾಗಬಯಸುವವರು ಹೀಗಾಗದಂತೆ ನೋಡಿಕೊಳ್ಳಬೇಕು. ಹಾಸನದಿಂದ. ಮಂಗಳೂರು, ಹುಬ್ಬಳಿಯಿಂದ ಕಾರವಾರ, ಹರಿಹರ ದಿಂದ ಕೊಟ್ಟೂರು, ಚಾಮರಾಜನಗರದಿಂದ ಸತ್ಯ ಮಂಗಲ—ಈ ರೈಲ್ವೆಗಳು ಆಗುವವರೆಗೂ ನಾಡಿನ ಉನ್ನತಿಗೆ ದೊಡ್ಡ ಕೊರತೆಎಂಬುದು ಎಲ್ಲರೂ ಒಪ್ಪುವ ವಿಚಾರ. ಈ ಕಾರ್ಯಆಗುವ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮ ಕೈಕೊಂಡರೂ ಜನತೆಯ ಹೃತ್ಪೂರ್ವಕ ಬೆಂಬಲವುಂಟು. ನೌಕರರ ಅಂತರ್‌ರಾಜ್ಯ ಸೀನಿ ಯಾರಿಟಿ ಪಟ್ಟಿಯನ್ನು ಕೊನೆಯದಾಗಿ ನಿರ್ಧರಿಸುವಾಗ ಜಾತಿ, ಪಂಥ, ಪ್ರಭಾವಗಳಿಗೆ ಒಳಗಾಗದಂತೆ ನಡೆಯುತ್ತೀರೆಂದು ನಂಬಿದ್ದೇನೆ.

(ಶ್ರೀಮತಿ ನಾಗರತ್ನಮ್ಮ)

ಡಾಲರ್ ತರುವ ಬೆಳೆಗಳಾದ ಏಲಕ್ಕಿ, ಮೆಣಸು, ಲವಂಗ, ಗೋಡಂಬಿ ವಗೈರೆ ಬೆಳೆಗಳ ಬಗ್ಗೆ ಸರ್ಕಾರ ಎಷ್ಟು ಸಹಾಯ, ಪ್ರೋತ್ಸಾಹ ಕೊಟ್ಟರೂ ಜನತೆ ಮೆಚ್ಚುತ್ತದೆ. ಕರಾವಳಿಯು ಸಂಪತ್ತೆನಿಸಿದ ಮೀನಿನ ವ್ಯಾಪಾರವೂ ಅಷ್ಟೆ. ಇದರ ವ್ಯಾಪಾರಕ್ಕಿರುವ ಅಡ್ಡಿ ಆತಂಕಗಳನ್ನು ನಿವಾರಿಸಿ ಈ ವ್ಯಾಪಾರಕ್ಕೆ ತುಂಬ ಪ್ರೋತ್ಸಾಹಿಸಬೇಕಾಗಿದೆ. ಪ್ರಕೃತಿದತ್ತವಾದ ಅರಣ್ಯ ಸಂಪತ್ತು, ಖನಿಜಸಂಪತ್ತು ವಿದ್ಯುತ್ ಸಂಪತ್ತುಗಳ ಹೆಚ್ಚುವಿಕೆಯಾದಷ್ಟೂ ದೇಶದ ಸಂಪತ್ತು ಹೆಚ್ಚುತ್ತದೆ. ಸಾಲಮಾಡಬೇಕಾದ ಪ್ರಮೇಯವೂ ತಪ್ಪುತ್ತದೆ. ಹೇಳುವುದು ಸುಲಭ ಮಾಡುವುದು ಕಷ್ಟವೆಂಬುದು ಗೊತ್ತುಂಟು. ಧೃಢನಿರ್ಧಾರ, ಕಾರ್ಯದಕ್ಷತೆಗಳಿಂದ ನೀವು ಮುಂದುವರಿದರೆ ಇಂದಲ್ಲ ನಾಳೆ ಯಶಸ್ವಿಗಳಾಗುತ್ತೀರಿ. ನಿರ್ಲಕ್ಷತೆ ಬೇಡ ನಿರುತ್ಸಾಹ ಬೇಡ ಎಂದು ವಿನಂತಿಸಲಿಕ್ಕಾಗಿ ಈ ವಿಚಾರ ಹೇಳಿದ್ದೇನೆ.

ಆರ್ಥಿಕ ಮಂತ್ರಿಗಳು ತಮ್ಮ ಮುಕ್ತಾಯ ಭಾಷಣದಲ್ಲಿ "ಇಂದಿನದನ್ನು ಮಾತ್ರ ನಾವು ಮನಸ್ಸಿನಲ್ಲಿಡದೆ, ಮುಂದಿನ ಪೀಳಿಗೆಯ ಪುರೋಭಿವೃದ್ಧಿಯನ್ನು ಬಯಸೋಣ. ಆದಷ್ಟೂ ಮಿತವ್ಯಯದಿಂದ ಜೀವನ ನಡೆಸೋಣ" ಎಂದು ಹೇಳಿದ್ದಾರೆ. ಅತ್ಯುತ್ತಮ ಸೂಚನೆ. ಹೃತ್ಪೂರ್ವಕ ಸ್ವಾಗತಿಸುತ್ತೇನೆ. ಜನತೆಗೆ ಮಿತವ್ಯಯ ಬೋಧಿಸುವ ಸರ್ಕಾರ ಮೊದಲು ಮಿತವ್ಯಯ ಕಲಿತರೆ ಯಥಾರಾಜ, ತಥಾ ಪ್ರಜಾ ಎಂಬಂತೆ ಜನತೆಯೂ ನಿಮ್ಮನ್ನು ಅನುಕರಣ ಮಾಡುತ್ತದೆ. ಮಿತವ್ಯಯದ ಬಗ್ಗೆ ಸರ್ ಎಂ. ವಿಶ್ವೇಶ್ವರಯ್ಯನವರ ಒಂದು ಉದಾಹರಣೆ ಆದರ್ಶವಾಗಿದೆ. ಅವರು ಪ್ರವಾಸ ಹೋದಾಗ್ಗೆ ಎರಡು ಮೋಂಬತ್ತಿಗಳನ್ನು, ಒಂದು ಸರ್ಕಾರದ ಖರ್ಚಿನಲ್ಲಿ ಒಂದು ಸ್ವಂತಖರ್ಚಿನಲ್ಲಿ, ತೆಗೆದುಕೊಂಡು ಹೋಗುತ್ತಿದ್ದರಂತೆ. ಸರ್ಕಾರಿ ಕೆಲಸಮುಗಿದ ಕೂಡಲೇ ಸರ್ಕಾರದ ಮೋಂಬತ್ತಿ ನೊಂದಿಸಿ ತಮ್ಮ ಮೋಂಬತ್ತಿ ಹಚ್ಚುತ್ತಿದ್ದರಂತೆ. ಈ ಆದರ್ಶನೀತಿಯನ್ನು ನೀವೂ ಸಹಾ ಆಚರಣೆಗೆ ತಂದರೆ ದೇಶದ ಮೆಚ್ಚಿಗೆಗೆ ಪಾತ್ರರಾಗುತ್ತೀರಿ. ಈ ನಮ್ಮ ಸುಂದರರಾಜ್ಯದ ಪುನರ್ನಿರ್ಮಾಣ ಕಾರ್ಯದಲ್ಲಿ ಎಲ್ಲರ ನೆರವೂ ಬೇಕೆಂದು ಆರ್ಥಿಕ ಮಂತ್ರಿಗಳು ಕೋರಿದ್ದಾರೆ. ಬರಿಯ ಸುಂದರ ರಾಜ್ಯ ನಮಗೆ ಬೇಕಿಲ್ಲ. ಆರ್ಥಿಕ ಭದ್ರತೆ ಇಲ್ಲದ ಸೌಂದರ್ಯದಿಂದ ಪ್ರಯೋಜನವೇನು? ಸುಂದರ ಸುಭದ್ರರಾಜ್ಯದ ಪುನರ್ನಿರ್ಮಾಣ ಕಾರ್ಯದಲ್ಲಿ ನಮ್ಮ ಸಂಪೂರ್ಣನೆರವು ಉಂಟೆಂದು ಹೇಳಬಯಸುತ್ತೇನೆ. ಕೊನೆಯದಾಗಿ ನನ್ನ ವಿನಂತಿ ಇಷ್ಟೇ: ಹೊಟ್ಟೆ ಬಟ್ಟೆಯ ಚಿಂತೆ। ವಿದ್ಯೆ ಇಲ್ಲದ ಚಿಂತೆ। ಆರೋಗ್ಯ ಮೇಣ್ ವಸತಿಗಳ ಚಿಂತೆಕಳೆವಾ। ಆದರ್ಶದಾಳ್ವಿಯೇ ನಿಮ್ಮ ಗುರಿಯಾಗಿರಲಿ। ಮೈಸೂರು ರಾಜ್ಯಕ್ಕೆ ಕೀರ್ತಿ ಬರಲಿ॥

ಎಂದು ಹಾರೈಸಿ ಆಯವ್ಯಯವನ್ನು ಅನುಮೋದಿಸುತ್ತೇನೆ.

9 A.M.

*Sri T. PARTHASARATHY (Malleswaram).—Mr. Speaker, Sir, I would like to make a few comments on the Budget presented by our Hon'ble Finance Minister. Of course, I waded through the Budget proposals and to be very plain with you, I found it very difficult to understand the financial principles involved. I have read the Finance Minister's speech with interest and I would like to make a few comments on his speech. He has said there should be emotional and psychological integration of the people of all the areas so that they could work and live together with the common objective of building up a State. I find there is no attempt on the part of the Government to bring into our fold the minorities in the integrated areas and make them feel that they are one with the original Mysoreans. I have found a few Congress friends of integrity and repute who have fought for the liberation of our State emphasising that the name of the State should be changed from Mysore to Karnataka. I would plead with you all not to change the name of our State. I feel, just because we are adopted children, we should not change the name of our father. They should adjust to the old name. I only request you to enhance the great name that the State has achieved. I would request the Government that instead of working up to change the name of our State, at least to infuse a spirit of Kannada into our people. I have found recently that Kannada is least spoken by our Government officials.

ಒಬ್ಬರು ಸದಸ್ಯರು.—ತಾವು ಕನ್ನಡದಲ್ಲಿ ಮಾತನಾಡುತ್ತಿಲ್ಲ.

ಶ್ರೀ ಟಿ. ಪಾರ್ಥಸಾರಥಿ.—ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತೇನೆ. Better Expression ಗೋಸ್ಕರ, ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದೇನೆ. I request the Government to evolve early a policy of making Kannada our official language so that at least our people who have become Mysoreans or naturalised Mysoreans would be compelled to speak Kannada. I have found many officers managing their entire life in English.

A MEMBER.—You are not speaking in Kannada!

Sri T. PARTHASARATHY.—If the Hon'ble Speaker permits, I will immediately change to Kannada. I am a Kannada man born and bred here. My mother tongue is also Kannada. In the City of Bangalore itself, I heard

*Asterisk indicates that the remarks or speeches have not been revised by the member concerned.

that Kannada speaking population forms a minority and Telugu and Tamil speaking population is in a majority. My only fear is now that linguistic mania is prevalent, at a later stage, Bangalore may be claimed by Tamilnad with a corridor upto Madras. we shall respect the culture of the minority and the migrated population so that they may also learn our language and culture. I have found that many of the residents of Bangalore do not know Kannada and we try to speak their own language. In the neighbouring States of Madras and Bombay, I have found that nobody speaks in any language other than the language in vogue there. But unfortunately in our State we are very receptive and very kind to people coming from outside and try to learn their own language and speak to them in their own language and thus not make them understand our culture or our language or force them to learn our language completely. So I would like the Government to do the official business as far as possible in Kannada so that at least we will be compelling immigrated population to learn Kannada and make the State look more Kannada than in the mere name of it.

Sri RAMAKRISHNA HEGDE (Sirsi).—is it not better for the Hon'ble Member to set an example by speaking in Kannada itself?

Mr. SPEAKER.—That point has been already settled. He cannot change his language.

Sri T. PARTHASARATHY.—Coming to the pay scales, I would request the Finance Minister that though it is the declared policy of the State and the State Government to bring about the so called socialistic pattern of society, the pay scales are very varied and they do not in any way correspond to the aim of socialistic pattern of society. The pay scales between the integrated areas and erstwhile Mysore State are so varied and sometimes fantastic, if I may say so, that the efficiency of the officers, especially of the lower cadre and middle cadre is very poor. I do not know how the pay scales in our adjoining States were fixed; our pay scale is very hetrogenous. It has worked to the disadvantage of our officers. I wish the Finance Minister would find out individual merit and capacity and adjust the pay scales accordingly.

Sri T. MARIAPPA (Minister for Finance).—In fact our new scales compare very favourably with the new scales notified by the Andhra Government.

Sri T. PARTHASARATHY. I wish it happens. But the Inspector from that area gets Rs. 300 and our Inspector in this area does not get so much. I want the same salary to be given to him. Regarding salaries of higher grade I.A.S. Officers, I do not think in the present set up of our country Rs 2,500 is suitable. When the Ministers themselves get Rs. 800, why should they require Rs. 2,000? The Government of India could very well prescribe that salary to I.A.S. Officers. But we cannot afford that salary. If they want, let them all be taken by the Central Government. We have good officers here. In these days when there is plenty of financial depression and starvation among our people, it looks as though there is a sort of Czarist Russian Government where top officers received fabulous salaries, and the servants in the same office could not have even two meals a day comfortably. The Finance Minister said that he presented a tax-free budget. I have to make a simple comment over it. In my view, he has nothing to tax at all. He has taxed everywhere and so he could not impose any more taxes. Regarding loan we have taken heavy sums. We are only making speeches that we have to build a better society and better Sate for our children. But if we consider the amount of loan that we have left to our children, it comes to thousands of rupees each.

Sri T. MARIAPPA.—We have given them thousands of rupees. I do not think it is scrap. It is so well placed and so well invested that it could only be seen.

ಒಬ್ಬರು ಸದಸ್ಯರು—ಕನ್ನಡಿಯಲ್ಲಿರುವ ಗಂಟು.

Sri T. MARIAPPA.—Capital runs into several crores.

Sri T. PARTHASARATHY.—It is difficult to understand these calculations for people of ordinary intellectual acumen. I would request the Finance Minister to ask the Central Government not to ask for repayment of loans as it would retard our development. It has strained our finances to a very great extent. The next thing is we can get Rs. 50 lakhs by goods traffic. I ask why should we not nationalise goods traffic in lorries. If you can nationalise transport service, why not nationalise the goods service? Instead of Rs. 50 lakhs, we can get Rs. 5 crores to our treasury.

You have spoken about the malfunctioning of local bodies and co-operative institutions and the loans they have taken and not paid and the amouut due from them is certainly very great. I request the Government either to erase such of those local bodies which could not function properly for years and such of the co-operative institutions as are always on the minus side and instead of allowing them to continue to work at a loss without any improvement in those areas, bring up an agency which can directly manage them till they become all right.

In regard to land reforms, I have read with interest, there port presented by our Chief Minister, but I feel it looks as though it is a sporadic piece of communism that has been introduced in this country of ours. Why land only should be distributed? In Bangalore city I know some people who are owning 100 houses and getting a rent of Rs. 5,000 or 10,000. Why not houses be distributed? that is also standing on a piece of land. Why not each man get a house in the city; why should one man alone own a row of houses? Everything envisaged in the land reforms can be very correctly applied to house reform if I could call it. Every man has a right to live. In fact, I am living in a rented house for the past 23 years and I have now received a notice from the landlord stating that he has donated his house to his daughter and that I should vacate the house. If the owner has got 4-5 houses, why should I not have a house? Of course I will pay for it. Some type of reforms may be adopted for industrial earning; these are land reforms and so also other reforms. Why not reforms be introduced in this respect as well?

Regarding food position, I am sorry to say that it is in a deplorable condition. Unless adequate food is grown, I do not think the health of the country will improve. The imported stuffs are like taking *chow chow* food. In fact, the stomach is a very sensitive organ and if you change the type of rice and jola every day you get gastritis. The health of the individual will never be all right unless he gets uniform type or variety of foodgrains.

Regarding population control, Sri Shivappa is very emphatic about family planning. I may say that family planning is not successful at all; it has not gone into the hearts of the people. Two clinics are working in Bangalore City, one in Subedar Chatram Road and the other somewhere else. The places where they are located create a suspicious feeling among the people. I feel it should be attached to any major hospital where people can casually go and learn about this or it may be propagated in Colleges where boys and girls study so that there may be sex education. In fact it should be taught at an early stage. It is done so in America and western countries so that people understand it at an early stage as to what will be the consequences. In our country we do everything after the fair. Sri Nijalingappa, our ex-Chief Minister, was lecturing about family planning in a gathering; unfortunately he has so much to his credit. He has learnt it later. Even Sri Sivappa has learnt it later.

Sri G. SIVAPPA (Chitradurga).—May I know your progress?

Sri T. PARTHASARATHY.—Only one. I learnt it early. If we have to accommodate children in schools and colleges, and considering other economic factors, it is better that we have less number of children and only good children and useful citizens, instead of mass production where all our resources

are directed in just mobilising them into a uniform unit.

Regarding irrigation works and relief works, my request to the Minister for Public Works is, let the money be spent correctly and let us have the benefit early, because in his hands lies the food problem. I have found to my surprise that ragi yield has gone down this time. In fact, that is the basis of the whole economy of our State and unless our Minister minds, unless he gives uniform supply of water, our food position will be very bad. Though the Food Minister works hard, it won't do. Just one month back I went to the constituency of the Finance Minister and I found one road was so bad. I went and asked him 'How can any road in his constituency be bad ?'

Sri T. MARIAPPA.—We care for other roads first.

Sri T. PARTHASARATHY.—The road was full of dust.

Mr. SPEAKER.—That only means that the Finance Minister is more honest.

Sri T. MARIAPPA.—Recently it is notified that this road would be taken over to P.W.D.

Sri H. M. CHANNABASAPPA (Minister for Public Works and Electricity).—To that extent he is disclosing that he is self-sacrificing.

Sri T. PARTHASARATHY.—Not at the expense of the people.

Regarding grant of lands, though you are definitely saying hat land is being given to the landless and political sufferers, it can be misused to a very great extent. I have come to know that people who own lands still get lands in their wife's name or brother-in-law's name.

Sri N. RACHIAH (Minister for Social Welfare, Prohibition and Excise).—As regards the land grant policy, the Central Government has sent us directives that land should be given to landless poor people who are tillers of the soil and the first preference should be given to Harijans. Government are examining this question and in fact, it is already in force.

Sri T. PARTHASARATHY.—I fully endorse what he says. I am not disputing the intention, but I have found that some people have got land unfairly. We have to dissect the claims of the individuals and give lands to landless poor people.

Regarding laying a railway line from Hassan to Mangalore it has been a vexed problem even before the attainment of independence. I have found out that the Andhra State has got the best benefit from the Central Railway Ministry. There has not been an additional railway line in the whole of our State and the railway budget that is allotted to us is very poor. Probably the Railway Board has more Andhra members than others and the Andhras are getting every benefit of it. I I would like the Government to take up the matter and see that the railway line is laid as early as possible. You speak of coastline, fisheries and all that. There is no point in speaking about the importance of fisheries without having the railway line. We have to get the railway lire, having regard to the importance of the areas.

Regarding Backward Classes and Harijans, looking to the attempt made by the new Minister for Backward Classes, I think that the welfare of our Harijans is in safe hands, but I would request the Minister to put in concrete work and see that the standard of living of the Harijans is improved very quickly.

As regards the name 'Backward Classes', I think this name has to be changed to 'Backward Families' I have found out that it is necessary for us to make a census of the backward families in every community and see that the scholarships and other facilities are provided to the backward families and not to those with the name 'Backward Classes', because now the rich among the Backward Classes are getting the benefit.

Regarding health, I have again found that our Finance Minister has been very unkind to the Health Minister because he has provided much less towards public health in the budget. I request the Health Minister to put up a tough fight because he is physically strong and see that he gets sufficient amount. He will get all discredit if he does not get more money from the

(SRI T. PARTHASARATHY)

Finance Minister. It is no use spending any money on any scheme if the health of our nation is not well guarded. We have to guard the health of our Finance Minister himself. I hope that next time the Health Minister will be able to get five times the present amount and he will be able to satisfy us.

Regarding education, our Finance Minister has provided good sums for technical colleges and polytechnics. I have made a brief survey of these institutions and I find that there are more non-Mysoreans in them than Mysoreans. The intention of every one of them is to migrate from our State to the neighbouring States and make their living. If you examine them from the point of view of our needs for technical personnel, I do not think they will satisfy any of our needs for technical personnel. So I feel that while admitting students we have to be as strict as our neighbouring States who admit only those people who will serve their needs. It is our taxpayers' money that is spent on these institutions, and so the benefit of this education should go more to Mysoreans than to non-Mysoreans.

Thank you.

ಶ್ರೀ ಡಿ. ಎಚ್. ರುದ್ರಪ್ಪ (ಕಡೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥಸಚಿವರು ನಮ್ಮ ಮುಂದೆ ಉಳಿತಾಯದ ಆಯವ್ಯಯ ಪಟ್ಟಿಯನ್ನು ಮಂಡಿಸಿರುವುದನ್ನು ಅನುಮೋದಿಸುತ್ತಾ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಸ್ವಾಮಿ, ವಿದ್ಯಾಭ್ಯಾಸದ ವಿಷಯದಲ್ಲಿ ಕೆಲವು ಮಾತುಗಳನ್ನು ಆಡಬೇಕೆಂದು ನನಗೆ ಇಷ್ಟವಿದೆ. ಸುಮಾರು 11 ಕೋಟಿ ರೂಪಾಯಿಗಳನ್ನು ನಾವು ಪ್ರತಿವರ್ಷವೂ ಈ ಬಾಬಿಗೆ ಖರ್ಚುಮಾಡುತ್ತಿರುವಾಗ ಸರ್ಕಾರದವರು ವಿದ್ಯಾಭ್ಯಾಸವನ್ನು ನಮ್ಮ ದೇಶದ ಜನಗಳಿಗೆ ಯಾವರೀತಿಯಲ್ಲಿ ಕೊಡಬೇಕು, ನಮ್ಮ ಜನಾಂಗವನ್ನು ಯಾವ ರೀತಿಯಾಗಿ ನಮ್ಮ ದೇಶದ ಭದ್ರತೆಯನ್ನು ಉಳಿಸುವುದಕ್ಕೋಸ್ಕರ ತಯಾರುಮಾಡಬೇಕು ಎಂಬುದನ್ನು ಆಲೋಚನೆಮಾಡಬೇಕು. ಕೇವಲ ಡಿಗ್ರಿಕೋರ್ಸಿನಲ್ಲಿ ವಿದ್ಯಾಭ್ಯಾಸ ಕೊಟ್ಟು ನಮ್ಮ ಜನಗಳನ್ನು ತಯಾರುಮಾಡುವುದರಲ್ಲಿದ್ದೇವೆ. ಇದರಿಂದ ಮುಂದೆ ಕೆಲವು ಜನಗಳಿಂದ ತೊಂದರೆ ಬರುವ ಸಂದರ್ಭವೂ ಒದಗಬಹುದು. ಅಂದರೆ ವಿದ್ಯಾಭ್ಯಾಸವನ್ನೇ ಕೊಡಬಾರದು ಎಂಬ ಉದ್ದೇಶದಿಂದ ನಾನು ಹೇಳುತ್ತಾ ಇಲ್ಲ. ನ್ಯಾಯವಾಗಿ ನಮ್ಮ ಜನಗಳು ಅವರವರ ಕಾಲಿನಮೇಲೆ ಅವರು ನಿಂತುಕೊಂಡು ಜೀವನಮಾಡಿಕೊಳ್ಳತಕ್ಕ ಮತ್ತು ದೇಶದ ಏಳಿಗೆಗಾಗಿ ದುಡಿಯತಕ್ಕ ಶಕ್ತಿಯನ್ನು ಪಡೆಯುವ ರೀತಿಯಲ್ಲಿ ಟೆಕ್ನಿಕಲ್ ವಿದ್ಯಾಭ್ಯಾಸವನ್ನು ಡಿಗ್ರಿ ಕೋರ್ಸಿನಲ್ಲಿ ಕೊಡುವ ವ್ಯವಸ್ಥೆಮಾಡಬೇಕು. ದೇಶಕ್ಕೆ ಅವರು ಸೇವೆ ಸಲ್ಲಿಸಿ ಅನುಕೂಲವಂತರಾಗಬೇಕು. ಇಲ್ಲದಿದ್ದರೆ ನಾಳೆ ಅವರಿಗೆ ಮನೆಯಲ್ಲಿ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಡಿಗ್ರಿ ಕೋರ್ಸಿನಲ್ಲಿ ಟೆಕ್ನಿಕಲ್ ವಿದ್ಯಾಭ್ಯಾಸವನ್ನು ಕೊಡುವ ಕ್ರಮದಲ್ಲಿ ಅವ್ಯವಸ್ಥೆ ಇರಬಾರದು. ಈರೀತಿಯಾಗಿ ಒಂದು ಪ್ಲಾನನ್ನು ಸುಧಾರಣೆಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಪ್ರೈಮರಿ ಸ್ಕೂಲುಗಳ ವಿಷಯ. ಪ್ರತಿಯೊಂದು ಹಳ್ಳಿಗೂ ಪ್ರಾಥಮಿಕ ವಿದ್ಯಾಭ್ಯಾಸ ಶಾಲೆಗಳನ್ನು ಒದಗಿಸಿಕೊಡಬೇಕೆಂದು ಸರ್ಕಾರದವರು ಒಂದು ಪಾಲಿಸಿಯನ್ನು ಮಾಡಿದ್ದಾರೆ. ಆ ಬಗ್ಗೆ ಹೇಳುವುದಾದರೆ, ನಮ್ಮ ಜನಾಂಗಕ್ಕೆ ಬೇಕಾದಷ್ಟು ಪ್ರೈಮರಿ ಸ್ಕೂಲುಗಳು ಬೇಕು. ನಮ್ಮ ಹಳ್ಳಿಗಾಡುಗಳಲ್ಲಿ ಅನೇಕ ಅವಿದ್ಯಾವಂತರಿದ್ದಾರೆ. ಈ ವಿಷಯವನ್ನು ಉಪಮಂತ್ರಿಗಳಿಗೆ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದ್ದೇನೆ. ಕೇವಲ ಚಿಕ್ಕಮಕ್ಕಳು ಹಳ್ಳಿಗಳ ಕಡೆ ಸ್ಕೂಲುಗಳಿಗೆ ಹೋಗುತ್ತಾ ಇಲ್ಲ. ಅದಕ್ಕೆ ಪ್ರೈಮರಿ ಸ್ಕೂಲುಗಳ ಹಳ್ಳಿಗಳಲ್ಲಿ ಸಾಕಷ್ಟು ಇಲ್ಲದಿರುವುದೇ ಕಾರಣ. ಸರ್ಕಾರದವರು 1,500 ರೂಪಾಯಿಗಳನ್ನು ಕೊಟ್ಟಮೇಲೆ ಪಾಠಶಾಲೆ ಕಟ್ಟಡದ ಖರ್ಚಿನ ಅರ್ಧಹಣವನ್ನು ಆಯಾ ಊರಿನವರು ಕೊಟ್ಟರೆ, ಅಂತಹ ಊರುಗಳಿಗೆ ಮಾತ್ರ ಪ್ರೈಮರಿ ಸ್ಕೂಲುಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದ್ದಾರೆ. ಕೆಲವು ಹಳ್ಳಿಗಳು ಬಹಳ ಕಷ್ಟದೆಶೆಯಲ್ಲಿವೆ. ಒಂದುವೇಳೆ ಹಣವನ್ನು ಗ್ರಾಮಸ್ಥರು ಕೊಡದೆಹೋದರೆ ಏನು ಮಾಡಬೇಕೆಂಬುದನ್ನು ಸರ್ಕಾರದವರು ಆಲೋಚನೆಮಾಡಬೇಕು. ಸರ್ಕಾರದವರೇ ಅದಕ್ಕೆ ತಗಲುವ ಖರ್ಚನ್ನು ಪೂರ್ತಿಯಾಗಿ ಒದಗಿಸಿಕೊಟ್ಟು ಅವರೇ ಪ್ರೈಮರಿ ಪಾಠಶಾಲೆಗಳನ್ನು ಕಟ್ಟಿಸಿಕೊಡಬೇಕು. ಪ್ರತಿಯೊಂದು ಹಳ್ಳಿಗೂ ಒಂದೊಂದು ಪ್ರೈಮರಿ ಸ್ಕೂಲ್ ಇರಬೇಕು ಎಂಬುದಾಗಿ ಕೇಳಿಕೊಳ್ಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ, ಒಂದುಸಾರಿ ವಿದ್ಯಾಇಲಾಖೆಯ ಉಪಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಾಗ್ಗೆ ಪ್ರತಿಯೊಂದು ಸ್ಕೂಲನ್ನೂ ಪರಿಶೀಲಿಸಿದರು. ಬೀರೂರಿನಲ್ಲಿ ಒಂದು ಪ್ರೈಮರಿ ಸ್ಕೂಲಿತ್ತು. ಬಹಳ ಹಳೆಯ ಕಟ್ಟಡ. ಯಾರೋ ಒಬ್ಬರು ಧರ್ಮಾರ್ಥವಾಗಿ ಅದನ್ನು ಕಟ್ಟಿಸಿದ್ದರು. ಅದು ಬಹಳ ಶಿಥಿಲವಾಗಿ ಮಕ್ಕಳು ಓದುವುದಕ್ಕೆ ಅಲ್ಲಿ ತೊಂದರೆಯಾಗಿತ್ತು. ಅದನ್ನು ವಿದ್ಯಾಇಲಾಖೆಯ ಉಪಮಂತ್ರಿಗಳಿಗೆ ತೋರಿಸಿ ಒಳ್ಳೆಯ ಕಟ್ಟಡಬೇಕು ಎಂದು ಕೇಳಿದೆ. ಆಗ ಉಪಮಂತ್ರಿಗಳು ತಕ್ಕ ಸಹಾಯವನ್ನು ಆ ಬಗ್ಗೆ ಮಾಡುತ್ತೇನೆಂದು ಅಲ್ಲಿಯೇ ಭರವಸೆ ಕೊಟ್ಟರು ? ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸೂಚನೆ ಕೊಡುವುದಾಗಿಯೂ ಹೇಳಿದರು. ಆದರೆ ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಯಾವತರಹ ವ್ಯವಸ್ಥೆಯನ್ನೂ ಆ ಬಗ್ಗೆ ಮಾಡಲಿಲ್ಲ. ಇಷ್ಟು ಉದಾಸೀನವಾದರೆ ಹೇಗೆ ? ಕಟ್ಟಡ ಪೂರ್ತಿ ಬಿದ್ದುಹೋಗುವ ಸ್ಥಿತಿಯಲ್ಲಿದೆ. ಈಗ ಅಲ್ಲಿ ಪಾಠಹೇಳುವ ಒಂದು ಸಮಸ್ಯೆ ಬಂದಿದೆ. ಆದ್ದರಿಂದ ಅದಕ್ಕೆ ಸರ್ಕಾರದವರು ತಕ್ಕ ವ್ಯವಸೆ ಮಾಡಬೇಕು.

ಇನ್ನು ಹೈಸ್ಕೂಲುಗಳ ವಿಷಯ. ಈಗ ಹೈಸ್ಕೂಲುಗಳಲ್ಲಿ ಮೂರು ತರಹ ಇವೆ. ಒಂದು ಮುನಿಸಿಪಲ್ ಹೈಸ್ಕೂಲ್, ಇನ್ನೊಂದು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲ್, ಮತ್ತೊಂದು ಗೌರ್ನಮೆಂಟ್

ಹೈಸ್ಕೂಲ್. ಮ್ಯೂಚುಯಲ್ ಟ್ರಾನ್ಸ್‌ಫರ್ ಇಲ್ಲ. ಇವರ ಸಂಬಳಸಾರಿಗೆ ಹೆಚ್ಚುಕಡಮೆ ಇರುವುದರಿಂದ ಪ್ರತಿಯೊಂದು ಹಳ್ಳಿಯಲ್ಲೂ ಸರ್ಕಾರೀ ಶಾಲೆಗಳನ್ನು ಕೊಡಬೇಕು. ಯಾರುಯಾರು ಎಲ್ಲೆಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ತಯಾರಿದ್ದಾರೋ, ಅಂತಹ ಸ್ಥಳಗಳಲ್ಲಿ ಸ್ಕೂಲುಗಳನ್ನು ಕೊಡಿ. ಬೇರೆ ಸ್ಕೂಲುಗಳಿಗೆ ವರ್ಗ ಮಾಡುವುದಕ್ಕೆ ಒಂದು ಕಾನೂನು ಮಾಡಬೇಕು. ಮುನಿಸಿಪಲ್ ಹೈಸ್ಕೂಲ್‌ಗಳಲ್ಲಿರುವವರು ಎಷ್ಟೇ ವರ್ಷಗಳಾದರೂ ಅಲ್ಲಿಯೇ ಇರುವುದು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿರುವವರು ಡಿಸ್ಟ್ರಿಕ್ಟ್‌ನಲ್ಲಿಯೇ ಇರುವುದು. ಇದರಿಂದ ಉಪಾಧ್ಯಾಯರುಗಳ ಸ್ಟ್ಯಾಂಡರ್ಡ್ ಸರಿ ಹೋಗುವುದಿಲ್ಲ. ಮಕ್ಕಳಿಗೆ ಪಾಠಹೇಳಿಕೊಡಲು ಅನುಕೂಲವಾಗುವುದಿಲ್ಲ. ಬಹಳ ತೊಂದರೆಯಾಗುತ್ತದೆ. ನಮ್ಮ ಊರಿನಲ್ಲಿ ಹತ್ತು ವರ್ಷಗಳಿಂದ ಮುನಿಸಿಪಲ್ ಹೈಸ್ಕೂಲ್ ಒಂದನ್ನು ನಡೆಸುತ್ತಿದ್ದಾರೆ. ಅಲ್ಲಿ ಪಾಠಪ್ರವಚನಗಳು ಎಷ್ಟರಮಟ್ಟಿಗೆ ನಡೆಯುತ್ತಿವೆ ಎಂಬುದನ್ನು ನೋಡಿದರೆ, ಅದರಿಂದಲೇ ಮಕ್ಕಳಿಗೆ ಒಂದು ಕುಂದಕ ಎಂದು ತಿಳಿದಿದ್ದೇನೆ. ಆದ್ದರಿಂದ ಸರ್ಕಾರದವರು ಏನಾದರೂ ಒಂದು ಸ್ಕೀಮನ್ನು ಹಾಕಿಕೊಂಡು ಖಂಡಿತವಾಗಿ ಪ್ರತಿಯೊಂದು ಹೈಸ್ಕೂಲನ್ನೂ ಒಂದೇಮಟ್ಟಕ್ಕೆ ಇರುವ ಹಾಗೆ ಮಾಡಿ ಅಲ್ಲಲ್ಲಿ ಮ್ಯೂಚುಯಲ್ ಟ್ರಾನ್ಸ್‌ಫರ್ಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಿಡಲ್‌ಸ್ಕೂಲ್ ಮತ್ತು ಪ್ರೈಮರಿ ಸ್ಕೂಲುಗಳಲ್ಲಿ ಎಲ್ಲ ಕಡೆಯಲ್ಲಿಯೂ ಉಪಾಧ್ಯಾಯರಿಗೆ ಬಹಳ ತೊಂದರೆಯಾಗಿರುತ್ತದೆ. ಉಪಾಧ್ಯಾಯರಿಗೆ ಟ್ರೈನಿಂಗ್ ಮೊದಲು ಕೊಡಬೇಕು. ತರಗತಿಗಳಲ್ಲಿ ಅನ್‌ಟ್ರೈನ್ಡ್ ಉಪಾಧ್ಯಾಯರನ್ನು ನೇಮಿಸುವುದರಿಂದ, ಅಂಥವರನ್ನೇ ಅನೇಕ ಕಡೆಗಳಲ್ಲಿಟ್ಟಿರುವುದರಿಂದ ವಿದ್ಯಾಭ್ಯಾಸಕ್ಕೇ ಬಹಳ ತೊಂದರೆಯಾಗಿದೆ. ಪ್ರೈಮರಿ ಪಾಠಶಾಲೆಗಳಲ್ಲಿ ಅಂತಹ ಅಶಿಕ್ಷಿತ ಉಪಾಧ್ಯಾಯರುಗಳನ್ನು ಇಡುವುದು ಬಹಳ ಅನ್ಯಾಯ. ಇದರಿಂದ ಅವರಿಗೇ ಮಕ್ಕಳನ್ನು ತಯಾರುಮಾಡುವುದಕ್ಕೆ ಉತ್ತೇಜನವಿರುವುದಿಲ್ಲ. ಲೋಕಲ್ ಕ್ಯಾಂಡಿಡೇಟುಗಳನ್ನು ಉಪಾಧ್ಯಾಯರಾಗಿ ನೇಮಿಸುವುದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಹುಡುಗರಿಗೆ ಪಾಠಪ್ರವಚನಗಳನ್ನು ಸರಿಯಾಗಿ ಮಾಡುವುದಿಲ್ಲ. ಆಯಾ ಸ್ಥಳದಲ್ಲಿರತಕ್ಕ ಉಪಾಧ್ಯಾಯರೇ ಆಯಾ ಊರಿನಲ್ಲಿರತಕ್ಕ ಪಾಠಶಾಲೆಗಳಲ್ಲಿಯೇ ಪಾಠಹೇಳಿಕೊಡತಕ್ಕ ವ್ಯವಸ್ಥೆಯನ್ನು ಮಾಡಲು ಪ್ರಯತ್ನಿಸಬೇಕು. ಇದರಿಂದ ಅನ್ಯಾಯವಾಗುವುದನ್ನು ತಪ್ಪಿಸಬಹುದೆಂದು ನಾನು ಕೇಳಿಕೊಳ್ಳುತ್ತೇನೆ. ಬಡ್ಜೆಟ್ಟಿನಲ್ಲಿ ಸ್ಕೂಲುಗಳ ಫರ್ನೀಚರ್‌ಗೋಸ್ಕರವಾಗಿ ಬೇಕಾದಷ್ಟು ಹಣವನ್ನು ಒದಗಿಸಿದ್ದರೂ ಕೂಡ, ನಾನು ನೋಡಿರುವ ಪ್ರಕಾರ, ಎಷ್ಟೋ ಸ್ಕೂಲುಗಳಲ್ಲಿ ಫರ್ನೀಚರ್ ಇಲ್ಲದೆಯೇ ಮಕ್ಕಳು ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದಾರೆ, ಆದ್ದರಿಂದ ಫರ್ನೀಚರ್‌ಗಳನ್ನು ಆದಷ್ಟು ಜಾಗ್ರತೆ ಹೆಚ್ಚುಹೆಚ್ಚಾಗಿ ಪ್ರೈಮರಿ ಶಾಲೆಗಳಿಗೆಲ್ಲಾ ಸರಬರಾಯಿಮಾಡಬೇಕು. ಅನೇಕ ಮಿಡಲ್ ಸ್ಕೂಲುಗಳಲ್ಲಿ ಹೊಸಕರ್ಣಾಟಕವಾಗಿ ಎರಡು ವರ್ಷಗಳಾದರೂ ಇನ್ನೂ ಹೊಸ ಮೈಸೂರಿನ ಭೂಪಟಗಳೇ ಇಲ್ಲ. ಮ್ಯಾಪ್ಸ್ ಇಲ್ಲದೇಹೋದರೆ ಶಿಕ್ಷಕರು ಹುಡುಗರಿಗೆ ಏನು ಪಾಠ ಹೇಳುತ್ತಾರೆ? ಆದ್ದರಿಂದ ರಾಜ್ಯದ ಎಲಾ ಸ್ಕೂಲುಗಳಿಗೂ ವಿಶಾಲ ಮೈಸೂರಿನ ಭೂಪಟಗಳನ್ನು ಕೂಡಲೆ ಸರಬರಾಜುಮಾಡಬೇಕು.

ಇನ್ನು ಟೆಕ್ಸ್ಟ್ ಬುಕ್ಸ್ ವಿಷಯ. ಶಾಲೆಗಳು ಪ್ರಾರಂಭವಾಗಿ ಮೂರು-ನಾಲ್ಕು ತಿಂಗಳುಗಳಾದ ನಂತರ ಶಿಕ್ಷಕರಿಗೆ ಟೆಕ್ಸ್ಟ್ ಬುಕ್ಸ್ ಸಪ್ಲೈ ಆದರೆ, ಯಾವರೀತಿ ಪಾಠ ಹೇಳಬೇಕೆಂಬುದನ್ನು ಸರ್ಕಾರದವರೇ ಆಲೋಚನೆಮಾಡಬೇಕು.

ಇನ್ನು ವ್ಯವಸಾಯ ವಿಷಯದಲ್ಲಿ ಎರಡು ಸಲಹೆಗಳನ್ನು ಕೊಡುತ್ತೇನೆ. ಈಗ ಸರ್ಕಾರದವರು ಹುಮ್ಮನಸ್ಸಿನಿಂದ ಒಂದು ಕೋ-ಆಪರೇಟಿವ್ ಫಾರಂ ಸೊಸೈಟಿ ಮಾಡುವುದಕ್ಕೋಸ್ಕರ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸಿದ್ದಾರೆ. ಅವರ ಒಂದು ರಿಪೋರ್ಟನ್ನೂ ಸಹ ನಾನು ನೋಡಿದ್ದೇನೆ. ಅದರಿಂದ ಏನೂ ಪ್ರಯೋಜನವಿಲ್ಲ.

9-30 A.M.

ಜಮೀನುಗಳನ್ನು ಮಾತ್ರ ಕೊಟ್ಟು ಅದರಲ್ಲಿ ಬೆಳೆಯಾಗದಿದ್ದರೆ ಅದರಿಂದ ಸರ್ಕಾರಕ್ಕೆ ಮಾತ್ರ ಲುಕ್ಸಾನು ತಪ್ಪುವುದಿಲ್ಲ. Co-operative farming ಮಾಡಬಾರದೆಂದು ಹೇಳುವುದಿಲ್ಲ. ಸ್ವಲ್ಪ ಉತ್ಸಾಹದಿಂದ, ಶ್ರದ್ಧೆಯಿಂದ ಮಾಡಿದರೆ ನಿಜವಾಗಿಯೂ ಅನುಕೂಲವಾಗಬಹುದು. ನಮ್ಮ ಜನರಿಗೆ education ಬೇಕು. ನಮ್ಮ ರೈತರು ಓದಿದವರಲ್ಲ, ಒಬ್ಬರಲ್ಲಿ ಒಬ್ಬರು ಹೊಂದಿಕೊಂಡು ಕೆಲಸಮಾಡತಕ್ಕ ಮನಸ್ಸು ಅವರಲ್ಲಿಲ್ಲದೆ ಇರುವುದು co-operative farming ಅಯಶಸ್ವಿಯಾಗುವುದಕ್ಕೆ ಮೊದಲನೆಯ ಕಾರಣ. ನಮ್ಮ ತಾಲ್ಲೂಕಿನಲ್ಲಿ ಶಿವಾಜಿ ಕೋ-ಆಪರೇಟಿವ್ ಫಾರ್ಮಿಂಗ್ ಎಂದು ಒಂದು ಸೊಸೈಟಿಯನ್ನು ಕೆಲವು ಮರಾಠಿ ಜನರು ಮಾಡಿಕೊಂಡು ತಮಗೆ ಜಮೀನು ಬೇಕೆಂದು ಸರ್ಕಾರವನ್ನು ಕೇಳಿದರು. ನಾನೂ ಸಹ ಈ ವಿಚಾರದಲ್ಲಿ ಕೇಳಿದ್ದೇನೆ. ಆ ಜನರು ಸಾಗುವಳಿ ಮಾಡುವುದಕ್ಕಾಗಿ ಜಮೀನು ಕೊಡಿ, ಸೊಸೈಟಿಯವರು ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತಾರೆಂದರೆ ಜಮೀನಿಲ್ಲ. ಸಾಗುವಳಿ ಮಾಡುವವರಿಗೆ ಜಮೀನಿಲ್ಲ. ಜಮೀನು ಕೊಟ್ಟು ಕೆಲಸಮಾಡಿ ಎಂದು ಹೇಳುತ್ತಿರುವ ಕಡೆ ಜನರು ಉತ್ಸಾಹದಿಂದ ಕೆಲಸಮಾಡುವುದಿಲ್ಲ. ಈ ರೀತಿಯಾದರೆ ಯಾವ ರೀತಿಯಾಗಿ ಕೋ-ಆಪರೇಟಿವ್ ಫಾರ್ಮಿಂಗ್ ಮಾಡುತ್ತಾರೆ? ನಾನು ಪ್ರಯೋಗಾರ್ಥವಾಗಿ ಸಾಗುವಳಿ ಮಾಡಿಸಬೇಕೆಂದು ಎಷ್ಟೋ ಕೇಳಿದ್ದೇನೆ. ನಮ್ಮಲ್ಲಿ ಒಳ್ಳೆಯ ಜಮೀನಿದೆ. ಅಮೃತಮಹಲ್ ಕಾವಲಿನಲ್ಲಿ ಸಾವಿರಾರು ಎಕರೆಗಳ ಜಮೀನನ್ನು ಮಾನ್ಯ ಚನ್ನಬಸಪ್ಪನವರು ಹಿಂದೆ ರಿಲೀಸ್ ಮಾಡಿದ್ದಾರೆ. Experiment ಮಾಡಿಸಬೇಕು, ಚೆನ್ನಾಗಿ ನಡೆಯುತ್ತದೆಯೇ ಇಲ್ಲವೇ ಎಂಬುದನ್ನು ನೋಡೋಣ ವೆಂದರೆ ಜಮೀನು ಕೊಟ್ಟಿಲ್ಲ. ಇದರಲ್ಲಿ ನನ್ನ ಸ್ವಾರ್ಥವೇನೂ ಇಲ್ಲ. 40-50 ಸಂಸಾರಗಳು ಇರುವುದರಿಂದ, ಅದರಲ್ಲಿ ಉತ್ಸಾಹವೂ ಇರುವುದರಿಂದ ಅವರು ಕೋ-ಆಪರೇಟಿವ್ ಫಾರ್ಮಿಂಗ್ ಮಾಡುವುದಕ್ಕೆ ತಯಾರಾಗಿರುವುದರಿಂದ ನಾನು ಈ ವಿಚಾರದಲ್ಲಿ ಜಮೀನು ಕೊಡಬೇಕೆಂದು ಕೇಳಿದೆ. ಸರ್ಕಾರದವರು ಇದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುತ್ತಾರೆಂದು ನಂಬಿದ್ದೇನೆ.

ಸರ್ಕಾರದವರಲ್ಲಿ ಇರುವ ಬುಲ್‌ಡೋಜರ್‌ಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಎಲ್ಲ ಬುಲ್‌ಡೋಜರುಗಳನ್ನೂ ರಿಪೇರಿ ಮಾಡುತ್ತಿದ್ದೇವೆಂದು ಹೇಳುತ್ತಿರುವುದೇ ಆಗಿದೆ. ಕೊನೆಯ ಪಕ್ಷ ತಾಲ್ಲೂಕಿಗೆ ಒಂದೊಂದು ಬುಲ್‌ಡೋಜರ್ ಆದರೂ ಇಟ್ಟುಕೊಳ್ಳಬೇಕು. ಆಹಾರ ಪೂರೈಕೆಯ ವಿಚಾರದಲ್ಲಿ ವ್ಯವಸಾಯ ಇಲಾಖೆಯವರು ಅಂಕಿಅಂಶಗಳನ್ನು ಕೊಡುತ್ತಾರೆ. ಅದನ್ನು ಮಂತ್ರಿಗಳು ಈ ಸಭೆಯಲ್ಲಿ ಓದಿಬಿಟ್ಟು ಆಹಾರ ಉತ್ಪತ್ತಿಯಾಗುತ್ತಿದೆ, ಅದರಿಂದ ನೆಮ್ಮದಿಯಾಗುತ್ತದೆ ಎಂದು ಸಮಾಧಾನ ಹೇಳುತ್ತೀರಿ. ಭಾರಿ ವ್ಯವಸಾಯ

(ಶ್ರೀ ಡಿ. ಎಚ್. ರುದ್ರಪ್ಪ)

ಗಾರರು ಬೇಕಾದರೆ ಕೆಲವು ಯಂತ್ರೋಪಕರಣಗಳನ್ನು ತರಿಸಿ ಇಟ್ಟುಕೊಳ್ಳಬಹುದು. ಆದರೆ ಈಗಿನ ಕಾಲದಲ್ಲಿ ಅದೂ ಬಹಳ ಕಷ್ಟವಿದೆ. ಒಂದು ಟ್ರ್ಯಾಕ್ಟರಿನ ಬೆಲೆ ಇಪ್ಪತ್ತು ಸಾವಿರ ರೂಪಾಯಿಗಳಾಗುತ್ತವೆ. ಭೂಸುಧಾರಣೆ ಜಾರಿಗೆ ಬಂದರೆ ಯಾರೂ ಟ್ರ್ಯಾಕ್ಟರನ್ನು ಇಟ್ಟುಕೊಂಡು ಕೆಲಸಮಾಡುವುದಕ್ಕಾಗುವುದಿಲ್ಲ. ಕೊನೆಯಪಕ್ಷ ತಾಲ್ಲೂಕುಗಳಲ್ಲಿ ಎರಡು-ಮೂರು ಟ್ರ್ಯಾಕ್ಟರುಗಳು ಮತ್ತು ಎರಡು-ಮೂರು ಬುಲ್‌ಡೋಜರುಗಳನ್ನು ಇಟ್ಟರೆ ಜನಗಳಿಗೆ ಅನುಕೂಲವಾಗುತ್ತದೆ. ಸರ್ಕಾರದವರು ಇದಕ್ಕೆ ಗಮನಕೊಡಬೇಕು. ಹಿಂದೆ ಟ್ರ್ಯಾಕ್ಟರುಗಳನ್ನು ತೆಗೆದುಕೊಂಡದ್ದರಿಂದ ಲುಕ್ಸಾನಾಯಿತು ಎಂದು ಹೇಳಬಹುದು. ಹೈರ್ ಪರ್ಚೇಸ್‌ಮೇಲೆ ಇವುಗಳನ್ನು ಕೊಟ್ಟರೆ ಬಾಡಿಗೆಗೆ ಉಪಯೋಗಿಸುವವರು ತೆಗೆದುಕೊಳ್ಳುತ್ತಾರೆಯೇ ಹೊರತು ಭೂಮಿಯನ್ನು ಉಳುವವರು ಯಾರೂ ತೆಗೆದುಕೊಳ್ಳುವುದಿಲ್ಲ. ಹೊಸದಾಗಿ ಜಮೀನನ್ನು ರೈತರಿಗೆ ಕೊಟ್ಟಾಗ, ಅದನ್ನು ಒಂದು ಮಟ್ಟಕ್ಕೆ ಸರಿಯಾಗಿ ಮಾಡಬೇಕಾದರೆ ತಗ್ಗುದಿಣ್ಣೆಗಳನ್ನೆಲ್ಲ ಸರಿಪಡಿಸಬೇಕು. ಇದಕ್ಕೆ ಯಂತ್ರಗಳ ಸಹಾಯ ಅಗತ್ಯ. ಆದುದರಿಂದ ಬುಲ್‌ಡೋಜರ್ ಮತ್ತು ಟ್ರ್ಯಾಕ್ಟರ್‌ಗಳನ್ನು ಸರ್ಕಾರದವರು ಒದಗಿಸಬೇಕು. ಹೊಸ ಯಂತ್ರಗಳನ್ನು ತರಿಸಿ ಪ್ರತಿ ಜಿಲ್ಲೆಗೂ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವ್ಯವಸಾಯೋಪಕರಣಗಳ ವಿಷಯ ಹೇಳಬೇಕಾದರೆ, ವ್ಯವಸಾಯಕ್ಕೆ ಬೇಕಾದಂಥ ಕಬ್ಬಿಣದ ಸಾಮಾನುಗಳು ಸರಿಯಾದ ಸಮಯದಲ್ಲಿ ಸಿಕ್ಕುವುದಿಲ್ಲ. ಸೊಸೈಟಿಗಳಿಗೆ ಕೋಟಾ ಸರಿಯಾಗಿ ಬರುತ್ತಿಲ್ಲ. ನಮ್ಮ ಮೈಸೂರು ದೇಶಕ್ಕೆ ಈಚೆಗೆ ಕೋಟಾ ಬಂದಿದೆಯೋ ಎನ್ನುವುದೂ ಗೊತ್ತಿಲ್ಲ.

ಶ್ರೀ ಕೆ. ಎಫ್. ಪಾಟೀಲ್ (ವ್ಯವಸಾಯ ಇಲಾಖೆಯ ಮಂತ್ರಿಗಳು).—ಮೂರು ಸಾವಿರ ಟನ್ ಬಂದಿದೆ.

ಶ್ರೀ ಡಿ. ಎಚ್. ರುದ್ರಪ್ಪ.—ಅದು ಬಂದು ಒಂದು ತಿಂಗಳಾಗಿದೆ. ಸೊಸೈಟಿಗಳಿಗೆ ಇನ್ನೂ ಬಂದಿಲ್ಲ. ಕಬ್ಬಿಣ ಸಮಯದಲ್ಲಿ ಒದಗುತ್ತಿಲ್ಲ. ಕಬ್ಬಿಣ ಬೇಕಾದಾಗ ನಮಗೆ ದೊರೆಯದೆ ಇದ್ದರೆ, ಯಾವಾಗಲೋ ಕೊಟ್ಟರೆ ಏನು ಪ್ರಯೋಜನ? ವ್ಯವಸಾಯದ ಉಪಕರಣಗಳನ್ನು ಪ್ರತಿಯೊಂದು ಸೊಸೈಟಿಗೂ ಕಾಲಕ್ಕೆ ಸರಿಯಾಗಿ ಕೊಡಬೇಕು. ಡೈರೆಕ್ಟರವರನ್ನು ಕೇಳಿದರೆ ಅವರು ಒಂದುರೀತಿ ಹೇಳುತ್ತಾರೆ. ತಾಲ್ಲೂಕ್ ಮಟ್ಟದಲ್ಲಿ ಮಲ್ಟಿಪರ್ಪಸ್ ಸೊಸೈಟಿಗಳಿಗೆ ಕೊಡುತ್ತೇವೆ. ಅವರಿಂದ ತಾಲ್ಲೂಕಿನಲ್ಲಿರುವ ಇತರ ಸೊಸೈಟಿಗಳವರು ತೆಗೆದುಕೊಳ್ಳಬೇಕು. ಅದಕ್ಕೆ ಪರ್ಮಿಟ್ ಕೊಡುತ್ತೇವೆ ಎಂದು ಹೇಳುತ್ತಾರೆ? ಪರ್ಮಿಟ್ ಪ್ರಕಾರ ತಾಲ್ಲೂಕಿನಿಂದ ಉಪಕರಣಗಳನ್ನು ತೆಗೆದುಕೊಂಡು ಹೋಗಬೇಕಾದರೆ ಅದಕ್ಕೆ ಬೀಳುವ ಸಾಗಾಣಿಕೆಯ ಖರ್ಚನ್ನು ಕೊಡುವವರು ಯಾರು ! ಸರ್ಕಾರದವರು ಕೊಡಬೇಕೇ, ಯಾರು ಕೊಡಬೇಕು? ಪ್ರತಿಯೊಂದು ಸೊಸೈಟಿಗೂ ಕಬ್ಬಿಣವನ್ನು ಕೊಟ್ಟು ಅದರಿಂದ ರೈತರಿಗೆ ಸರಿಯಾದ ದರದಲ್ಲಿ ಕಬ್ಬಿಣವು ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಒಂದು ಸರ್ಕ್ಯುಲರ್ ಹೊರಡಿಸಿ M.P.C.S. ಸೊಸೈಟಿಗಳವರು ಹೋಲ್‌ಸೇಲ್ ದರದ ಪ್ರಕಾರ ತಾಲ್ಲೂಕಿನ ಇತರ ಸೊಸೈಟಿಗಳಿಗೆ ಕೊಡಬೇಕು ಮತ್ತು ಆಯಾ ಸೊಸೈಟಿಗಳವರು ರೈತರಿಗೆ ನಿಗದಿಯಾದ ದರದಲ್ಲಿ ಉಪಕರಣಗಳನ್ನೂ ಕಬ್ಬಿಣವನ್ನೂ ಒದಗಿಸಬೇಕು. ಇಲ್ಲದೆ ಹೋದರೆ M.P.C.S. ಸೊಸೈಟಿ ಆಡಳಿತ ವರ್ಗದವರು ಇತರ ಸೊಸೈಟಿಗಳಿಗೆ ಕಬ್ಬಿಣವನ್ನು ಕೊಡದೆ ತಾವೇ ಅದನ್ನೆಲ್ಲ ಚಿಲ್ಲರೆಯಾಗಿ ಮಾರಿ ಲಕ್ಷಾಂತರ ರೂಪಾಯಿ ಲಾಭವನ್ನು ಸಂಪಾದಿಸುವುದಕ್ಕೆ ಸಾಧ್ಯವಾಗಿದೆ. ಸರ್ಕಾರದವರು ಈ ಬಗ್ಗೆ ಗಮನವನ್ನು ಕೊಟ್ಟು ಪ್ರತಿಯೊಂದು ಸೊಸೈಟಿಗೂ ಕಬ್ಬಿಣ ಸಿಕ್ಕುವಹಾಗೆ ಮಾಡಿ ಅವುಗಳು ಕೆಲಸಮಾಡುವುದಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ಕೆಲವು ಸೊಸೈಟಿಯವರು 100-200 ಟನ್ ಕಬ್ಬಿಣವನ್ನು ಮಾರುತ್ತಾರೆ, ಕೆಲವರಿಗೆ ಸಿಕ್ಕುವುದೇ ಇಲ್ಲ. ಹೀಗಾಗಬಾರದು. ಆದುದರಿಂದ ಸರಿಯಾದ ಸೂಚನೆಗಳನ್ನು ಕೊಟ್ಟು ರೈತರಿಗೆ ಕಬ್ಬಿಣ ಸರಿಯಾದ ಧಾರಣೆಗೆ ಸಿಕ್ಕುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕಬ್ಬಿಣದಲ್ಲಿ ಜನರಲ್ ಕೋಟಾ ಎಂದು ಮಾಡಿದ್ದಾರೆ. ಕಬ್ಬಿಣದ ಸರಳುಗಳನ್ನು ಸೊಸೈಟಿಗಳ ಮೂಲಕ ಕೊಡಿ ಎಂದರೆ ಅದನ್ನು ಸ್ಟಾಕಿಸ್ಟರಿಗೆ ಕೊಡುತ್ತಾರೆ. ಹಿಂದಿನಿಂದ ಯಾರು deal ಮಾಡುತ್ತಿದ್ದರೋ ಅವರಿಗೆ ಮಾತ್ರ ಕೊಡುತ್ತಾರೆ. ಕೇಳಿದರೆ ಕೇಂದ್ರ ಸರ್ಕಾರದವರು ಕೋಟಾ ಕೊಡುತ್ತಾರೆಂದು ಹೇಳುತ್ತಾರೆ. ಈ ಸ್ಟಾಕಿಸ್ಟರು ಹೆಚ್ಚು ಬೆಲೆಗೆ ಕಬ್ಬಿಣವನ್ನು ಮಾರುತ್ತಾರೆ. ಹೆಚ್ಚಿಗೆ ದುಡ್ಡು ಕೊಟ್ಟವರಿಗೆ ಮಾತ್ರ ಕಬ್ಬಿಣ ಸಿಕ್ಕುತ್ತದೆ. ಸೊಸೈಟಿಗಳ ಮುಖಾಂತರ ಮಾರುವ ವ್ಯವಸ್ಥೆಯನ್ನು ಮಾಡಿರಿ ಎಂದರೆ ಸೊಸೈಟಿಗಳಿಗೆ ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಹೀಗಾದರೆ ಜನಗಳಿಗೆ ಒಳ್ಳೆಯದನ್ನು ಮಾಡಿದ ಹಾಗಾಯಿತೇ ?

ಶ್ರೀ ಕುಂದೂರು ರುದ್ರಪ್ಪ (ಚನ್ನಗಿರಿ).—ವ್ಯವಸಾಯ ಶಾಖೆಯ ಮಂತ್ರಿಗಳು ಮೂರು ಸಾವಿರ ಟನ್ ಕಬ್ಬಿಣದ ಕೋಟಾ ಬಂದಿದೆ ಎಂದು ಹೇಳಿದರು. ಇದನ್ನು ರೈತರಿಗೆ ವಿಲೇವಾರಿ ಮಾಡುತ್ತಾರೆಯೇ ಅಥವಾ ಬ್ಲಾಕ್‌ಮಾರ್ಕೆಟ್‌ನಲ್ಲಿ ಮಾರುವುದಕ್ಕೆ ಕೊಡುತ್ತಾರೆಯೇ ! ಬ್ಲಾಕ್ ಮಾರ್ಕೆಟ್‌ನಲ್ಲಿ 800 ರೂಪಾಯಿ ಪ್ರಕಾರ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಫ್. ಪಾಟೀಲ್.—ಮೂರು ಸಾವಿರ ಟನ್ ಕಬ್ಬಿಣ ಬಂದಿದೆ ಎಂದು ಹೇಳಿದೆ ಅಷ್ಟೆ. ಹೆಚ್ಚಿನ ಟೀಕೆಗೆ ಈಗ ಉತ್ತರ ಹೇಳುವುದಿಲ್ಲ. ಕೋ-ಆಪರೇಟಿವ್ ಸೊಸೈಟಿಗಳ ಮೂಲಕವಾಗಿ ಅಥವಾ ವ್ಯವಸಾಯದ ಇಲಾಖೆಯ ಮೂಲಕ ಕೊಡುವಾಗ ಇತರರು handle ಮಾಡುವುದಿಲ್ಲ.

ಶ್ರೀ ಡಿ. ಎಚ್. ರುದ್ರಪ್ಪ.—ಆದರೆ influence ಇರುವವರಿಗೆ ಮಾತ್ರ ಕೊಡುವುದಕ್ಕಲ್ಲ. ಪ್ರತಿಯೊಬ್ಬರಿಗೂ ಅನುಕೂಲವಾಗಬೇಕು. ಹೀಗಾಗಬೇಕಾದರೆ ಸೊಸೈಟಿಗಳ ಮೂಲಕ ಕಬ್ಬಿಣ ಜನರಿಗೆ ಸಿಕ್ಕುವಂತೆ ಮಾಡಬೇಕು. ಅದು ಸಾಧ್ಯವಿಲ್ಲದ ಪಕ್ಷದಲ್ಲಿ ಸೊಸೈಟಿಗಳನ್ನು ಏಕೆ ಮಾಡಿದ್ದೀರಿ? ಅವನ್ನು abolish ಮಾಡಿ. ಯಾವುದೋ ಕಾಲದಲ್ಲಿದ್ದಂಥ ಕಂಟ್ರೋಲ್ ಪದ್ಧತಿಯನ್ನು ಈಗಲೂ ದೇಶದಲ್ಲಿ introduce ಮಾಡುತ್ತಿದ್ದಾರೆ. ಹೀಗಾದರೆ ಜನಗಳಿಗೆ ನಂಬಿಕೆ ಯಾವ ರೀತಿ ಬರುತ್ತದೆಂದು ಕೇಳುತ್ತೇನೆ.

ಸ್ವಾಮಿ, ಹೆಚ್ಚಿಗೆ ವಿಷಯ ಹೇಳುವುದಕ್ಕೆ ಹೋಗುವುದಿಲ್ಲ. ಸ್ಟೇಟ್ ಫಾರಂ ಒಂದು ವಿಷಯ ಹೇಳುತ್ತೇನೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಬೀಜಗಳನ್ನು ಬಹಳ ಚೆನ್ನಾಗಿ ಬೆಳೆದುಕೊಡಬೇಕು, ಒಳ್ಳೆಯ ಬೀಜಗಳನ್ನು ಜನಗಳಿಗೆ ಸಪ್ಲೈ ಮಾಡಬೇಕು, ಎಂದು ಸರ್ಕಾರದವರು ಸ್ಟೇಟ್ ಫಾರಂ ಪಾಲಿಸಿ ಹಾಕಿಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಫಾರಂ ಮಾಡಿಸಬೇಕೆಂದು

ಹೋದ ವರ್ಷದಿಂದಲೂ ಕೇಳುತ್ತಿದ್ದೇವೆ. ಮೊನ್ನೆ ಅದಕ್ಕಾಗಿ ಜಮೀನು ಕೂಡ ಬಿಟ್ಟುಕೊಟ್ಟಿದ್ದೇವೆ. ಡಿಪಾರ್ಟ್‌ಮೆಂಟಿನವರು ಜಮೀನು ನೋಡಿಕೊಂಡು ಹೋಗಿದ್ದಾರೆ ಆದರೂ ಅದಕ್ಕೆ ಕಾರ್ಯಕ್ರಮ ಹಾಕಿಲ್ಲ. ಹೀಗಾದರೆ ರೈತರಿಗೆ ಒಳ್ಳೆಯ ಬೀಜಗಳು ಸಿಕ್ಕುವುದು ಹೇಗೆ, ಹುಮ್ಮಸ್ಸು ಬರುವುದು ಹೇಗೆ? ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ ಉತ್ತೇಜನ ಕೊಡುತ್ತೇವೆ, ಜಾಗ್ರತೆ ಪ್ರಾರಂಭಮಾಡು ತ್ತೇವೆ ಎಂದು ಹೇಳಿದ್ದಾರೆ. ಈಗ ನಮ್ಮ ತಾಲ್ಲೂಕಿನಲ್ಲಿ ಅಡಿಕೆ ಬೆಳೆ ಚೆನ್ನಾಗಿ ಬೆಳೆಯುತ್ತದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು ಎರಡು ಸಾವಿರ ಎಕರೆಯ ಮೇಲೆ ಅಡಿಕೆ ತೋಟ ಇದೆ. ಆದ್ದರಿಂದ ಅಲ್ಲಿಗೊಂದು ರಿಸರ್ಚ್ ಸೆಂಟರ್ ಮಾಡಿಕೊಡಿ ಎಂದು ಕೇಳಿಕೊಂಡರೂ ಸರ್ಕಾರದವರು ಏನೂ ಮಾಡಿಲ್ಲ. ಮಲೆನಾಡಿನಲ್ಲಿ ಕೊಳೆರೋಗ ಬರುತ್ತದೆ. ನಮ್ಮ ಕಡೆ ಅಡಿಕೆ ಮರಗಳಿಗೆ ಅಣಬೆರೋಗ ಬಂದು ಮರಗಳು ಸತ್ತು ಹೋಗುತ್ತವೆ. ಒಂದು ಅಡಿಕೆ ತೋಟವನ್ನು ಫಸಲು ಬರುವವರೆಗೆ ಬೆಳೆಸಬೇಕಾದರೆ ಎಂಟು-ಹತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತವೆ; ಮತ್ತು ಫಸಲು ಬಿಡಬೇಕಾದರೆ ಎಂಟು-ಹತ್ತು ವರ್ಷ ಕಾಯಬೇಕಾಗುತ್ತದೆ. ಅಡಿಕೆಯೊಳಗೆ ಮೈಸೂರು ಸ್ಟೇಟ್ ಡಿಫಿಷಿಯಂಟ್ ಇದೆ. 30 ಸಾವಿರ ಎಕರೆ ಅಡಿಕೆ ಬೆಳೆಯತಕ್ಕ ಪ್ರದೇಶವನ್ನು ಇಟ್ಟುಕೊಂಡಿದ್ದೇವೆ. ಅಂಥಕಡೆ ಇಂಥ ರೋಗಗಳು ಬರುತ್ತವೆ. ಆದ್ದರಿಂದ ಆದಷ್ಟು ಜಾಗ್ರತೆ ರಿಸರ್ಚ್ ಲ್ಯಾಬೋರೇಟರಿ ಮಾಡಿ ಜನರಿಗೆ ಅನುಕೂಲಮಾಡಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಆಮೇಲೆ ಕೋ-ಅಪರೇಟೀವ್ ಡಿಪಾರ್ಟ್‌ಮೆಂಟಿನ ವಿಷಯದಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ಆಡಿಟರ್ಸ್ ಎಂದು ನೇಮಿಸಿದ್ದಾರೆ. ಕೋ-ಅಪರೇಟೀವ್ ಆಡಿಟರ್ಸ್ ಬಂದು ಆಡಿಟ್ ಮಾಡುವುದಕ್ಕೆ ಫೀಜ್ ಯಾವರೀತಿ ಫಿಕ್ಸ್‌ಮಾಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. 50–100 ರೂಪಾಯಿಗಳ ಆದಾಯ ಬರುವ ಸೊಸೈಟಿಗಳಿಗೆ ನೂರಾರು ರೂಪಾಯಿಗಳ ಆಡಿಟ್‌ಫೀಜ್ ಹಾಕಿದರೆ ಸೊಸೈಟಿ ಉಳಿಯುತ್ತದೆಯೇ? ಬೇಕಾದರೆ ಎಂಟು ದಿವಸದ ಸಂಬಳ ತೆಗೆದುಕೊಳ್ಳಿ. ಆಡಿಟ್ ಮಾಡಬಾರದು ಎಂದು ಹೇಳುವುದಿಲ್ಲ. ಆದರೆ ಈ ರೀತಿ ನೂರಾರು ರೂಪಾಯಿಗಳ ಆಡಿಟ್ ಫೀಜ್ ಕೊಟ್ಟರೆ ಸೊಸೈಟಿಗಳು ಉಳಿಯಬೇಕೇ ಅಥವಾ ಉಳಿಯಬಾರದೇ? ಇದು ಏನು ಸ್ಕೀಮು? ಅದೇ ರೀತಿ ಮುನಿಸಿಪಾಲಿಟಿಗಳಿಗೂ ಸಾವಿರಾರು ರೂಪಾಯಿಗಳ ಆಡಿಟ್ ಫೀಜ್ ಮಾಡಿಬಿಟ್ಟಿದ್ದಾರೆ. ಏತಕ್ಕೆ ಆರೀತಿ ಮಾಡುತ್ತಾರೆ? ಮುನಿಸಿಪಾಲಿಟಿಯ ಆರ್ಥಿಕ ಪರಿಸ್ಥಿತಿ ತಮಗೆಲ್ಲರಿಗೂ ಗೊತ್ತಿದೆ. ಅಂಥಾದ್ದರಲ್ಲಿ ನೂರಾರು ರೂಪಾಯಿಗಳ ಆಡಿಟ್ ಫೀಜ್ ಕೊಡಬೇಕು ಎಂದರೆ ಏನು ಅರ್ಥ? ಒಂದೆರಡು ತಿಂಗಳಲ್ಲಿ ಆಡಿಟ್ ಮುಗಿಸಬಹುದು. ಎರಡು ತಿಂಗಳು ಸಂಬಳ ತೆಗೆದುಕೊಳ್ಳಲಿ. ಆಡಿಟ್ ಫೀಜ್ ಕಡಮೆ ಮಾಡಬೇಕು. ಈರೀತಿ ಇರುವುದು ಒಳ್ಳೆಯದಲ್ಲ. ಸೊಸೈಟಿಗಳಿಗೆ ತೊಂದರೆಯಾಗುತ್ತದೆ. 50–100 ರೂಪಾಯಿ ಲಾಭ ಬರುವುದಿಲ್ಲ. ಇಂಥ ಸೊಸೈಟಿಗಳಿಗೆ 200–300 ರೂಪಾಯಿಗಳು ಆಡಿಟ್ ಫೀಜ್ ಹಾಕುತ್ತಾರೆ. ಆದ್ದರಿಂದ ಅಷ್ಟು ಹಾಕಬಾರದು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಇರ್ರಿಗೇಷನ್ ವಿಷಯದಲ್ಲಿ ಸ್ವಲ್ಪ ಮಾತನಾಡುತ್ತೇನೆ. ಮೊನ್ನೆ ಮಾನ್ಯ ಮಂತ್ರಿಗಳು ಮೈನರ್ ಇರ್ರಿಗೇಷನ್ ಸಪ್ತಾಹವನ್ನು ಮಾಡಿದರು. ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ತೆಗೆದುಕೊಂಡಿದ್ದಾರೆ. ಬಡ್ಜೆಟ್ ನೋಡಿದರೆ ಬಹಳ ಸಂತೋಷವಾಗುತ್ತದೆ. ಆದರೆ ರೈತರಿಗೆ ಪ್ರಗತಿದಾಯಕವಾದ ಕೆಲಸಗಳು ಬಹಳ ನಿಧಾನವಾಗುತ್ತಿವೆ. ಅದನ್ನು ತಪ್ಪಿಸಬೇಕು. ಎಸ್ಟಿಮೇಟ್ ತಯಾರುಮಾಡಬೇಕಾದರೆ ಕಾಲ ಹಿಡಿಯುತ್ತದೆ. ಅದು ನಮಗೆ ಗೊತ್ತಿದೆ. ಆದರೂ ಅದರಲ್ಲಿ ಕಾಲವಿಳಂಬ ಬಹಳವಾಗುತ್ತಿದೆ. ಆದ್ದರಿಂದ ಅದು ಆಗಬಾರದು ಎಂದು ನನ್ನ ಕೋರಿಕೆ. ಅದೂ ಅಲ್ಲದೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳಾದ ಕಾವೇರಿ, ಕೃಷ್ಣ, ಮಲಪ್ರಭಾ ಪ್ರಾಜೆಕ್ಟುಗಳನ್ನು ಮಾಡುತ್ತಾರೆ. ನೀರಿನ ಹಂಚಿಕೆಯ ವಿಷಯದಲ್ಲಿ ಬ್ರಿಟಿಷ್ ಗೌರ್ನಮೆಂಟ್ ಇದ್ದಾಗ ಮದ್ರಾಸ್ ಸರ್ಕಾರಕ್ಕೂ ಮೈಸೂರು ಸರ್ಕಾರಕ್ಕೂ ಏನು ಒಪ್ಪಂದ ಇತ್ತೋ ಆ ಒಪ್ಪಂದದಂತೆ ನೀರು ಉಪಯೋಗಿಸುತ್ತಿದ್ದಾರೆ. ಏನು ಪ್ರಯೋಜನ? ಅದನ್ನು ಬದಲಾವಣೆ ಮಾಡಿಕೊಳ್ಳಬೇಕು. ನಮ್ಮಲ್ಲಿ ನೀರು ಹೆಚ್ಚಿಗೆ ಇಲ್ಲ ಎಂದು ಹೇಳಿ ನಾವು ಉಪಯೋಗಮಾಡದೆ ಅವರು ಉಪಯೋಗಿಸುವುದಕ್ಕೆ ಬಿಡುವುದು ಸಾಧುವಲ್ಲ. ನೀರನ್ನು ಹೆಚ್ಚಿಗೆ ಉಪಯೋಗಮಾಡುವಂತೆ ನಾವು ಒಪ್ಪಂದ ಮಾಡಿಕೊಳ್ಳಬೇಕು. ಒಂದು ವಿಷಯ ಹೇಳುತ್ತೇನೆ. ಕೇಂದ್ರ ಸರ್ಕಾರದವರ ಸಹಾಯವನ್ನಾದರೂ ಪಡೆದು ಹೆಚ್ಚಿಗೆ ನೀರನ್ನು ಮೈಸೂರು ದೇಶದಲ್ಲಿ ಉಪಯೋಗಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಎರಡು ಮೂರು ಅಣೆಕಟ್ಟುಗಳು ಆಗಬೇಕು ಎಂದು ಬಹಳ ಸಾರ್ತಿ ಕೇಳಿದ್ದೇನೆ. ಅದರಲ್ಲಿ ಕುಪ್ಪಾಳು ಕೆರೆ ಪ್ರಾಜೆಕ್ಟು ಒಂದು. ಈಗ ಪೂನಾ-ಬೊಂಬಾಯಿ ರೈಲ್ವೆ ಲೈನ್ ಹೋಗುವುದರಿಂದ ಈ ಕೆರೆಯನ್ನು ಇಂಪ್ರೂವ್ ಮಾಡುವುದಕ್ಕಾಗುವುದಿಲ್ಲ ಕುಪ್ಪಾಳು ಅಣೆಕಟ್ಟನ್ನು ಬೇಲೂರು ಅಣೆಕಟ್ಟಿಗೆ ಲೈಟ್‌ಪ್ ಮಾಡಿದರೆ ಸಾವಿರಾರು ಎಕರೆ ಇರ್ರಿಗೇಷನ್ ಆಗುತ್ತದೆ. ಸರ್ಕಾರದವರು ಮಾಡಿಕೊಟ್ಟ ಚೌಳ ಹಿರಿಯೂರು ಕೆರೆ ಇದೆ. ಕುಕ್ಕ ಸಮುದ್ರ ಕೆರೆ ಬಹಳ ಹಳೆಯ ಕೆರೆ. ಅದರಲ್ಲಿ 34 ಅಡಿ ನೀರು ನಿಲ್ಲುತ್ತದೆ. ಕೆರೆಯಲ್ಲಿ ಹೂಳು ತುಂಬಿಕೊಂಡು ಹೆಚ್ಚು ನೀರು ನಿಲ್ಲುವುದಕ್ಕೆ ಅವಕಾಶವಿಲ್ಲದೆ ಫಸಲು ಹಾಳಾಗುತ್ತಿದೆ. ಸಾವಿರಾರು ಎಕರೆ ಜಮೀನು ಹಾಳಾಗುತ್ತಿದೆ. ಹಳ್ಳ ಬರುವ ಕಡೆ ಪಿಕಪ್ ಕಟ್ಟಿ, ಬೇರೆ ಚಾನಲ್ ಕೆಳಗೆ ನೀರಾವರಿ ಬಿಟ್ಟು ಕೆರೆಯನ್ನು ಬ್ರೀಚ್ ಮಾಡಬೇಕು, ಅದು ಮಾಡದೆ ಹೋದರೆ ಅಲ್ಲಿ ಜಮೀನು ನೀರಾವರಿ ಆಗುವುದಿಲ್ಲ. ಊರಿನ ಸಾವಿರಾರು ದನಗಳು ಅಲ್ಲಿ ಮೇಯುವುದಕ್ಕೆ ಹೋಗುವುದರಿಂದ ಅನೇಕ ರೋಗಗಳು ಬಂದು ಸತ್ತುಹೋಗುತ್ತವೆ. ಸ್ವಾಮಿ ನಮ್ಮ ಮಲೆನಾಡಿನಲ್ಲಿ ಯಾವ ಇಂಡಸ್ಟ್ರಿಯನ್ನೂ ಡೆವಲಪ್ ಮಾಡಿಲ್ಲ. ಏಳು-ಎಂಟು ಡಿಸ್ಟ್ರಿಕ್ಟುಗಳಲ್ಲಿ ಇಂಡಸ್ಟ್ರಿ ತೆಗೆದುಕೊಂಡಿದ್ದಾರೆ. ಮಲೆನಾಡು ಬೋರ್ಡ್ ಎಂಬುದಾಗಿ ಏನು ಮಾಡಿದ್ದಾರೆ ಅದಕ್ಕೆ ಸರಿಯಾದ ಸೌಲಭ್ಯ ಕೊಟ್ಟು ಮಲೆನಾಡಿನಲ್ಲಿ ಇಂಡಸ್ಟ್ರಿ ಸ್ಥಾಪಿಸಬೇಕು ಎಂದು ನನ್ನ ಆಶಯ. ಅರಸೀಕೆರೆಯ ತಾಲ್ಲೂಕಿನಲ್ಲಿ ತೆಂಗಿನಬೆಳೆ ಬೆಳೆಯುತ್ತಾರೆ. ಅಲ್ಲಿಗೆ ಒಂದು ಕಾಯರ್ ಇಂಡಸ್ಟ್ರಿ ಇಲ್ಲ. ಏನೇನೋ ಮಾಡುವುದಕ್ಕೆ ಹೋಗುತ್ತಾರೆ. ಅದು ಬಿಟ್ಟು ಕಾಯರ್ ಇಂಡಸ್ಟ್ರಿಯನ್ನು ಅಲ್ಲಿಗೆ ಹಾಕಿದರೆ ಚೆನ್ನಾಗಿರುತ್ತದೆ. ಅಲ್ಲಿ ನೀರಿನ ಅನುಕೂಲ ಇದೆ. ಹೊಳೆ ಹರಿಯುತ್ತದೆ. ಅಲ್ಲಿ ಕಾಯರ್ ಇಂಡಸ್ಟ್ರಿ ಮಾಡಬೇಕು. ಲಕ್ಷಾಂತರ ಹಣ ಶೇಖರಿಸಿ ಸೊಸೈಟಿ ರೂಪ

(ಶ್ರೀ ಡಿ. ಎಚ್. ರುದ್ರಪ್ಪ)

ದಲ್ಲಿ ಮಾಡಬಹುದು. ಅಂತೂ ಅದನ್ನು ಸುಧಾರಣೆ ಮಾಡಬೇಕು. ಸರ್ಕಾರದವರು ಹಾಸನ ತಾಲ್ಲೂಕಿನಲ್ಲಿ ಮಾತ್ರ ಪಾನನಿರೋಧ ಮಾಡಬೇಕು ಎಂದು ಇದ್ದಾರೆ. ದಯವಿಟ್ಟು ಹಾಸನ ಜಿಲ್ಲೆಯಲ್ಲಿ ಪ್ರೊಹಿಬಿಷನ್ ಇಂಟರ್‌ಡ್ಯೂಸ್ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಸುತ್ತಮುತ್ತ ಮೂರು ಕಡೆ ಪ್ರೊಹಿಬಿಷನ್ ಇದ್ದು ಈ ಜಿಲ್ಲೆ ಮಧ್ಯೆ ಇದ್ದು ತೊಂದರೆಯಾಗುತ್ತದೆ. ಅದರಿಂದ ಬರುವ ಮೂರು ಲಕ್ಷ ರೂಪಾಯಿಗಳನ್ನು ಬೇರೆ ವಿಧದಲ್ಲಿ ತುಂಬಬಹುದು. ಆದ್ದರಿಂದ ಆದಷ್ಟು ಜಾಗ್ರತ ಹಾಸನ ಜಿಲ್ಲೆಯಲ್ಲಿ ಪೂರ್ತಿಯಾಗಿ ಪ್ರೊಹಿಬಿಷನ್ ಜಾರಿಗೆ ತರಬೇಕು. ಸಿಟಿ ಮುನಿಸಿಪಾಲಿಟಿಯಲ್ಲಿ ಸ್ಲಮ್‌ಕ್ಲೀಯರೆನ್ಸಿಗಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಹೀಗೆ ಸಿಟಿ ಮುನಿಸಿಪಾಲಿಟಿಗಳಿಗೆ ಖರ್ಚು ಮಾಡಿದರೆ ಎಲ್ಲಾ ಕಡೆ ಸ್ಲಮ್‌ಕ್ಲಿಯರೆನ್ಸ್ ಮಾಡಿದಂತೆ ಆಗುವುದಿಲ್ಲ. ಪ್ರತಿಯೊಂದು ಮುನಿಸಿಪಾಲಿಟಿಗೂ ಸ್ಲಮ್ ಕ್ಲೀಯರೆನ್ಸಿಗೆ ಹಣಕೊಟ್ಟು ಪ್ರತಿಯೊಂದು ಕಡೆಯೂ ಅನುಕೂಲವಾಡಿ ಕೊಡಬೇಕು, ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ ನನ್ನ ಒಂದು ಕ್ರಿಯಾಲೋಪದ ಪ್ರಶ್ನೆಯಿದೆ. ನನಗೆ ಹಿಂದೆ ಗೌರ್‍ನರ್ ಭಾಷಣದಮೇಲೂ ಮಾತನಾಡಲು ಅವಕಾಶ ಸಿಕ್ಕಲಿಲ್ಲ. ಈಗತಾನೇ ಅಧ್ಯಕ್ಷರು 'ರುದ್ರಪ್ಪ' ಎಂದು ಹೆಸರನ್ನು ಕರೆದ ತಕ್ಷಣವೇ ನನ್ನ ಮುಂದೆ ಕುಳಿತ್ತಿದ್ದ ಕಡೂರು ರುದ್ರಪ್ಪನವರೆದ್ದು ಮಾತನಾಡಲು ಪ್ರಾರಂಭ ಮಾಡಿದರು. ಮಧ್ಯೆ ತಕರಾರು ಹೂಡುವುದು ಗೌರವವಲ್ಲವೆಂದು ಸುಮ್ಮನಾಗಿಬಿಟ್ಟೆ. ಈಗ ನನಗೆ ಬಡ್ಜೆಟ್‌ಮೇಲೆ ಮಾತನಾಡಲು ಅವಕಾಶ ಕೊಡಬೇಕು. ಇದೇ ನನ್ನ ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಇದೊಂದು ಪಾಯಿಂಟ್ ಆಫ್ ಆರ್ಡರಾಗುವುದಿಲ್ಲ. ನೀವು ನಿಮ್ಮ ಪಾರ್ಟಿಯಿಂದ ಪರ್ಮಿಷನ್ ತನ್ನಿ. ಅದಕ್ಕೆ ನಾನೇನೂ ಅಭ್ಯಂತರ ಮಾಡದೆ ಅವಕಾಶ ಕೊಡುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಮಂಡಿಸಿರತಕ್ಕ 1959-60ನೆಯ ಸಾಲಿನ ಆಯವ್ಯಯದ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ತಮ್ಮ ಅಮೂಲ್ಯವಾದ ಸಲಹೆಗಳನ್ನಿತ್ತಿದ್ದಾರೆ. ದೇಶದ ಅತಿಮುಖ್ಯವಾದ ಸಮಸ್ಯೆಗಳಲ್ಲಿ ಮೊದಲನೆಯದಾದ ಆಹಾರಾಭಾವದ ಸಮಸ್ಯೆ ಹೇಗೆ ಉದ್ಭವಿಸಿರುತ್ತದೋ ಹಾಗೇ ಈಗ ಈ ಸಭೆಗೆ ಚುನಾಯಿತರಾಗಿ ಬಂದಿರತಕ್ಕ ಸದಸ್ಯರ್ಲೇನಿದ್ದಾರೆ ಅವರಿಗೆ ಈಗ ಈ ಸಭೆಯಲ್ಲಿ ದೇಶದ ಜನರ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೂ ಸಹ ಕಾಲಾವಕಾಶಕ್ಕೆ ಒಂದು ಅಭಾವ ಉಂಟಾಗಿದೆ .ಆದರೆ ಇದರಲ್ಲಿ ಅಧ್ಯಕ್ಷರ ತಪ್ಪು ಇದೆ ಎಂದು ನಾನು ಹೇಳುವುದಕ್ಕಾಗುವುದಿಲ್ಲ. ಈ ಸಭೆಯಲ್ಲಿರತಕ್ಕ ಪ್ರತಿಯೊಬ್ಬ ಸದಸ್ಯರೂ ಅವರವರ ಚುನಾವಣಾಕ್ಷೇತ್ರದ ವಿಚಾರದಲ್ಲಿ ಅವರವರ ಅಭಿಪ್ರಾಯಗಳನ್ನು ಪ್ರತಿಬಿಂಬಿಸಬೇಕಾದ್ದು ಅವರ ಆದ್ಯಕರ್ತವ್ಯ. ಆದರೆ ಆ ಕರ್ತವ್ಯವನ್ನು ಈಗ ಸರಿಯಾಗಿ ಪರಿಪಾಲನೆ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಇಲ್ಲದಿರುವುದರಿಂದ ವಿಷಯಗಳನ್ನು ಹೆಚ್ಚು ಲಂಬಿಸಿ ಹೇಳುವುದಕ್ಕೆ ಹೋಗದೆ ಈಗ ನಮ್ಮ ಮುಂದಿರತಕ್ಕ ಆಯವ್ಯಯ ಪಟ್ಟಿಯನ್ನು ತೀಕ್ಷ್ಣವಾಗಿ ಪರಿಶೀಲನೆ ಮಾಡುವುದಾದರೆ ಇದು ನಮ್ಮ ಮುಂದಿನ ಜನಾಂಗಕ್ಕೊಂದು ಸುಭದ್ರವಾದ ಅರ್ಥಿಕಾಭಿವೃದ್ಧಿಗೆ ತಳಹದಿ ಹಾಕಿದಂತಿಲ್ಲ. ಇದರಲ್ಲಿ ಅಂಥ ಒಂದು ಮುಂದಾಲೋಚನೆಯೇನಾದರೂ ಇದೆಯೇ? ಈಗ ನಮ್ಮ ಮುಂದಿರುವ ಆಯವ್ಯಯ ಪಟ್ಟಿ, ಮಾನ್ಯ ಹಣಕಾಸಿನ ಸಚಿವರು ಹೇಳಿರುವಂತೆ, ಒಂದು ಉಳಿತಾಯದ ಬಡ್ಜೆಟ್ಟಾಗಿದೆಯೇ ಎನ್ನುವುದನ್ನೆಲ್ಲಾ ನೋಡಬೇಕಾಗಿದ್ದರೆ ನಾವು ಸ್ವಲ್ಪಮಟ್ಟಿಗೆ ನಮ್ಮ ಹಿಂದಿನ ಹಣಕಾಸಿನ ಚರಿತ್ರೆ ಹೇಗಿತ್ತೆಂಬುದನ್ನು ನಮ್ಮ ಮುಂದಿಟ್ಟುಕೊಂಡು ನೋಡಿದ ಪಕ್ಷದಲ್ಲಿ ನಮ್ಮ ಮೈಸೂರು ಸಂಸ್ಥಾನದ ಅರ್ಥಿಕ ಪರಿಸ್ಥಿತಿ ರೆಂಡಿಷನ್ ಕಾಲದಲ್ಲಿ ಹೇಗಿತ್ತು, ಅನಂತರ 1947ರಲ್ಲಿ ಏನಿತ್ತು ಅನಂತರ 1956ರಲ್ಲಿ ಹೇಗಿತ್ತು ಮತ್ತು ಈಗ 1959ರಲ್ಲಿ ಹೇಗಿದೆ ಎಂಬುದನ್ನು ಅವಲೋಕಿಸಿದರೆ–ರೆಂಡಿಷನ್ ಕಾಲದಲ್ಲಿ ದೇಶದ ಉತ್ಪತ್ತಿ ಒಂದೂವರೆ ಕೋಟಿ ರೂಪಾಯಿಗಳಷ್ಟಿದ್ದುದು 1947ರಲ್ಲಿ 11 ಕೋಟಿ ರೂಪಾಯಿಗಳಿಗೆ ಬಂದು 1956ರ ರಲ್ಲಿ 22 ಕೋಟಿ ರೂಪಾಯಿಗಳಿಗೇರಿ, ಈಗ ಅದನ್ನು 55 ಕೋಟಿ 68 ಲಕ್ಷದ 98 ಸಾವಿರಕ್ಕೆ ನಾವು ತಂದಿದ್ದೇವೆ. ಆದರೆ ಈರೀತಿ ಸಾರ್ವಜನಿಕರಿಂದ ಬರತಕ್ಕ ಹಣವನ್ನು ದೇಶಕ್ಕೆ ವಿನಿಯೋಗ ಮಾಡತಕ್ಕ ಕಾಲದಲ್ಲಿ ನಾವು ಯಾವ ಯಾವ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು, ಈ ಹಣವನ್ನು ವಿನಿಯೋಗ ಮಾಡತಕ್ಕದ್ದರಲ್ಲಿ ಯಾರ ಯಾರ ಜವಾಬ್ದಾರಿ ಎಷ್ಟೆಷ್ಟು ಗುರುತರವಾಗಿರುತ್ತದೆ, ಅಂಥ ಜವಾಬ್ದಾರಿಗಳೇನೆಂಬುದನ್ನು ಪರಿಶೀಲನೆಮಾಡಿ ನಮ್ಮ ದೇಶದ ಅರ್ಥಿಕಪರಿಸ್ಥಿತಿಯ ಬಗ್ಗೆ ಅರ್ಥಿಕ ಪರಿಣತರ ಹಾಗೂ ಪಂಡಿತರ ಅಭಿಪ್ರಾಯಗಳೇನಿವೆಯೆಂಬುದನ್ನು ಗಮನದಲ್ಲಿಟ್ಟುಕೊಂಡು ಆ ಪ್ರಕಾರ ನಾವು ಸಾರ್ವಜನಿಕರ ಹಣವನ್ನು ಖರ್ಚು ಮಾಡಬೇಕೆಂಬುದನ್ನು ನಾನೀಗ ಒತ್ತಿ ಹೇಳಬೇಕಾಗಿದೆ. ಏತಕ್ಕೆಂದರೆ ಈ ದಿವಸ ನಾವು ವರ್ಷವರ್ಷಕ್ಕೆ ಸರಿಯಾಗಿ ಅಗತಕ್ಕ ಖರ್ಚುವೆಚ್ಚಗಳೇನೆಂಬುದನ್ನು ನೋಡಿಕೊಂಡು ಅದಕ್ಕೆ ಸರಿಯಾದ ಒಂದು ಬಡ್ಜೆಟ್ಟನ್ನು ಈಗ ನಮ್ಮ ಮುಂದಿರತಕ್ಕ 1959-60ನೆಯ ಸಾಲಿನ ಬಡ್ಜೆಟ್ಟಿನಂತೆ ತಯಾರಿಸಿ ಇದಕ್ಕೆ ತಕ್ಕಂತೆ ಹಣವನ್ನು ಖರ್ಚುಮಾಡಿಕೊಂಡು ಹೋಗುತ್ತಿದ್ದರೆ ಸಾಕೇ? ಇದರಿಂದ ನಾವು ನಮ್ಮ ಮುಂದಿನ ಭಾವಿ ಪ್ರಜೆಗಳಿಗೆ ಒಂದು ಸುಭದ್ರವಾದ ಅರ್ಥಿಕ ವ್ಯವಸ್ಥೆಯ ತಳಹದಿಯನ್ನೇನಾದರೂ ಹಾಕಿದ್ದೇವೆಯೇ ಎಂದು ನೋಡಿದರೆ ನಾವು ಅಂಥಾದ್ದಾವುದನ್ನೂ ಮಾಡಿಲ್ಲವೆಂಬುದು ಸರ್ವರಿಗೂ ವೇದ್ಯವಾಗುತ್ತದೆ. ಹಿಂದೆ ನಮ್ಮ ಅರ್ಥಿಕ ಪರಿಸ್ಥಿತಿ ತೊಂದರೆಗೊಳಗಾಗಿದ್ದಾಗ ಸರ್ಕಾರದವರು ನಮಗೆ ಫೆಡರಲ್ ಫೈನಾನ್‌ಷಿಯಲ್ ಕಮಿಷನ್ನಿನವರಿಂದ 365 ಲಕ್ಷ ರೂಪಾಯಿಗಳು (gap grant after Federal Financial integration) ದೊರೆಯುತ್ತದೆಯೆಂಬುದಾಗಿ ಹೇಳಿದ್ದರು. ಆದರೆ ಆ ಹಣವನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಆ ಕಮಿಷನ್ನಿನವರು ಆ ಬಗ್ಗೆ ಒಂದು ಷರತ್ತನ್ನು ಹಾಕಿ ಅದು 1955-56ಕ್ಕೆ ಮುಕ್ತಾಯವಾಗಬೇಕೆಂದು ಹೇಳಿದರು. ಆದರೆ ಆ 365 ಲಕ್ಷ ರೂಪಾಯಿಗಳನ್ನು ಒದಗಿಸತಕ್ಕದ್ದು ಹೇಗೆಂಬ ಮತ್ತೊಂದು ಪ್ರಶ್ನೆ ಬಂದಾಗ ನಾವು ಆ ಇಂಡಿಯಾ ದೇಶದ ತೆರಿಗೆಯ ಡಿವಿಜನ್, ಅಥವಾ ಆ ಒಂದು ತೆರಿಗೆ ಪೂಲ್ ಏನಿದೆ ಅದರಲ್ಲಿ ಹಣ ಪಡೆಯಲು ಪ್ರಯತ್ನ ಮಾಡಬೇಕೆಂಬುದಾಗಿ ತೀರ್ಮಾನ ಮಾಡಿಕೊಂಡು ನಮಗೆ 1955-56ರಲ್ಲಿ $3\frac{1}{2}$ ಕೋಟಿ ರೂಪಾಯಿಗಳ ಹಣದ ಕೊರತೆಯುಂಟಾಗಿದ್ದಾಗ ಆಲ್ ಇಂಡಿಯಾ ಜನರಲ್ ಪೂಲಿನಿಂದ ನಮಗೆ ಎರಡು ಕೋಟಿ ರೂಪಾಯಿಗಳು ದೊರೆಯಬಹುದೆಂದು ಲೆಕ್ಕ ಹಾಕಿದ್ದರು.

ಆದರೆ ಇವರ ಲೆಕ್ಕಚಾರ ತಲೆಕೆಳಕಾಯಿತು. ಅಲ್ಲಿಂದ ನಮಗೆ ದೊರೆತ ಹಣ ಎಷ್ಟೆಂದರೆ ಅದು ಕೇವಲ ಒಂದು ಕೋಟಿ 45 ಲಕ್ಷ ರೂಪಾಯಿಗಳು ಮಾತ್ರ. ಇನ್ನುಳಿದ ಹಣವನ್ನು ಸರಿಗಟ್ಟಿಕೊಳ್ಳಲು ಸಾಧ್ಯವಾಗದೆ ಮಂಜೂರಾಗಿದ್ದ ಕೆಲಸಕಾರ್ಯಗಳನ್ನೆಲ್ಲ ನಡೆಸಲಾರದೆ ಹಾಗೆಯೇ ಕೈಬಿಟ್ಟರು. ನಮ್ಮ ಹಣಕಾಸಿನ ಪರಿಸ್ಥಿತಿ ಹೀಗಿರುವಾಗ ಡೈರೆಕ್ಟೀವ್ ಪ್ರಿನ್ಸಿಪಲ್‌ಗನುಸಾರವಾಗಿ ದೇಶದಲ್ಲಿ ಪಾನನಿರೋಧವನ್ನು ಬೇರೆ ಆಚರಣೆ ತಂದ ದರಿಂದ ಆ ಬಾಬಿನಿಂದ ಬರುವುದು ಉತ್ಪತ್ತಿ ಅದೂ ಖೋತಾ ಆಯಿತು. ಹೀಗೆ ಯಾವ ವಿಚಾರ ತೆಗೆದುಕೊಂಡರೂ ನಮ್ಮ ಮುಂದಿನ ಜನಾಂಗದ ಭವಿಷ್ಯದ ಭದ್ರತೆಗಾಗಿ ಯಾವ ಒಂದು ಸುಗಮವಾದ ಹಾದಿಯನ್ನು ಈ ಆರ್ಥಿಕ ಬಾಬಿನ ಬಗ್ಗೆ ಮಾಡಿಕ್ಕೊಂಡಿರುವುದಿಲ್ಲ. ಕೇವಲ ಗಣಿತಶಾಸ್ತ್ರದಲ್ಲಿರತಕ್ಕ ಆ ಸಂಕಲನ—ವ್ಯವಕಲಗಳನ್ನೆಲ್ಲ ನೀವು ಇಲ್ಲಿ ಚೆನ್ನಾಗಿ ಹಾಕಿ ತೋರಿಸಿದ್ದೀರಿ. ಅಷ್ಟೇ ಶಿವಾಯಿ ಇದರಲ್ಲಿನ್ನೇನೂ ಅಂಥ ಗಣನೀಯವಾದ ಅಂಶ ಕಂಡು ಬರಲಲ್ಲ. ಇದು ಒಂದು ಕೇವಲ tactful ಬಡ್ಜೆಟ್ ಎಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ಹಣಕಾಸಿನ ಸಚಿವರಾದ ಶ್ರೀ ಮರಿಯಪ್ಪನವರು ಇನಿಷಿಯಲ್ 'ಟಿ' ಎಂದು ಇರುವುದರಿಂದ 'ಟಿ' ಎಂದರೆ ಟ್ಯಾಕ್ಟ್‌ಫುಲ್ (tactful) ಎಂದು. ಆದುದರಿಂದ ಈಗ ಶ್ರೀಮಾನ್ ಮರಿಯಪ್ಪನವರು ಮಂಡಿಸಿರತಕ್ಕ ಬಡ್ಜೆಟ್ ಒಂದು ಟ್ಯಾಕ್ಟ್‌ಫುಲ್ ಬಡ್ಜೆಟ್ಟಾಗಿದೆ. ಇದನ್ನು ಅವರು ತಮ್ಮ ಒಂದು ಜಾಣ್ಮೆಯಮೇಲೆ ಮಾಡಿದ್ದಾರೆ. ನಾವು ಯಾವತ್ತಿಗೂ ನಮ್ಮ ಹಣಕಾಸಿನ ವ್ಯವಹಾರವನ್ನು ಹೀಗೆಯೇ ನಡೆಸಿಕ್ಕೊಂಡು ಹೋಗುತ್ತೇವೆಂದು ಹೇಳುವುದಕಾಗುವುದಿಲ್ಲ. ನಾವು ಈಗೇನೋ ಒಂದು ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ. ಆದರೆ ಅಷ್ಟೇ ಸಾಕೇ? ಅದಕ್ಕೆ ತಕ್ಕಂತೆ ನಮ್ಮ ಆರ್ಥಿಕ ಸ್ವಾತಂತ್ರ್ಯದ ಭದ್ರತೆ ಬಗ್ಗೆ ಏನು ಮಾಡಿದ್ದಾರೆ? ಇದು ಅಂಥಾ ಒಂದು ಸುಭದ್ರವಾದ ತಳಹದಿಯ ಮೇಲೆ ನಿಂತಿದೆಯೇ ಎಂದರೆ—ಇಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಟಿ. ಮರಿಯಪ್ಪ.—ಈಗ ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಸುಭದ್ರವಾದ ತಳಹದಿ ಮೇಲೆ ನಿಂತಿದೆ.

ಶ್ರೀ ವೈ. ವೀರಪ್ಪ.—ರಾಷ್ಟ್ರವು ಈಗ ಗಳಿಸಿರತಕ್ಕ ಸ್ವಾತಂತ್ರ್ಯ ಏನಿದೆ ಅದು ಈ 1959-60ಕ್ಕೇ ಮುಕ್ತಾಯವಾಗುವುದಿಲ್ಲ. ಈ ದಿನವೇನೋ ನಮ್ಮ ಹಣಕಾಸಿನ ಸ್ಥಿತಿಗತಿಗಳು ಚೆನ್ನಾಗಿರುವಂತೆ ಕಾಣುತ್ತಿರಬಹುದು, ತೃಪ್ತಿಕರವಾಗಿದೆಯೆಂದು ತಾವು ಹೇಳಬಹುದು. ಆದರೆ ನಮ್ಮ ಮುಂದಿನ ಜನಾಂಗದ ಕ್ಷೇಮಕ್ಕಾಗಿ ತಾವು ಅಂಥಾ ಯಾವ ಒಂದು ಸುಭದ್ರವಾದ ಆರ್ಥಿಕಪರಿಸ್ಥಿತಿಗೆ ಮಾರ್ಗ ಮಾಡಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. 1942ರಲ್ಲಿ ದೇಶದ ಆಡಳಿತವನ್ನು ನೀವು ಕಸಿದುಕೊಂಡಮೇಲೆ ಇದುವರೆಗೂ ಏನು ಅಂಥ ಕಾರ್ಯಗಳನ್ನು ಮಾಡಿದ್ದೀರಿ? ಕೋಟ್ಯಾಂತರ ರೂಪಾಯಿಗಳನ್ನು ನೀವು ವಿವೇಚನೆಯಿಲ್ಲದೆ ಖರ್ಚು ಮಾಡಿದ್ದೀರೆಂದರೆ ಅದೇನೂ ತಪ್ಪಾಗುವುದಿಲ್ಲ; ಅದಕ್ಕೆ ನೀವೂ ಆಕ್ರೋಶ ಸಹ ಮಾಡಿಕೊಳ್ಳಬಾರದು. ತಾವು ಈಗ ಯಾವುದೋ ಒಂದು ರೀತಿಯಲ್ಲಿ 48 ಲಕ್ಷ ರೂಪಾಯಿಗಳ ಉಳಿತಾಯದ ಬಡ್ಜೆಟ್ಟೆಂದು ತೋರಿಸಿದ್ದೀರಿ. ಆದರೆ ನೀವು ಹೋದ ಸಾಲಿನಲ್ಲಿ ಯಾವಯಾವ ಬಾಬಿಗಾಗಿ ಹಣವನ್ನು ತೆಗೆದಿಟ್ಟಿದ್ದಿರೋ ಆ ಹಣವೆಲ್ಲಾ ಆಯಾ ಬಾಬುಗಳಿಗೆ ಖರ್ಚಾಗಿದೆಯೇನು? ಖರ್ಚಾಗಿದ್ದರೆ ಅವುಗಳಿಂದೇನು ಪ್ರತಿಫಲ ನಮಗೆ ದೊರೆತಿದೆ ಹೇಳಿ? ಅದನ್ನು ತಿಳಿಸಲು ತಮಗೆ ಸಾಧ್ಯವಿಲ್ಲ. ಹೀಗೆಲ್ಲಾ ನಾವು ನೆಪಮಾತ್ರಕ್ಕೆ ಮೊದಲು ಹಣವನ್ನೊದಗಿಸಿದಂತೆಮಾಡಿ ಆಖೈರಿನಲ್ಲಿ ಆ ಹಣವನ್ನೇ ಮುಂದಿನ ಹೊಸ ವರ್ಷದ ಬಡ್ಜೆಟ್ಟಿಗೆ ಓಪನಿಂಗ್ ಬ್ಯಾಲೆನ್ಸೆಂದು ಹೇಳುವುದಾದರೆ ನಮ್ಮ ಸ್ಥಿತಿಗತಿಗಳೇನಾಗುತ್ತವೆ? ದೇಶದಲ್ಲಿ ಟ್ಯಾಕ್ಸ್ ಕೊಡತಕ್ಕ ರೈತನಿಗೆ ನಿಜವಾಗಿಯೂ ಏನಾದರೂ ಪ್ರಯೋಜನ ದೊರೆತಿದೆಯೇ ಎಂದು ನೋಡಿದರೆ ಎಲ್ಲವೂ ನಿರಾಶೆಯನ್ನುಂಟುಮಾಡುತ್ತಿವೆ. ಬಡ್ಜೆಟ್ಟಿನಲ್ಲಿ ಒಂದಾವರ್ತಿ ಒದಗಿಸಿದ ಹಣ ಅದು ಪುನಃ ಉಳಿಯೋಣವೆಂದರೇನು? ಆದರೆ ಈಗ ತಾವು ದೊಡ್ಡದಾಗಿ ಬಸ್ ಸಂಚಾರಿಗಳ ಅಥವಾ ಪ್ರಯಾಣಿಕರ ಮತ್ತು ಸಾಮಾನುಗಳ ಸಾಗಾಟದ ಮೇಲೆ ಒಂದು ಚಿಕ್ಕ ತೆರಿಗೆಯನ್ನು ಹಾಕಿದರೆ ಸರ್ಕಾರಕ್ಕೆ 55 ಲಕ್ಷ ರೂಪಾಯಿಗಳ ವರಮಾನಬರಬಹುದೆಂದು ಹೇಳಿದ್ದೀರಿ. ಪಾನನಿರೋಧ ಪ್ರಚಾರದಲ್ಲಿ ಏನು ಮಾಡಿದ್ದೀರಿ? ಹೀಗೆ ದೇಶಾಭಿವೃದ್ಧಿ ಕಾರ್ಯಗಳಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಿ ರೈತರಿಗೆ ಅನುಕೂಲಮಾಡದೆ ಯಾವ ನ್ಯಾಯದಮೇಲೆ ತೆರಿಗೆ ಹಾಕುತ್ತೀರಿ?

10 A.M.

ಆ ದೃಷ್ಟಿಯಿಂದ, ಸಾರ್ವಜನಿಕರ ಜವಾಬ್ದಾರಿಯ ಹಿತದೃಷ್ಟಿಯಿಂದ ಕಾಂಗ್ರೆಸ್ ಸರ್ಕಾರವೇ ಆಗಲಿ, ಯಾವುದೇ ಸರ್ಕಾರವಾಗಲೀ ಸಾರ್ವಜನಿಕರಿಂದ ಬರತಕ್ಕ ಉತ್ಪತ್ತಿಯನ್ನು ದೇಶವ ಅಭಿವೃದ್ಧಿಗೆ ಉಪಯೋಗಿಸದ ಹೋದರೆ ನಿಜವಾಗಿಯೂ ಅನ್ಯಾಯ ಮಾಡಿದ ಹಾಗಾಗುತ್ತದೆ. ಸಾರ್ವಜನಿಕರ ದುಡ್ಡನ್ನು ಯಾರಾದರೂ ಉಪಯೋಗಿಸಿಕೊಂಡರೆ, they must be sent to gallows. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಭಯಭಕ್ತಿ ದೂರದೃಷ್ಟಿ ಇವುಗಳಿಲ್ಲದೆ ಆದಾಯ ಮತ್ತು ವ್ಯಯವನ್ನು ಮಾಡಿಕೊಂಡು ಹೋಗುತ್ತಿದ್ದರೆ ದೇಶದಲ್ಲಿ ಚಿಂತಾಜನಕವಾದ ಪರಿಸ್ಥಿತಿಯುಂಟಾಗುತ್ತದೆ. ರೆವೆನ್ಯೂ expenditureನಿಂದ capital expenditureಗೆ ಹಣವನ್ನು ತೆಗೆದುಹಾಕುತ್ತಿದ್ದೀರಲ್ಲ, ಇದರಿಂದ ಆರ್ಥಿಕ ತಜ್ಞರು ಹೇಳಿರುವ ಹಾಗೆ revenue expenditure ಮೇಲೆ excessive inflation ಆಗುವುದಿಲ್ಲವೇ? ನನ್ನ ಕೆಲವು ಮಾನ್ಯ ಮಿತ್ರರುಗಳು ಮಾತನಾಡುವಾಗ ಕೃಷ್ಣರಾಜಸಾಗರದ ನಿದರ್ಶನವನ್ನು ಕೊಟ್ಟರು. ಖರ್ಚು ಮಾಡಿದ್ದಕ್ಕೆ ಸರಿಯಾದ ಪ್ರತಿಫಲ ನಿರ್ದಿಷ್ಟವಾದ ಕಾಲದಲ್ಲಿ ಬರುತ್ತದೆಂದು ಇದ್ದರೆ, ಮಾಡೋಣ. ಕೃಷ್ಣರಾಜಸಾಗರದ ನಿದರ್ಶನವನ್ನು ತೆಗೆದುಕೊಂಡರೆ, ದಾಕ್ಷಿಣ್ಯಕ್ಕೆ ಒಳಗಾಗಿ ಆರ್ಥಿಕ ಭದ್ರತೆಗೆ ಏನೇನು ಮಾಡಬೇಕಾಗಿತ್ತೋ, capital expenditureನಿಂದ ಯಾವರೀತಿ ಆದಾಯವನ್ನು ಪಡೆಯಬಹುದಾಗಿತ್ತೋ, ಅದರ ಪ್ರಕಾರ ಮಾಡಿಲ್ಲ. ದಾಕ್ಷಿಣ್ಯಕ್ಕೆ ಒಳಗಾದರೆ ಚೆನ್ನಾಗಿ ಕೆಲಸ ನಡೆಯುವುದಿಲ್ಲ. Directive principles ಇದೆ. Compulsory free education ಕೊಡಬೇಕೆಂದಿದೆ. You must raise the level of nutrition and standard of the people. You must introduce prohibition and you must maintain the good health of the nation. You must develop agriculture and you must develop animal husbandry. ವಿದ್ಯಾಭ್ಯಾಸವು ಮುಂದಿನ ಜನಾಂಗವನ್ನು

(ಶ್ರೀ ವೈ. ವೀರಪ್ಪ)

ಭದ್ರವಾದ ರೀತಿಯಲ್ಲಿ ಬೆಳೆಸುವಂತಿರಬೇಕು. ಮೈಸೂರಿನಲ್ಲಿರತಕ್ಕ ಜನ ದೇಶದಲ್ಲಿ ಏನೇನು ವ್ಯವಹಾರಗಳು ನಡೆಯುತ್ತಿವೆ, ಸ್ವಾತಂತ್ರ್ಯವೆಂದರೆ ಏನು ! ಸರ್ಕಾರವೆಂದರೆ ಏನು ; ಜವಾಬ್ದಾರಿ ಎಂದರೆ ಏನು ; ಅವರ ಕರ್ತವ್ಯವೇನು ; ಇವನ್ನೆಲ್ಲ ತಿಳಿಯಬೇಕಾದರೆ ವಿದ್ಯಾಭ್ಯಾಸವಿಲ್ಲದೆ ಆಗುವುದಿಲ್ಲ. ಇದನ್ನೆಲ್ಲ ಅರಿತುಕೊಳ್ಳಬೇಕಾಗಿದೆ. ಇದೆಲ್ಲವೂ ಕೇವಲ ಚುನಾವಣಾ ಭಾಷಣಗಳನ್ನು ಮಾಡಿದರೆ ಆಗುವುದಿಲ್ಲ, ಅಸೆಂಬ್ಲಿಯಲ್ಲಿ ಹದಿನೈದು ನಿಮಿಷಗಳಕಾಲ ಮಾತನಾಡಿದರೆ ಆಗುವುದಿಲ್ಲ. ಅದನ್ನು fundamental ಆಗಿ ಸರಿಯಾಗಿ ಮಾಡಬೇಕು. Free and complusory education ಕೊಡದೆ ಇದ್ದರೆ ಏಕೆ ದುಡ್ಡನ್ನು ಕೊಡೋಣ ? I am putting a plain question to the Hon'ble Finance Minister, why should we grant this demand ? ನಗರಗಳಲ್ಲಿ ಹತ್ತಿಪ್ಪತ್ತುಕಡೆ ಶಾಲೆಗಳನ್ನು ಕೊಡುತ್ತೀರಿ. ಆದರೆ ಪ್ರತಿ ಗ್ರಾಮದಲ್ಲಿಯೂ ಸ್ಕೂಲುಗಳಿರಬೇಕೆಂದು ಹೇಳುತ್ತಿದ್ದರೂ ಆ ರೀತಿ ಕೊಟ್ಟಿಲ್ಲ. ಜನಗಳಲ್ಲಿ ಸರಿಯಾಗಿ ವಿದ್ಯಾಭ್ಯಾಸ ನಡೆದಿಲ್ಲ. ಅದಕ್ಕೆ ಸರಿಯಾದ ಪ್ರಚಾರನಡೆದಿಲ್ಲ. ಉಪಾಧ್ಯಾಯರ ಅಭಾವ ನೀಗಿಲ್ಲ. ಇಂಥ ಜಟಿಲವಾದ ಸಮಸ್ಯೆಗಳಿರುವಾಗ ಗ್ರಾಂಟನ್ನು ಕೊಡಿ ಎಂದರೆ ಯಾವ ಧರ್ಮ ?

ಹಾಗೆಯೇ ಆಹಾರದ ವಿಚಾರವನ್ನು ತೆಗೆದುಕೊಂಡರೆ directive principlesಗೆ ತಲೆಬಾಗಬೇಕು, ರಾಜ್ಯಾಂಗದ ನಿಯಮಗಳಿಗೆ ತಲೆಬಾಗಬೇಕು. ಆದರೆ ಜನರಲ್ಲಿ nutrition level ಜಾಸ್ತಿ ಮಾಡಿದ್ದೀರಾ, Standard of living ಜಾಸ್ತಿ ಮಾಡಿದಿರಾ ಹೇಳಿ. W.H.O. ಸಂಸ್ಥೆಯವರು ಹಾಲಿನ ಪುಡಿಕೊಟ್ಟಿದ್ದನ್ನು ಬಾಲಕಬಾಲಕಿಯರಿಗೆ ಹಂಚಿ nutrition ಹೆಚ್ಚು ಮಾಡಿದ್ದೇವೆಂದು ಹೇಳುತ್ತೀರಿ. ಹಾಲಿನಪುಡಿಯನ್ನು ಹಂಚುವ ವಹಿವಾಟಿನ ವಿಚಾರದಲ್ಲಿ ಹೆಚ್ಚಿಗೆ ವಿಸ್ತರಣೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅದರಲ್ಲಿಯೂ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ. ಇದನೆಲ್ಲ ನೋಡಿದರೆ 1959-60ನೆ ಸಾಲಿನ ಬಡ್ಜೆಟ್ಟಿಗೆ ಅನುಮತಿಕೊಡಿ ಎಂದು ಹೇಗೆ ಕೇಳುತ್ತೀರೋ ತಿಳಿಯದು.

ವ್ಯವಸಾಯದ ವಿಚಾರವಾಗಿ ಅನೇಕರು ಹೇಳಿದ್ದಾರೆ. ಈಗ ದೇಶದಲ್ಲಿ ಆಹಾರದ ಅಭಾವವಿದೆ. ಆಹಾರದ ಅಭಾವ ಪೆಡಂಭೂತವಾಗಿ ನಿಂತಿದೆ. ಆಹಾರವನ್ನು ಶೇಖರಣೆ ಮಾಡಲು ಭತ್ತಕ್ಕೆ ಗೊತ್ತುಮಾಡಿರುವ ಧಾರಣೆ ಬಹಳ ಕಡಮೆ. ರೈತನು ತನಗೆ ಬೇಕಾದ ಗಾಡಿ ಪಟ್ಟೆ, ಗೊಬ್ಬರ, ಗುಳ ವಗೈರೆ ಎಲ್ಲವನ್ನೂ ಬ್ಲಾಕ್ ಮಾರ್ಕೆಟ್ಟಿನಲ್ಲಿ ತೆಗೆದುಕೊಂಡು, ತಾನು ಬೆಳೆದಂಥ ದವಸವನ್ನು ಮಾರಿ ಖರ್ಚುಮಾಡಿರುವ ಹಣವನ್ನು ಮತ್ತೆ ಪಡೆಯೋಣವೆಂದರೆ, ಸರ್ಕಾರದವರು ಮುಂದಾಲೋಚನೆ ಇಲ್ಲದೆ ಒಂದು ಆಜ್ಞೆಮಾಡಿ ಧಾನ್ಯವನ್ನು ಶೇಖರಣೆಮಾಡಿ ಎಂದು ಹೇಳಿದರೆ ಹೇಗೆ ? ಸರಿಯಾದ ಕಾಲದಲ್ಲಿ ರೈತನಿಗೆ ಬೀಜಗಳು, ಗೊಬ್ಬರ, ಗುಳ, ಗಾಡಿಪಟ್ಟಿ—ಇವುಗಳನ್ನು ಒದಗಿಸದೆ ಇರುವ ಕಾಲದಲ್ಲಿ ನಿಮ್ಮ ಯಾವ ಕಾನೂನಿನ ಆಧಾರದಮೇಲೆ, ಯಾವ ಆಧಾರದಮೇಲೆ ರೈತನಿಂದ ಕಡ್ಡಾಯವಾಗಿ ಮಿಲ್ಲಿಗೆ ಹಾಕತಕ್ಕ ದವಸದಲ್ಲಿ ಅರ್ಧಭಾಗವನ್ನು ಕೊಡಬೇಕು ಎಂದು ಕೇಳುತ್ತೀರಿ ? Calcutta Corporation Officer, Steel and Iron Controller ಮತ್ತು ಮೈಸೂರಿನಲ್ಲಿರುವ Steel and Iron Controller ಇವರೊಡನೆ 20ನೆ ಡಿಸೆಂಬರ್ 1958ರಲ್ಲಿ correspond ಮಾಡಿದ್ದೇವೆ. ಅದರಲ್ಲಿ ಇಷ್ಟು ಪೌಂಡ್ ಗುಳಬೇಕು, ಗಾಡಿಪಟ್ಟಿಬೇಕು, ಇತ್ಯಾದಿಗಳನ್ನು ಕೇಳಿದ್ದರೆ ಇನ್ನೂ ಜವಾಬನ್ನು ಸಹ ಕೊಟ್ಟಿಲ್ಲ. ಭಾರತ ಸರ್ಕಾರದವರೂ ಜವಾಬು ಕೊಟ್ಟಿಲ್ಲ. ವಿಷಯ ಹೀಗಿರಬೇಕಾದರೆ ಯಾವುದೋ ಒಂದು ದೃಷ್ಟಿಯಿಂದ ದುಡ್ಡನ್ನು ಕೊಡಿ, ದೇಶವನ್ನು ಉದ್ಧಾರಮಾಡುತ್ತೇವೆ; ಆವಡಿ ಕಾಂಗ್ರೆಸ್ ಅಧಿವೇಶನ ಮತ್ತು ಝಾನ್ಸಿರಾಣಿ ನಗರದ ಧ್ಯೇಯಧೋರಣೆಗಳನ್ನು ಅನುಷ್ಠಾನಕ್ಕೆ ತರುತ್ತೇವೆ, ನಾಗಪುರ ಅಧಿವೇಶನದ ಅನೇಕ ಠರಾವುಗಳನ್ನು ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳುತ್ತೀರಲ್ಲ, ಇದು ನಿಜವಾಗಿಯೂ ಸರಿಯಲ್ಲ. ನಾವು ಸರ್ಕಾರದಿಂದ ನಿರೀಕ್ಷಣೆ ಮಾಡತಕ್ಕದ್ದು ಏನಿದೆಯೋ ಅದನ್ನು ಖಂಡಿತವಾಗಿ ಮಾಡಿಕೊಟ್ಟಿಲ್ಲವೆಂದು ಹೇಳುತ್ತೇನೆ.

ನೀರಾವರಿ ಕಾರ್ಯಗಳ ವಿಚಾರವಾಗಿ, ಅಗತ್ಯವಾದ ನೀರಾವರಿ ಕಾರ್ಯಗಳನ್ನು ಎಷ್ಟು ಮಾಡಬೇಕು, ಹೇಗೆ ಜನರಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕು, ಎಂದು ನೋಡಬೇಕು. ಈಗ ಇರುವ ನೀರಾವರಿ ಸೌಲಭ್ಯಸಾಕೇ ಎಂದು ನೋಡಿದರೆ ಖಂಡಿತವಾಗಿಯೂ ಇಲ್ಲ. Chemical fertilisers ಕೊಡಬೇಕು, ಇಲ್ಲವೆ ಇತರ ಗೊಬ್ಬರಗಳು ಹೆಚ್ಚಾಗಿ ಸಿಕ್ಕುವಂತೆ ಮಾಡಬೇಕು. ಎರಡುತಿಂಗಳ ಕಾಲ ಅಸೆಂಬ್ಲಿ ಅಧಿವೇಶನದಲ್ಲಿ ಕುಳಿತು, ನಾವು ಹದಿನಾರು ಜನ ಮಂತ್ರಿ ಉಪಮಂತ್ರಿಗಳು ಸರ್ಕಾರವನ್ನು ನಡೆಸುತ್ತೇವೆಂದು ಹೇಳಬಹುದು. ಸರ್ಕಾರದ ನೀತಿ ಸರಿಯಾದ ರೀತಿಯಲ್ಲಿ ಪೂರ್ಣಗೊಳ್ಳದೆ ಇರುವುದಕ್ಕೆ ನಾವು ಜವಾಬ್ದಾರರು ಎಂದು ಹೇಳುತ್ತೇನೆ. ನಾವು ಎಂದರೆ ವಿರೋಧ ಪಕ್ಷವೆಂದು ತಿಳಿಯಕೂಡದು. ಸರ್ಕಾರದ ಆಡಳಿತ ಸುಲಲಿತವಾಗಿ ನಡೆಯುವುದಕ್ಕೆ ಸಹಕಾರವನ್ನು ಕೊಡತಕ್ಕ ಕರ್ತವ್ಯ ನಮ್ಮದೂ ಮತ್ತು ನಮ್ಮ ಪಕ್ಷದ್ದೂ ಆಗಿದೆ. ಸಹಕಾರವಿಲ್ಲದೆ ಹೋದರೆ ವೈಯಕ್ತಿಕವಾದ ಯಾವುದೋ ಒಂದು ಸ್ವಾರ್ಥತೆಯಿಂದ ಸರ್ಕಾರ ನಡೆಯುತ್ತದೆಂದರೆ ಯಾರೂ ತಪ್ಪು ತಿಳಿದುಕೊಳ್ಳಕೂಡದು. ಒಟ್ಟಿನಲ್ಲಿ ನೋಡಿದರೆ ಸಹಕಾರವಿಲ್ಲ. ಇದಕ್ಕೆ ಬೇಕಾದರೆ ರುಜುವಾತು ಕೊಡುವುದಕ್ಕೆ ತಯಾರಿದ್ದೇನೆ. ಯಾವ ಸರ್ಕಾರವನ್ನು ನಡೆಸುತ್ತಿದ್ದೀರೋ ಆ ಸರ್ಕಾರ ಸರಿಯಾಗಿ ನಡೆಯುವುದಕ್ಕೆ ನಿಮ್ಮಲ್ಲಿ ಇಂಥ ತಪ್ಪಿದೆ ಅದನ್ನು ಸರಿಮಾಡಿಕೊಳ್ಳಿ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಸಾರ್ವಜನಿಕರ ಹಣ ಸರಿಯಾಗಿ ವಿನಿಯೋಗವಾಗದೆ ದುರ್ವ್ಯಯವಾದರೆ, they must be sent to gallows. ಆ ಮಟ್ಟಕ್ಕೆ ಬರಬೇಕು. ಹಾಗೆ ಬಂದಹೊರತು ಪ್ರತಿಫಲ ದೊರಕುವುದಿಲ್ಲ. ಈ ತತ್ವವನ್ನು ಅನುಷ್ಠಾನಕ್ಕೆ ತರದೆ ಇದ್ದರೆ ಉಪಯೋಗವಿಲ್ಲ.

ಮಾನ್ಯ ಪಬ್ಲಿಕ್ ವರ್ಕ್ಸ್ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಅವರು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ; ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ನಿಜ ; ಆದರೆ ಅವರಿಗೆ ಒಂದು ವಿಷಯವನ್ನು ಹೇಳುತ್ತೇನೆ. ಅವರು ಮೈಮರೆಯಬಾರದು. ನಮ್ಮ ಜಿಲ್ಲೆಯಲ್ಲಿ ಗೊರೂರು ಪ್ರಾಜೆಕ್ಟ್ ಎಷ್ಟೋ ವರ್ಷಗಳಿಂದ ಇದೆ. ನಾನು ವಿದ್ಯಾರ್ಥಿಯಾಗಿದ್ದಾಗ ಸರ್ವೆ ಕೆಲಸ ಮಾಡಿದರು. ಅದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಈ ಪ್ರಾಜೆಕ್ಟ್ ಪೂರ್ತಿಯಾದರೆ, ತಜ್ಞರು ಹೇಳಿರುವಂತೆ, ಹಾಸನ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. 65 ಸಾವಿರ ಎಕರೆ ಜಮೀನು ನೀರಾವರಿಯಾಗುತ್ತದೆ. ಈ ಭಾಗದಲ್ಲಿ ಮೂರು ಸಕ್ಕರೆ ಕಂಪನಿಗಳನ್ನು ಪ್ರಾರಂಭ ಮಾಡ

ಬಹುದು. ಇಷ್ಟಾದರೂ ಇವತ್ತಿನವರೆಗೂ ಅನುಷ್ಠಾನಕ್ಕೆ ತಂದಿಲ್ಲ. ಇದಕ್ಕೆ ಭವಿಷ್ಯ ಉಜ್ವಲವಾಗಿದೆ ಎಂದು ತಿಳಿದುಕೊಂಡು ನಮ್ಮ ಪಬ್ಲಿಕ್ ವರ್ಕ್ಸ್ ಮಂತ್ರಿಗಳು ಈ ಬಗ್ಗೆ ತೀಕ್ಷ್ಣವಾದ ಕಾರ್ಯಕ್ರಮವನ್ನು ತೆಗೆದುಕೊಂಡು, ಯಾವ ವಿಧವಾದ ಅಡ್ಡಿ ಆತಂಕಗಳಿಗೂ ಗಮನ ಕೊಡದೆ, ಸಾರ್ವಜನಿಕರ ಮತ್ತು ದೇಶದ ಹಿತದೃಷ್ಟಿಯಿಂದ ಒತ್ತಾಯಪಾಡಿ ಮೂರನೆಯ ಯೋಜನೆಯಲ್ಲಿ ಸೇರಿಸುತ್ತಾರೆಂದು ನಂಬಿದ್ದೇನೆ.

ಇನ್ನು ರಸ್ತೆಗಳ ವಿಚಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮುಂದೆ ವಿಲೇಜ್ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಮಾಡಿದಾಗ ರಸ್ತೆಗಳ ಜವಾಬ್ದಾರಿಯನ್ನು ಆಯಾ ವಿಲೇಜ್ ಪಂಚಾಯಿತಿ ಅಥವ ಸ್ಥಳೀಯ ಸಂಸ್ಥೆಗಳು ವಹಿಸಿಕೊಳ್ಳಬೇಕೆಂಬ ಸೂಚನೆ ಇದೆ. ಅದಕ್ಕೆ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿಕೊಟ್ಟರೆ ಕೆಲಸಕಾರ್ಯಗಳು ಸರಿಯಾಗಿ ನಡೆಯುತ್ತವೆ. ಸಂಚಾರ ಸೌಲಭ್ಯಗಳು ಜಾಗ್ರತೆಯಾಗಿ ಆಗುವಂತೆ ಅವಕಾಶಮಾಡಿಕೊಡಬೇಕೆಂದು ಹೇಳುತ್ತೇನೆ.

ಒಂದು ಜಿಲ್ಲೆಯಿಂದ, ಒಂದು ತಾಲ್ಲೂಕಿಗೆ, ಒಂದು ಪ್ರಾಂತದಿಂದ ಮತ್ತೊಂದು ಕಡೆಗೆ ಹೋಗಬೇಕಾದರೆ ವಾಹನ ಸೌಕರ್ಯಗಳು ಮತ್ತು ಸಂಚಾರ ಸೌಕರ್ಯಗಳು ಹೆಚ್ಚಾಗಬೇಕು. ಪ್ರಕೃತಿಸುಂದರವಾದ ಹೇಮಾವತಿ ನದಿಯು ನಮ್ಮ ತಾಲ್ಲೂಕಿನಲ್ಲಿ ಹರಿಯುತ್ತದೆ. ನಾವು ಮರಿಯಪ್ಪನವರ ಊರಿಗೆ ಹೋಗಬೇಕಾದರೆ ದೊಡ್ಡ ಹೊಳೆಯಾದ ಹೇಮಾವತಿ ಅಡ್ಡಲಾಗಿರುತ್ತದೆ. ಮರಿಯಪ್ಪನವರ ನೆಂಟಸ್ತನ ಮಾಡಿಕೊಳ್ಳೋಣವೆಂದರೆ ಹೋಗಿಬರುವುದಕ್ಕೆ ಅವಕಾಶವಿಲ್ಲದೆ ಇದೆ. ಈ ದೃಷ್ಟಿಯಿಂದ ಗನ್ನಿಕಡ, ಈಗ ಶ್ರೀನಿವಾಸಪುರ ಎಂದು ಕರೆಯುವ ಸ್ಥಳದಲ್ಲಿ ಒಂದು ಸೇತುವೆ ಬೇಕಾಗಿದೆ. ಅದನ್ನು ಮಾಡಿಕೊಡಬೇಕು. ಮಂಡ್ಯ ಜಿಲ್ಲೆಯ ಮಂದಗೆರೆ ಎಂಬಲ್ಲಿ ಗೋಮಟೇಶ್ವರ ಸ್ವಾಮಿಯ ಭಕ್ತಾದಿಗಳು ಒಂದು ಲಕ್ಷ ರೂಪಾಯಿ ಖರ್ಚುಮಾಡಿ ಹೇಮಾವತಿ ನದಿಯ ದಡದಲ್ಲಿ ಒಂದು ಛತ್ರವನ್ನು ಕಟ್ಟಿಸಿದ್ದಾರೆ. ಆ ಛತ್ರಕ್ಕೆ ಮೈಸೂರಿನಿಂದ ಹೋಗಬೇಕಾದರೆ ಹೊಳೆ ಬಂದಾಗ ಆಗುವುದಿಲ್ಲ. ಆದುದರಿಂದ ಮಂದಗೆರೆ ಬಳಿ ಒಂದು ಸೇತುವೆಯಾಗಬೇಕು ಎಂದು ಹೇಳುತ್ತೇನೆ.

ಈ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಹೆಚ್ಚು ಗಮನಕೊಟ್ಟು ನಡೆಸುತ್ತಾರೆಂದು ನಂಬಿದ್ದೇನೆ. ಮಾನ್ಯ ಅಧ್ಯಕ್ಷರು ಇಷ್ಟು ದೊಡ್ಡ ಮನಸ್ಸುಮಾಡಿ ನನಗೆ ತೋರಿದ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, 1959-60ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದಿಟ್ಟಿರುವುದಕ್ಕಾಗಿ ಆರ್ಥಿಕ ಸಚಿವರನ್ನು ಅಭಿನಂದಿಸುತ್ತಾ ಕೆಲವು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ. ಇದನ್ನು ನೋಡಿದರೆ ಆರ್ಥಿಕಸಚಿವರು ಬಹಳ ಚತುರರೆಂದು ವೇದ್ಯವಾಗುತ್ತದೆ. ಏಕೆಂದರೆ, ಕಾಂಗ್ರೆಸ್ ಸರ್ಕಾರ ಬಂದ ಮೇಲೆ, ಈ ಮಾನ್ಯ ಸಚಿವರು ಗಣನೀಯವಾದ ಕೆಲವು ಕೆಲಸಗಳನ್ನು ಮಾಡಿದ್ದಾರೆ. ಈ ಹೊತ್ತಿಗೂ ಅವರು ಶಕ್ತಿಮೀರಿ ಕೆಲಸಮಾಡುತ್ತಿದ್ದಾರೆಂದು ನಾನು ಹೇಳಬಲ್ಲೆ. ಅದರಿಂದಾಗಿ ದೇಶದ ಪ್ರಗತಿ ಮುಂದೆ ಸಾಗುತ್ತಿದೆಯೆಂದು ನಾನು ಹೇಳಬೇಕಾಗಿದೆ. ಆದರೂ ದೇಶದಲ್ಲಿ 77 ಭಾಗದಷ್ಟು ಜನರು ಹಳ್ಳಿಯಲ್ಲೇ ವಾಸಮಾಡುತ್ತಿದ್ದು ಕೇವಲ 23 ಭಾಗದಷ್ಟು ಜನ ಪಟ್ಟಣಗಳಲ್ಲಿದ್ದರೂ, ನಮ್ಮ ಆರ್ಥಿಕಸಚಿವರು ಹಳ್ಳಿಗಾಡಿನ ಪ್ರದೇಶದ ಅಭಿವೃದ್ಧಿಗಾಗಿ ನ್ಯಾಯವಾಗಿ ಎಷ್ಟು ಹಣವನ್ನು ಒದಗಿಸಬೇಕೋ ಅಷ್ಟನ್ನು ಒದಗಿಸುತ್ತಿಲ್ಲ. ಎಲ್ಲಿಯವರೆಗೆ ಹಳ್ಳಿಗಳ ಉದ್ಧಾರವಾಗುವುದಿಲ್ಲವೋ ಅಲ್ಲಿಯವರೆಗೂ ದೇಶ ಉದ್ಧಾರವಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ಹಳ್ಳಿಗಳಕಡೆಗೆ ಲಕ್ಷ್ಯಕೊಡುವುದು ಅಗತ್ಯವೆಂದು ನಾನು ಸರ್ಕಾರದವರಿಗೆ ಮನವಿಮಾಡಿಕೊಳ್ಳುತ್ತೇನೆ.

ಗ್ರಾಮಾಂತರಗಳಲ್ಲಿ ವ್ಯವಸಾಯಮಾಡತಕ್ಕ ಜನರಿಗೆ ನಿಜವಾಗಿಯೂ ಜಮೀನು ಸಿಕ್ಕುತ್ತಿಲ್ಲ. ಅದರಲ್ಲೂ ಈಚೆಗೆ 1-1½ ವರ್ಷದಿಂದ ಜಮೀನು ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಮಾನ್ಯ ರೆವಿನ್ಯೂ ಮಂತ್ರಿಗಳು ಆದಷ್ಟು ಜಾಗ್ರತೆ ಹಳ್ಳಿಯ ರೈತಾಪಿ ಜನರಿಗೆ ಜಮೀನು ಸಿಕ್ಕುವಂತೆ ಜಾಗ್ರತೆ ವಿಲೇವಾರಿಗೆ ಏರ್ಪಾಟು ಮಾಡಬೇಕೆಂದು ಹೇಳುತ್ತೇನೆ.

ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಹೊಸದಾಗಿ ಒಂದು ಕಾನೂನನ್ನು ತಂದು (a), (b), (c), (d) ಎಂದು ಕಂಟ್ರಾಕ್ಟರುಗಳನ್ನು ನಾಲ್ಕು ತರವಾಗಿ ವಿಂಗಡಿಸಿದ್ದಾರೆ. ಪ್ರತಿಯೊಬ್ಬ ಕಂಟ್ರಾಕ್ಟರೂ ಇಷ್ಟಿಷ್ಟು ರೂಪಾಯಿಗಳ encumbrance certificateನ್ನು ಕೊಟ್ಟು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ವಿಧಾಯಕವಮಾಡಿದ್ದಾರೆ. ಹೀಗೆ ಕಂಟ್ರಾಕ್ಟರುಗಳು ಹತ್ತು ಸಾವಿರ, 50,000 ರೂಪಾಯಿಗಳ ಸಾಲ್ವೆನ್ಸಿ ಕೊಡಬೇಕೆಂದರೆ ಹೇಗೆ ? ಒಳ್ಳೆಯ ನುರಿತಂಥ ಕಂಟ್ರಾಕ್ಟರುಗಳಿಗೆ ಆಸ್ತಿಯಿರುವುದಿಲ್ಲ. ಅಂಥವರನ್ನು ಸಾಲ್ವೆನ್ಸಿ ಸರ್ಟಿಫಿಕೇಟ್ ಕೇಳಿದರೆ ಹೇಗೆ ಕೊಟ್ಟಾರು? ಇದರಿಂದಾಗಿ ನಿಮಗೆ ಒಳ್ಳೆಯ ಕಂಟ್ರಾಕ್ಟರುಗಳು ಸಿಕ್ಕುವುದಿಲ್ಲ. ಆದ್ದರಿಂದ ಈ ಷರತ್ತನ್ನು ತೆಗೆದು ಮೊದಲಿದ್ದಂತೆ ಮಾಡುವುದು ಅಗತ್ಯವೆಂದು ನಾನು ಸರ್ಕಾರದವರಿಗೆ ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಕಂಟ್ರಾಕ್ಟರುಗಳನು ರಿಜಿಸ್ಟರ್ ಮಾಡಿಸಬೇಕೆಂದು ಅನೇಕಸಲ ಈ ಸಭೆಯಲ್ಲಿಯೇ ಒತ್ತಾಯಬಂತು.

ಶ್ರೀ ಟಿ. ಹನುಮಯ್ಯ.—ಯಾವ ಸಭೆಯಲ್ಲೂ ಒತ್ತಾಯ ಬಂದದ್ದು ನನಗೆ ಕಂಡುಬಂದಿಲ್ಲ, ತಾವೇನು ಮಾಡುತ್ತೀರಿ ಎಂದರೆ ಯಾವಾಗಲೂ ಸರ್ಕಾರಿ ಅಧಿಕಾರಿಗಳು ಹೇಳಿದ್ದನ್ನು ಮಾಡುವುದು ಅಥವಾ ಬೇರೆ ಯಾವುದೇ ದೇಶದಲ್ಲಿ ಹೀಗೆ ಮಾಡಿದ್ದಾರೆಂದು ಗೆಜೆಟ್ಟಿನಲ್ಲಿ ನೋಡಿ, ನಮ್ಮ ಜನರ ಸ್ಥಿತಿಗತಿಗಳೇನು, ಅಲ್ಲಿನ ಜನರ ಸ್ಥಿತಿಗತಿಗಳೇನು ಎಂಬ ತಾರತಮ್ಯ ನೋಡದೆ ಮಾಡಿಬಿಡುತ್ತೀರಿ. ಯಾವಾಗಲೂ ದೇಶದ ಜನರ ಕಷ್ಟಸುಖಗಳನ್ನು ನೋಡಿ ಮಾಡಬೇಕೇ ಹೊರತು ಬೇರೆ ದೇಶದಲ್ಲಿ ಮಾಡಿದ್ದಾರೆಂದು ನಾವು ಇಲ್ಲಿ ಮಾಡುವುದು ಸರಿಯಲ್ಲ. ಈಗ ನೀವು ಹಾಕಿರುವ ಷರತ್ತಿನಿಂದಾಗಿ ಅನೇಕ ಒಳ್ಳೊಳ್ಳೆಯ ಕಂಟ್ರಾಕ್ಟರುಗಳು ಮುಂದೆ ಬರುತ್ತಿಲ್ಲ. ನಿಜವಾಗಿಯೂ ಬಡ ಕಂಟ್ರಾಕ್ಟರುಗಳಿಗೆ ತಾವು ಅವಕಾಶಕೊಟ್ಟಹಾಗಾಗುವುದಿಲ್ಲ. ಐಶ್ವರ್ಯವಂತರಿಗೆ ತಾವು ಉತ್ತೇಜನ ಕೊಟ್ಟಂತಾಗುತ್ತದೆ.

ಆಮೇಲೆ, ಸಹಕಾರ ಸಂಘಗಳ ಕಾಲೊನಿಗಳನ್ನು ಅಲ್ಲಲ್ಲೇ ಏರ್ಪಾಡುಮಾಡಿ ಜನರಿಗೆ ಹೆಚ್ಚಿನ ಆಹಾರ ಉತ್ಪನ್ನ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಏಕೆಂದರೆ ದೇಶದಲ್ಲಿ ಸುಮಾರು ಶೇಕಡ 75 ಭಾಗದಷ್ಟು ಜನ ವ್ಯವಸಾಯಗಾರರಾಗಿದ್ದರೂ ಕೂಡ ಇವತ್ತು ದೇಶದಲ್ಲಿ ಆಹಾರ ಅಭಾವ ಬಂದಿದೆ. ಇವತ್ತು ವ್ಯವಸಾಯಗಾರರ ಮೇಲೆ ಎಲ್ಲಾ ತೆರಿಗೆಗಳನ್ನೂ

(ಶ್ರೀ ಟಿ. ಹನುಮಯ್ಯ)

ಹಾಕುತ್ತಾರೆ. ಜೊತೆಗೆ ಅವನು ಬೆಳೆದ ಬೆಳೆಯನ್ನು ಕಂಟ್ರೋಲ್ ರೇಟಿನಲ್ಲಿ ಕೊಡಬೇಕೆಂದು ಹೇಳುತ್ತಾರೆ. ವ್ಯವಸಾಯಗಾರನಿಗೆ ಈಗ ಒಂದು ಗುಳ, ಒಂದು ಗಾಡಿಪಟ್ಟೆ ಬೇಕು ಎಂದರೆ ಅವನು ಬ್ಲಾಕ್‌ಮಾರ್ಕೆಟ್ಟಿನಲ್ಲಿ ತೆಗೆದುಕೊಳ್ಳಬೇಕಾಗಿದೆ. ಹೀಗಿರುವಾಗ ರೆವಿನ್ಯೂ ಮಂತ್ರಿಗಳು ಕಂದಾಯ ಜಾಸ್ತಿಬೇಕು, ದುಡ್ಡು ಜಾಗ್ರತೆ ವಸೂಲು ಮಾಡಬೇಕು ಎಂದು ಏನೋ ಬಹಳ ಜೋರಾಗಿ ಹೇಳುತ್ತಾರೆ. ಮುಖ್ಯವಾಗಿ ಬೀಗದ ಕೈ ಅವರ ಕೈಲಿ ಇದೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮಂತ್ರಿಗಳು).—ರೆವಿನ್ಯೂ ಮಂತ್ರಿಗಳ ಕೈಲಿ ಹೇಗೆ ಇದೆ? ಹಣಕಾಸಿನ ಮಂತ್ರಿಗಳ ಕೈಲಿ ಇದೆ.

ಶ್ರೀ ಟಿ ಹನುಮಯ್ಯ.—ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ರೆವಿನ್ಯೂ ಮಂತ್ರಿಗಳ ಕೈಲಿ ಆದಾಯ ಹಿಡಿತ ಇತ್ತು. ಆಗ ವ್ಯವಸಾಯಗಾರರಿಗೆ ಏನೂ ಮಾಡಿದಿರಿ? ಅವರಿಗೆ ಯಾವ ಸೌಕರ್ಯವನ್ನು ಒದಗಿಸುವ ವ್ಯವಸ್ಥೆ ಮಾಡಿಲ್ಲ. ವ್ಯವಸಾಯಗಾರರು ಯಾವ ಜಮೀನಿನಲ್ಲಿ ಏನೇನು ಬೆಳೆಯುತ್ತಾರೆಂಬುದಕ್ಕೆ ಸಾಯಿಲ್ ಸರ್ವೇ ಏನಾದರೂ ಮಾಡಿದ್ದೀರಾ? ಆ ರೀತಿ ಮಾಡಿದ್ದರೆ ಹೇಳಿ. ಇವತ್ತು ಒಳ್ಳೆಯ ಕಷ್ಟ ಭೂಮಿಯಲ್ಲಿ ನೀರುಳ್ಳಿ ಬೆಳೆಯುವುದನ್ನು ಕಂಡುಹಿಡಿದಿದ್ದಾರೆ. ರೈತರು ತಾವಾಗಿಯೇ ಆ ಬೆಳೆಯನ್ನು ಬೆಳೆದುಬಿಟ್ಟಿರುವುದನ್ನು ನೋಡಿ ಮಂತ್ರಿಗಳು ನೀರಾವರಿ ಇಲ್ಲದೇ ಇರುವ ಭೂಮಿಯಲ್ಲಿ ನೀರುಳ್ಳಿ ಬೆಳೆಯುತ್ತಾರೆಂದು ಆಶ್ಚರ್ಯಪಟ್ಟು ಇದನ್ನು ಯಾರು ಕಂಡುಹಿಡಿದಿದ್ದು ಎಂದು ಕೇಳಿದರು.

ಶ್ರೀ ಟಿ. ಮರಿಯಪ್ಪ.—ರೈತರು ತಾವಾಗಿ ಅದನ್ನು ಬೆಳೆಯುವುದರಿಂದ ದೇಶಕ್ಕೆ ಉಳಿತಾಯ ಖಂಡಿತ.

ಶ್ರೀ ಟಿ. ಹನುಮಯ್ಯ.—ವ್ಯವಸಾಯದ ಅಧಿಕಾರಿಗಳು ಮತ್ತು ಆ ಇಲಾಖೆಯಲ್ಲಿರುವವರು ಏನು ಮಾಡುತ್ತಾರೆಂದು ನಾನು ಕೇಳುತ್ತೇನೆ. ಅವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಹೋಗಿ ಸಾಯಿಲ್ ಸರ್ವೆ ಮಾಡಬಹುದು. ಯಾವ ಯಾವ ಭೂಮಿಯಲ್ಲಿ ಏನೇನು ಬೆಳೆಯುತ್ತಾರೆಂಬುದನ್ನು ತಿಳಿಯಲು ರೈತರ ಜೊತೆಯಲ್ಲಿಯೇ ಕುಳಿತುಕೊಂಡು, ಅವರೊಡನೆ ಮಾತನಾಡಿ ಯಾವಯಾವ ಕಾಲದಲ್ಲಿ ಏನೇನು ಬೆಳೆಯಾಗುತ್ತದೆ ಎಂಬ ವಿವರಗಳನ್ನು ವಿಶದವಾಗಿ ರೈತರಿಂದ ಪಡೆದು ಆಯಾ ಬೆಳೆಗಳನ್ನು ಬೆಳೆಯುವ ಕಾಲಕ್ಕೆ ರೈತರಿಗೆ ತಕ್ಕ ಸೌಕರ್ಯಗಳನ್ನು ವ್ಯವಸಾಯದ ಇಲಾಖೆಯ ಅಧಿಕಾರಿಗಳು ಕಲ್ಪಿಸಿಕೊಟ್ಟು ಇಂಥಿಂಥ ಕಾಲದಲ್ಲಿ ರಾಗಿ, ಜೋಳ ಬೆಳೆಯಿರಿ ಎಂದು ಹೇಳಿದರೆ ದೇಶಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಮುಖ್ಯವಾಗಿ ವ್ಯವಸಾಯದ ಅಭಿವೃದ್ಧಿಯನ್ನು ಮಾಡುವುದಕ್ಕೆ ಸರ್ಕಾರದವರು ಹೆಚ್ಚಿಗೆ ನಿಗಾಕೊಡಬೇಕು. ಜೊತೆಗೆ ವ್ಯವಸಾಯ ಸಹಕಾರ ಕಾಲೋನಿಗಳನ್ನು ಮಾಡುವುದರಿಂದ ಜನರಿಗೆ ಹೆಚ್ಚಿನ ಸಹಾಯವಾಗುತ್ತದೆ. ಹಿಂದೆ ಈ ರೀತಿ ಮಾಡಿದರೆ ಹೆಚ್ಚಿನ ಅಭಿವೃದ್ಧಿಯಾಗುವುದಿಲ್ಲವೆಂದು ಅನೇಕ ಮಹಾಶಯರು ಹೇಳಿದ್ದರು. ನಾನು ಅದನ್ನೂ ಕೂಡ ಖಂಡಿತ ಒಪ್ಪಿಕೊಳ್ಳುತ್ತೇನೆ. ಹಿಂದೆ ರೈತಾಪಿ ಜನಗಳು ಒಟ್ಟುಒಟ್ಟಿಗೆ ವ್ಯವಸಾಯ ಮಾಡುತ್ತಿದ್ದರು, ಬೇಸಾಯ ಮಾಡುತ್ತಿದ್ದರು. ಐದು-ಹತ್ತು ಜನ ಒಬ್ಬರ ಜಮೀನು ತೆಗೆದುಕೊಂಡು ಊರಿನಲ್ಲೆಲ್ಲಾ ಹೋಗಿ ಉತ್ತುಬಿತ್ತಿ ಬೇಸಾಯ ಮಾಡುತ್ತಿದ್ದರು. ಹೀಗೆ ಸಹಕಾರತತ್ವದ ಮೇಲೆ ವ್ಯವಸಾಯ ಮಾಡುತ್ತಿದ್ದರು. ಈಚೀಚೆಗೆ ಹಳ್ಳಿಗಳಲ್ಲಿ ಲಾಯರುಗಳು ಜಾಸ್ತಿ ಹುಟ್ಟಿಕೊಂಡು ಒಬ್ಬರಿಗೊಬ್ಬರಿಗೆ ವ್ಯಾಜ್ಯಗಳು ಸಂಭವಿಸಿಕೊಂಡು 24 ಗಂಟೆ ಹೊತ್ತೂ ಅನೇಕ ವ್ಯವಸಾಯಗಾರರು ಕೋರ್ಟು ಕಚೇರಿಗಳಲ್ಲಿರುವುದರಿಂದ ವ್ಯವಸಾಯದ ಕಡೆ ಅವರ ಗಮನ ಕಡಿಮೆಯಾಗಿದೆ. ಆದ್ದರಿಂದ ವ್ಯವಸಾಯ ಸಹಕಾರ ಕಾಲೊನಿಗಳನ್ನು ಏರ್ಪಾಡು ಮಾಡಬೇಕು. ವ್ಯವಸಾಯಕ್ಕೆ ಸಂಬಂಧಪಟ್ಟ ಗಾಡಿ ಪಟ್ಟೆ ಮತ್ತು ಗುಳಗಳು ರೈತರಿಗೆ ಸುಲಭವಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು ಎಂಬುದಾಗಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ ದೇಶದಲ್ಲಿ ಮೀನಿನ ಸಂಪತ್ತು ಸುಮಾರು 200 ಮೈಲಿ ತೀರ ಪ್ರದೇಶಗಳಲ್ಲಿ ಇದೆ. ಹೆಚ್ಚಿನ ರೀತಿಯಲ್ಲಿ ನಮ್ಮ ದೇಶದಲ್ಲಿ ವಾಣಿಜ್ಯ ಮುಂದೆ ಬರುತ್ತಿದೆಯೆಂದು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ. ಜೊತೆಗೆ ಈಗ ರೆಗ್ಯುಲೇಟೆಡ್ ಮಾರ್ಕೆಟ್ಟಿನಿಂದ ವಾಣಿಜ್ಯದ ಫಸಲುಗಳನ್ನು ಮಾರಾಟ ಮಾಡಲಿಕ್ಕೆ ಸರ್ಕಾರದವರು ಏರ್ಪಾಡುಮಾಡಿದ್ದಾರೆ. ನಾನು ರೈತನಾಗಿರುವುದರಿಂದ ನನಗೆ ಗೊತ್ತಿದೆ. ರೆಗ್ಯುಲೇಟೆಡ್ ಮಾರ್ಕೆಟಿನಲ್ಲಿ ಹತ್ತಿ, ನೆಲಗಡಲೆ ಮುಂತಾದ ಅನೇಕ ಸಾಮಾನುಗಳನ್ನು ಮಾರಾಟ ಮಾಡುವಾಗ ಸೂಪರ್‌ವಿಷನ್ನಿಗೆ ಸರ್ಕಾರದ ಅಧಿಕಾರಿಗಳನ್ನು ಹಾಕಿಬಿಡುತ್ತಾರೆ. ನಿಮಗೇನು ಅನ್ನಿಸುತ್ತದೆ ಅಂದರೆ, ಯಾವ ಸರ್ಕಾರಿ ಅಧಿಕಾರಿಯನ್ನು ಯಾವ ಕೆಲಸಕ್ಕೆ ಕಳುಹಿಸಿದರೂ ಎಲ್ಲದರಲ್ಲೂ ಪರಿಣತರಾಗಿದ್ದಾರೆ, ಜಮೀನು ಕೈಗಾರಿಕೆ, ವ್ಯಾಪಾರ ಇವುಗಳನ್ನು ಸೂಪರ್‌ವಿಷ್ಷ ಮಾಡುವುದರಲ್ಲಿಯೂ ಪರಿಣತನಾಗಿದ್ದಾರೆಂದು ನಿಮ್ಮ ಭಾವನೆ. ಅವರು ಆ ರೀತಿ ಪರಿಣತರಾಗಿರುವುದಿಲ್ಲ. ಆದ್ದರಿಂದ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ಯಾವ ಆಫೀಸರನ್ನು ನೇಮಕಮಾಡಿರುತ್ತೀರೋ ಅಂತಹವನು ವ್ಯಾಪಾರದಲ್ಲಿ ಪರಿಣತರಾಗಿರಬೇಕು. ಸ್ವಲ್ಪ ಅದರಲ್ಲಿ ಅನುಭವಸ್ಥನಾಗಿರಬೇಕು. ಜಮೀನ್ದಾರರು ಅನೇಕ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ವ್ಯಾಪಾರಮಾಡಿ 20 ವರ್ಷಗಳಾದರೂಕೂಡ ದುಡ್ಡು ಆಫೀಸರ ಕೈಗೆ ಬರುವುದಿಲ್ಲ. ಇದನ್ನು ಸರಿಪಡಿಸಬೇಕು. ವ್ಯಾಪಾರದಲ್ಲಿ ಅನುಭವವಿಲ್ಲದೇ ಇರುವವನನ್ನು ತೆಗೆದುಕೊಂಡು ಹೋಗಿ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ನಡೆಸು ಎಂದರೆ ಹೇಗೆ? ಹಳ್ಳಿಯ ರೈತನ ಕಷ್ಟ ರೆಗ್ಯುಲೇಟೆಡ್ ಮಾರ್ಕೆಟ್ ಅಧಿಕಾರಿಗೆ ಗೊತ್ತಿರುವುದಿಲ್ಲ. ಅದನ್ನು ಸರಿಪಡಿಸದಿದ್ದರೆ ಪ್ರಯೋಜನವಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಲ್ಲಿನ ಅಧಿಕಾರಿಗಳಿಗೆ ಸರ್ಕಾರದವರು ಹೆಚ್ಚಿಗೆ ಸೌಲಭ್ಯವನ್ನು ಕೊಡುವುದಿಲ್ಲ. ಕೇಸು ಹಾಕಿದರೂ ಅದು ಮಂತ್ರಿಗಳ ಹತ್ತಿರಬಂದರೂ ಅದನ್ನು ಗಮನಿಸದೆ ಇರುವ ಸಂದರ್ಭಗಳು ಅನೇಕ ಇವೆ. ಅಧಿಕಾರಿಗಳಿಗೆ ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ನಡೆಸುವುದಕ್ಕೆ ಸರಿಯಾದ ಸಿಬ್ಬಂದಿ ಇಲ್ಲ. ಅಧಿಕಾರಿಗಳ ಹತ್ತಿರ ಹೋದರೆ ಹೊಡೆಯುವುದಕ್ಕೆ ಬರುತ್ತಾರೆ. ಕೇಸು ಹಾಕಿದರೆ ಮಂತ್ರಿಗಳು ಅದನ್ನು ಗಮನಕ್ಕೇ ತೆಗೆದುಕೊಳ್ಳುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಆದ್ದರಿಂದ ಸರಿಯಾದ ರೀತಿಯಲ್ಲಿ ಈ ಬಗ್ಗೆ ವ್ಯವಹಾರಮಾಡುವುದಕ್ಕೆ ಸರ್ಕಾರದವರು ಯೋಚನೆಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಚೆಗೆ ಗ್ರಾಮಾಂತರಗಳಲ್ಲಿ ಜಮೀನು ಕೊಡತಕ್ಕದ್ದನ್ನು ಸುಮಾರು ಎರಡು ವರ್ಷಗಳಿಂದ ನಿಲ್ಲಿಸಿದ್ದಾರೆ; ಸರ್ಕಾರದವರು ತೀವ್ರವಾಗಿ ಜಮೀನುಗಳನ್ನು ಸ್ಪಾಟಿನಲ್ಲಿಯೇ ಕೊಡುವಂತೆ ಏರ್ಪಾಡು ಮಾಡುವುದು ಬಹಳ ಅಗತ್ಯವೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಈಗ ಅನೇಕ ಕಡೆಗಳಲ್ಲಿ ಜಮೀನುಗಳನ್ನು ಕೊಡುವುದಕ್ಕೆ ಅವಕಾಶ ಇದೆ. ನಮ್ಮ ದಣಿಯ ಅನ್ನ ಎಂದು ಹೇಳಿಕೊಂಡು ಇವರು ಏನು ಮಾಡುತ್ತಾರೆ? ಏನಿಲ್ಲ ನಾನು ಹೇಳುತ್ತೇನೆ. ಖಂಡಿತವಾಗಿ ಬಡವರಿಗೆ, ಯಾರು ಭೂಮಿ ಉಳುತ್ತಾರೋ, ಯಾರಿಗೆ ಅಂತಹ ಶಕ್ತಿ, ಸಾಮರ್ಥ್ಯ ಇದೆಯೋ ಅಂತಹವರಿಗೆ ಭೂಮಿ ಕೊಡಬೇಕೆಂಬುದಾಗಿ ಸೂಚನೆಕೊಡಬೇಕು. ನೀವು ರೈತನನ್ನು ಕೈಬಿಟ್ಟರೆ ಖಂಡಿತವಾಗಿ ಕಷ್ಟವಾಗುತ್ತದೆ. ಭೂಮಿ ಯಾರಿಗೆ ಇಲ್ಲವೋ ಅಂಥವರಿಗೆ ಕೊಡಬೇಕೆಂಬುದನ್ನು ಮನಸ್ಸಿನಲ್ಲಿಡಬೇಕು. ನೀವು ವ್ಯವಸಾಯಗಾರರ ಮನೆತನದಲ್ಲಿ ಹುಟ್ಟಿಬಂದು ವ್ಯವಸಾಯಗಾರರ ಕಷ್ಟಸುಖಗಳನ್ನು ಚೆನ್ನಾಗಿ ಅರಿತುಕೊಂಡಿರುವವರಾಗಿದ್ದೀರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ವ್ಯವಸಾಯದ ಅಧಿಕಾರಿಗಳಿಗೆ ಸೂಚನೆ ಕೊಡಬೇಕಾಗಿದ್ದರೆ ಜಮೀನುಗಳನ್ನು ಬಡವರಿಗೆ ಮತ್ತು ಭೂಮಿ ಉಳತಕ್ಕಂಥವನಿಗೆ ಸ್ಪಾಟಿನಲ್ಲಿಯೇ ವಿಲೇವಾರಿಯಾಗುವಂತೆ ಹೆಚ್ಚಿನ ಅವಕಾಶವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನವನ್ನು ತೆಗೆದುಕೊಳ್ಳುವುದು ಅಗತ್ಯವೆಂದು ಹೇಳುತ್ತೇನೆ. ಈಗ ಮಂತ್ರಿಗಳು ಏನು ಮಾಡುತ್ತಾರೆಂದರೆ ಹ್ಯಾಂಡ್ ಲೂಂ ಎಗ್ಜಿಬಿಷನ್, ಕಂಬಳಿ ಎಗ್ಜಿಬಿಷನ್—ಹೀಗೆಲ್ಲಾ ಹಾಕಿಬಿಟ್ಟು ಗ್ರಾಮಾಂತರದ ಕೈಗಾರಿಕೆಗಳನ್ನು ಬೆಳಸಲಿಕ್ಕೆ ಅವರು ಏನೂ ಮನಸ್ಸು ಕೊಟ್ಟಿಲ್ಲವೆಂದು ಹೇಳುತ್ತೇನೆ. ಒಂದೊಂದಾಗಿ ಹೇಳುತ್ತೇನೆ. ಜ್ಞಾಪಕ ವಿಡತಕ್ಕಂಥ ವಿಷಯಗಳಿವು. ನಮಗೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದರೂಕೂಡ ಗ್ರಾಮಾಂತರ ಕೈಗಾರಿಕೆಗಳು ಅಭಿವೃದ್ಧಿಯಾಗಿಲ್ಲ. ಏನೆಂದರೆ ಈಚಲು ಚಾಪೆ ಕೈಗಾರಿಕೆಗಳನ್ನು ಭೋವಿ ಜನಾಂಗದವರೂ, ಹರಿಜನರೂ ಮಾಡುತ್ತಾರೆ. ಒಂದು ರೂಪಾಯಿ ಚಾಪೆಯನ್ನು ಎರಡು ಆಣೆ, ನಾಲ್ಕಾಣೆಗೆ ಸಂತೆಯಲ್ಲಿ ಮಾರುತ್ತಾರೆ. ಈ ರೀತಿಯಾಗಿ ಎಲ್ಲ ಜನಾಂಗದವರೂ ತಯಾರುಮಾಡಿದ ಪದಾರ್ಥಗಳನ್ನು ಎಗ್ಜಿಬಿಷನ್‌ಗಳಲ್ಲಿಡುತ್ತಾರೆ. ಮಂತ್ರಿಗಳು ಅದನ್ನು ಓಪನ್ ಮಾಡುವುದಕ್ಕೇ ಇರುವುದು. ಗ್ರಾಮಾಂತರಗಳಲ್ಲಿಯೇ ಈರೀತಿ ಎಲ್ಲವೂ ತಯಾರಾಗಬೇಕಾಗಿದೆ. ಆದ್ದರಿಂದ ಸುಮ್ಮನೆ ಟೂರ್ ಹಾಕಿಕೊಂಡು ಹ್ಯಾಂಡ್‌ಲೂಂ ಎಗ್ಜಿಬಿಷನ್‌ಗಳನ್ನು ಮಾಡಿದರೆ ಏನೂ ಪ್ರಯೋಜನವಿಲ್ಲ. ಇನ್ನು ಚರ್ಮದ ಕೈಗಾರಿಕೆಯೂ ಕೂಡ ಗ್ರಾಮಾಂತರದಲ್ಲಿ ವಿಶೇಷವಾಗಿ ನಡೆಯುತ್ತಿದೆ. ಅದಕ್ಕೆ ಹೆಚ್ಚಿನರೀತಿಯಲ್ಲಿ ಸರ್ಕಾರದವರು ಸಹಾಯ ಮಾಡಬೇಕು. ಚರ್ಮ ಮತ್ತು ಚಪ್ಪಲಿ ಕೈಗಾರಿಕೆ ಕೆಲಸವನ್ನು ಯಾವನು ಮಾಡುತ್ತಾನೋ ಅವನ ಕೈಲಿ ಇಲ್ಲದೆ ಬೇರೆಯವರ ಕೈಲಿ ಇದ್ದುಕೊಂಡು ಒಂದಕ್ಕೆ ಹತ್ತರಷ್ಟು ಇತರರು ದುಡಿಯುತ್ತಾರೆ. ಬೊಂಬೆ ಕೈಗಾರಿಕೆ, ಚರ್ಮದ ಕೈಗಾರಿಕೆಗೆ ಅಷ್ಟು ಪ್ರೋತ್ಸಾಹವಿಲ್ಲ. ಅಲ್ಲಿಯೂಕೂಡ ಸೂಪರ್‌ವಿಷನ್ ಮಾಡುವುದಕ್ಕೆ ಹೋದರೆ ಸ್ವಾತಂತ್ರ್ಯ ಬಂದು ಎಲ್ಲರಿಗೂ ಸಮಾನತೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಎಲವನ್ನೂ ಸರ್ಕಾರದವರ ಕೈಯಲ್ಲಿಯೇ ಇಟ್ಟುಕೊಂಡಿದ್ದಾರೆ. ಆ ಕಡೆಯೂ ನಮಗೆ ಅಧಿಕಾರವಿಲ್ಲ. ಸಮಾಜ ಕಲ್ಯಾಣ ಮಂತ್ರಿಗಳು ದೊಡ್ಡ ದೊಡ್ಡ ಬೆಂಗಳೂರು ಅಂತಹ ಊರುಗಳಲ್ಲಿ ಚಪ್ಪಲ, ಬೂಟ್ಸ್ ಮಾಡುವವರು ಸಾವಿರಾರು ಜನ ಬೀದಿಯಲ್ಲಿ ತಿರುಗಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಆದ್ದರಿಂದ ಒಂದು ಸಹಕಾರದ ತತ್ವದಮೇಲೆ ಫ್ಯಾಕ್ಟರಿಮಾಡಿ, ಹರಿಜನರು ಮಾಡಿದಂಥ ಚಪ್ಪಲಿ, ಬೂಟ್ಸ್‌ಗಳನ್ನು ಪರದೇಶಗಳಿಗೂ ಕೂಡ ಕಳುಹಿಸಿಕೊಡಲಿ. ಆದರೆ ಅಂತಹವುಗಳನ್ನು ಅಂಗಡಿಯಲ್ಲಿಟ್ಟರೆ ಸರ್ಕಾರದವರು ಮಂಜೂರುಮಾಡುವುದೇ ಇಲ್ಲ; ಇತರ ಜನಾಂಗದವರು, ಅಂದರೆ ಬ್ರಾಹ್ಮಣರು, ಲಿಂಗಾಯಿತರು, ಮುಸಲ್ಮಾನರು, ಮೊದಲಿಯಾರ್ ಮುಂತಾದವರು ತಯಾರುಮಾಡಿರುವಂತಹ ಪದಾರ್ಥಗಳಿಗೆ ಸರ್ಕಾರದವರು ಹೆಚ್ಚು ಪ್ರೋತ್ಸಾಹಕೊಟ್ಟು ಮಂಜೂರು ಮಾಡುತ್ತಾರೆ. ಸ್ಟೋರ್ಸ್ ಪರ್ಚೇಸ್ ಕಮಿಟಿಯವರು "ಹರಿಜನರು ತಯಾರುಮಾಡಿದಂಥ ಸಾಮಾನುಗಳು ನೋಡಿ, ಮಹಾಸ್ವಾಮಿ, ಎಷ್ಟು ಚೆನ್ನಾಗಿದೆ, ಬೇಷ್ ಪರವಾ ಇಲ್ಲ. ಚೆನ್ನಾಗಿ ಮಾಡಿ ಸಿದ್ದಾರೆಂದು" ಹೇಳುತ್ತಾರೆ. ಚೆನ್ನಾಗಿ ಮಾಡಿದ್ದಾ

10-30 A.M.

ರೆಂದು ಹೇಳುವುದಿಲ್ಲ. ಸ್ಟೋರ್ಸ್‌ಪರ್ಚೇಸ್ ಕಮಿಟಿಯವರು ಮೊದಲಿಯಾರ್, ಬ್ರಾಹ್ಮಣ, ಲಿಂಗಾಯಿತು ಮುಸಲ್ಮಾನ್ ಪಂಗಡದವರು ತಯಾರುಮಾಡಿದ್ದಂಥ ಪದಾರ್ಥಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಾರೆ. ಹರಿಜನರ ಕೈಗಾರಿಕೆಗಳಿಗೆ ಸರ್ಕಾರದವರು ದಣಿ ಇದ್ದಹಾಗೆ ಎಂದು ನಾನು ಹೇಳುತ್ತೇನೆ. ಅವರ ಯಾವೊಂದು ಕೈಗಾರಿಕೆ ಮಾಡಬೇಕಾದರೆ ಅವರಿಗೆ ಇಲ್ಲಿ ಅವಕಾಶವೇ ಇರುವುದಿಲ್ಲ. ಆದ್ದರಿಂದ ಪ್ರತಿಯೊಂದು ಕಡೆಯಲ್ಲೂ ಅವರು ಯಾವ ಪ್ರಾಂತದಲ್ಲೇ ಇರಲಿ ಒಂದು ಸಮಾನತೆಯನ್ನು ಕೊಡಬೇಕು. ಯಾರೇ ಆ ಕೈಗಾರಿಕೆಯ ಪದಾರ್ಥಗಳನ್ನು ತಯಾರುಮಾಡಿರಲಿ ಅವರ ಕೆಲಸಕ್ಕೆ ಸ್ಟೋರ್ಸ್‌ಪರ್ಚೇಸ್ ಕಮಿಟಿಯವರು ಹೆಚ್ಚಿನ ಪ್ರೋತ್ಸಾಹ ಕೊಡಬೇಕು.

Sri V. P. DEENADAYALU NAIDU (Cubbonpet).—I would like to know where exactly such instances have come up, because I know it has never come to our notice regarding the Stores Purchase Committee. In fact, we gave thousands of orders and they are not able to comply or stand to the requirements. In fact, we are anxious that more and more should be given to them.

ಶ್ರೀ ಟಿ. ಹನುಮಯ್ಯ.—ಅವರು ಸ್ಟೋರ್ಸ್ ಪರ್ಚೇಜ್ ಕಮಿಟಿ ಮೆಂಬರ್ ಆಗಿರುವುದರಿಂದ......

ಶ್ರೀ ಟಿ. ಮರಿಯಪ್ಪ.—ಹರಿಜನರಿಗೆ ಈ ಬಗ್ಗೆ ಹೆಚ್ಚಿಗೆ ಅವಕಾಶವನ್ನು ಕೊಡಬೇಕೆನ್ನುವುದನ್ನು ಒಪ್ಪುತ್ತೇನೆ. ಮುಖ್ಯವಾಗಿ ರೆಗ್ಯುಲರ್ ವರ್ಕರ್ಸಿಗೇ ಹೆಚ್ಚು ಅಕಾಶ ಕೊಡಬೇಕೆಂಬ ಉದ್ದೇಶವಿದೆ.

ಶ್ರೀ ಟಿ. ಹನುಮಯ್ಯ.—ಇನ್ನು ಕೆಲವು ವಿಷಯಗಳನ್ನು ಆರ್ಥಿಕ ಸಚಿವರಿಗೆ ಹೇಳುತ್ತೇನೆ. ನಮ್ಮ ಹರಿಜನರ ಕೈಗಾರಿಕೆಗಳಿಗೆ ಸರ್ಕಾರದವರು ಅಪಾ ಗಮನವನ್ನು ಕೊಡಲಿಲ್ಲ. ನಮ್ಮಲ್ಲಿರುವ ಕೈಗಾ ಗಳಿಗೆ ಸರಿಯಾದ ಪ್ರೋತ್ಸಾಹಕೊಟ್ಟರೆ ಸರ್ಕಾ ರನ್ನು ಒಂದು ಆಣೆಕೂಡ ಕೇಳುವುದಿಲ್ಲ. ಹನ್ನೆರಡು ವರ್ಷಗಳಿಂದ ಎರಡುಸಾರಿ ಮ

(ಶ್ರೀ ಟಿ. ಹನುಮಯ್ಯ)

ಏನು ಮಾಡುತ್ತಿದ್ದೀರಿ? ಚರ್ಮದ ಕೈಗಾರಿಕೆ, ಚಾಪೆ ಕೈಗಾರಿಕೆ, ಚಪ್ಪಲಿ ಕೈಗಾರಿಕೆ, ತಂಗಡಿಚಕ್ಕೆ ಕೈಗಾರಿಕೆ—ಇವುಗಳನ್ನು ಮಾಡುವವರು ನಾವು. ಮುಸಲ್ಮಾನರು, ಬ್ರಾಹ್ಮಣರು, ಲಿಂಗಾಯಿತರು, ವೈಶ್ಯರು--ಇವರೆಲ್ಲಾ ಬಂದು ನಮ್ಮನ್ನೆಲ್ಲಾ ಚೆನ್ನಾಗಿ ದುಡಿಸಿಕೊಂಡು ನಮ್ಮನ್ನು ಹಾಳುಮಾಡುತ್ತಿದ್ದಾರೆ. ನಮ್ಮ ಕೆಲಸಕ್ಕೆ ಸರಿಯಾಗಿ ದುಡ್ಡು ಕೊಡುವುದಕ್ಕಾಗುವುದಿಲ್ಲವೆಂದರೂ ನೀವು ಕೇಳುವುದಿಲ್ಲ. ಕಾಂಪಿಟಿಷನ್ ಮಾಡುತ್ತೀರಿ. ಆಗ ಯಾರು ಬಿಡ್ ಮಾಡುತ್ತಾರೆಂದರೆ ದುಡ್ಡು ಜಾಸ್ತಿ ಇರುವವರು. ನಮ್ಮಿಂದ ಚೆನ್ನಾಗಿ ದುಡಿಸಿಕೊಂಡು ಅವರು ಬಿಡ್‌ಮಾಡುತ್ತಾರೆ. ಇದರಿಂದ ಸರ್ಕಾರದವರಲ್ಲಿ ಏನು ಪ್ರಾರ್ಥನೆ ಮಾಡುತ್ತೇನೆಂದರೆ, ನಮ್ಮ ನಮ್ಮ ಕೈಗಾರಿಕೆಗಳನ್ನು ನಮ್ಮ ಜನಾಂಗದಲ್ಲಿ ಕೆಲಸಮಾಡುವವರಿಗೇ ಕೊಡಿ.

ಶ್ರೀ ಎನ್. ರಾಚಯ್ಯ.—ಹರಿಜನರಿಗೆ ಕಂಟ್ರಾಕ್ಟ್ ಕೊಡುವ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಅನೇಕ ಶಿಫಾರ್ಸುಗಳು ಬಂದಿವೆ. ಆ ಶಿಫಾರ್ಸುಗಳನ್ನೆಲ್ಲಾ ರಾಜ್ಯ ಸರ್ಕಾರ ಇನ್ನೂ ಜಾರಿಗೆ ಕೊಟ್ಟಿಲ್ಲ. ಸಣ್ಣ ಪುಟ್ಟ ಕೈಗಾರಿಕೆಗಳನ್ನು ಹರಿಜನರಲ್ಲಿ ಮುಂದುವರಿಸಬೇಕೆಂಬ ಒಂದು ಆದೇಶ ಕೇಂದ್ರ ಸರ್ಕಾರದಿಂದ ಬಂದಿದೆ. ಅವನ್ನೂ ಕೂಡ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯ.—ಅದಕ್ಕಾಗಿ ಮಾನ್ಯ ಮಂತ್ರಿಗಳಿಗೆ ವಂದನೆಗಳನ್ನು ಅರ್ಪಿಸಬೇಕಾಗಿದೆ. ಮುಖ್ಯವಾಗಿ ಹಿಂದುಳಿದ ಜನಗಳು ಅಭಿವೃದ್ಧಿಯಾಗಬೇಕಾದರೆ ಅವರಲ್ಲಿರತಕ್ಕ ಕೈಗಾರಿಕೆಗಳಿಗೆ ಸರ್ಕಾರದವರ ಹೆಚ್ಚಿನ ಪ್ರೋತ್ಸಾಹಕೊಟ್ಟರೆ ಹರಿಜನರು ಸರ್ಕಾರದವರಿಂದ ವಿಶೇಷ ಸಹಾಯವನ್ನು ಅಪೇಕ್ಷಿಸದೆ ಅವರ ಕಾಲಿನ ಮೇಲೆ ಅವರೇ ನಿಂತುಕೊಳ್ಳುವುದಕ್ಕೆ ತಯಾರಾಗುತ್ತಾರೆ. ಇಲ್ಲದಿದ್ದರೆ ಇತರ ಜನಾಂಗದವರ ಅಪಹಾಸ್ಯಕ್ಕೆ ಗುರಿಯಾಗಬೇಕಾಗುತ್ತದೆ. ಅದನ್ನು ದಯವಿಟ್ಟು ತಪ್ಪಿಸಬೇಕು. ಸ್ವಾತಂತ್ರ್ಯ ಬಂದು ಹನ್ನೆರಡು ವರ್ಷಗಳಾದರೂ ಹರಿಜನರು ತಮ್ಮ ಕಾಲಿನಮೇಲೆ ತಾವು ನಿಂತುಕೊಳ್ಳುವುದಕ್ಕೆ ಏನೇನು ಸೌಕರ್ಯಗಳನ್ನು ಕಲ್ಪಿಸಬೇಕೋ ಅವನ್ನು ಇನ್ನೂ ಕಲ್ಪಿಸಿಕೊಡದಿದ್ದರೆ, ಆಗ ಸರ್ಕಾರದವರಮೇಲೆಯೇ ಪ್ರತಿಯೊಂದು ಸಹಾಯಕ್ಕೂ ಅವರು ಬೀಳಬೇಕಾಗುತ್ತದೆ. ಆದ್ದರಿಂದ ನನ್ನ ಸವಿನಯ ಪ್ರಾರ್ಥನೆ ಏನೆಂದರೆ ಗ್ರಾಮಾಂತರ ಕೈಗಾರಿಕೆಗಳಿಗೆ ಹರಿಜನರಿಗೇ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಕೊಡುವುದು ಅಗತ್ಯವೆಂದು.

ಕೊನೆಯದಾಗಿ ಮದ್ಯಪಾನ ನಿರೋಧದ ಬಗ್ಗೆ ಶ್ರೀ ಮರಿಯಪ್ಪನವರು ಮೊದಲಿನಿಂದಲೂ ಮಂತ್ರಿಮಂಡಲದಲ್ಲಿರುವಂದಿನಿಂದ, ದೇಶದಲ್ಲಿ ಅದು ಪೂರ್ಣವಾಗಿ ಜಾರಿಗೆ ಬರುತ್ತದೆ. ಪ್ರಗತಿ ಪಥದಲ್ಲಿ ಬರುತ್ತದೆ ಎಂದು ಹೇಳುತ್ತಲೇ ಬಂದಿದ್ದಾರೆ. ಈಗ ಏನಾಗಿದೆ ಎಂದರೆ ಒಂದು ಕಡೆ ಕುಡಿಯುವುದು, ಇನ್ನೊಂದುಕಡೆ ಕುಡಿಯದೇ ಇರುವುದು, ಇದರಿಂದ ಜನಗಳಿಗೆ ಖಂಡಿತವಾಗಿ ಒಂದು ನೆಮ್ಮದಿ ಇಲ್ಲ. ಶೇಕಡ 30 ಜನ ಕುಡಿಯುವವರು ಇದ್ದರೂ ಅವರು ಇಂಥಿಂಥ ಜಿಲ್ಲೆಯಲ್ಲಿ ಇನ್ನೂ ಮದ್ಯಪಾನನಿರೋಧ ಜಾರಿಗೆ ಕೊಟ್ಟಿಲ್ಲವೆಂದು ಇತರರಿಗೂ ಬೋಧನೆಮಾಡಿ ಅವರೂಸಹ ಕುಡಿಯುವ ಹಾಗೆ ಮಾಡುತ್ತಾರೆ. ಇದು ಯಾವ ನ್ಯಾಯ? ಹೇಳುವವರು ಕೇಳುವವರು ಇಲ್ಲದೆ ಸರ್ಕಾರದವರು ತಮ್ಮ ಮನಸ್ಸಿಗೆ ಬಂದಂತೆ ಕೆಲವು ಜಿಲ್ಲೆಗಳಲ್ಲಿ ಪಾನನಿರೋಧವನ್ನು ಜಾರಿಗೆ ಕೊಡುವುದು, ಮತ್ತೆ ಕೆಲವು ಜಿಲ್ಲೆಗಳಲ್ಲಿ ಜಾರಿಗೆ ಕೊಡದಿರುವುದು, ಇದರಿಂದ ಅವರ ಮಕ್ಕಳ ವಿದ್ಯಾಭ್ಯಾಸ ಮನೆ, ಎಲ್ಲಾ ಹಾಳಾಗಿ ಹೋಗುತ್ತದೆ. ಆದ್ದರಿಂದ ಸಂಪೂರ್ಣವಾಗಿ ದೇಶದಲ್ಲೆಲ್ಲಾ ಈ ಪ್ರೊಹಿಬಿಷನ್ನನ್ನು ಕೂಡಲೆ ಜಾರಿಗೆ ತರುವುದು ಬಹಳ ಅಗತ್ಯ. ಇಲ್ಲದಿದ್ದರೆ ದೇಶದಲ್ಲಿ ಎಲ್ಲಾಕಡೆಯೂ ಶಾಂತಿಗೆ ಭಂಗ ಬರುತ್ತದೆ. ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆಯೇ ದೇಶದಲ್ಲೆಲ್ಲಾ ಈ ಪ್ರೊಹಿಬಿಷನ್ ಬಗ್ಗೆ ಪ್ರಗತಿ ಬಹಳ ಜೋರಾಗಿ ಆಗುತ್ತದೆ ಎಂದು ಹೇಳುತ್ತಿದ್ದರು. ಒಟ್ಟಿನಲ್ಲಿ ಇವತ್ತು ಪ್ರೊಹಿಬಿಷನ್ ಪಾಲಿಸಿಯೂಕೂಡ ಒಂದು ಹೆಜ್ಜೆ ಮುಂದೆ ಹೋಗಿದೆಯೆಂದು ಹೇಳಬಹುದು. ಆದ್ದರಿಂದ ಆದಷ್ಟು ಜಾಗ್ರತೆ ದೇಶದ ಕಲ್ಯಾಣಕ್ಕೋಸ್ಕರ ತಾವು ದುಡಿಯಬೇಕು. ದೇಶದಲ್ಲೆಲ್ಲಾ ಪ್ರೊಹಿಬಿಷನ್ ಪಾಲಿಸಿಯನ್ನು ಜಾರಿಗೆ ತಂದು ಜನಗಳು ನಗುಮುಖದಲ್ಲಿರಬೇಕು. ಕಳ್ಳತನದ ಸಾರಾಯಿಭಟ್ಟಿ ಕುಡಿದೇ ಬಹಳ ಕೆಟ್ಟಿದ್ದಾರೆ. ಹರಿಜನರು ಎಲ್ಲರೂ ಕುಡಿಯದಿದ್ದರೂ ಬೇರೆ ಜಾತಿಯವರು ಫಸ್ಟ್‌ಕ್ಲಾಸಾಗಿ ಅದರಲ್ಲಿ ತಯಾರಾಗಿದ್ದಾರೆ. ನಮ್ಮ ಜನ ಬಹಳ ಹುಷಾರಾಗಿದ್ದಾರೆಂಬುದನ್ನು ಕಂಡು ನನಗೇನೋ ಬಲು ಸಂತೋಷ. ಹರಿಜನ ಕೇರಿಯಲ್ಲಿ ಈಗ ಕಳ್ಳಭಟ್ಟಿ ಸಾರಾಯಿ ತಯಾರಾಗುತ್ತಿಲ್ಲ. ಕುಡಿಯದೇ ಇರತಕ್ಕ ಲಿಂಗಾಯಿತರು, ಬ್ರಾಹ್ಮಣರು ಅವರೇ ಈ ಸಾರಾಯಿ ವ್ಯಾಪಾರಕ್ಕೆ ತಯಾರಾಗಿದ್ದಾರೆ. ಅದು ಒಂದು ಸಂತೋಷದವರದಿ. ಇಷ್ಟು ದಿವಸ ಅವರಿಗೆ ಆ ರುಚಿ ಗೊತ್ತಿರಲಿಲ್ಲ. ಅವರು ಮಾಡುತ್ತಿರುವ ಕಾರ್ಯಗಳನ್ನು ನಮಗೆ ಕೊಟ್ಟಿಲ್ಲ. ನಮ್ಮ ಕಾರ್ಯವನ್ನು ಅವರು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಸರ್ಕಾರದವರು ಇನ್ನು ಮುಂದೆ ಕಳ್ಳಭಟ್ಟಿ ಸಾರಾಯಿ ಆಗುವುದನ್ನು ತಡೆಮಾಡಬೇಕು.

ಇನ್ನು ಪೋಲೀಸ್ ಇಲಾಖೆಯ ವಿಷಯ. ಇದು ಬಹಳ ವಿಚಿತ್ರವಾಗಿದೆ. ಕಳ್ಳಭಟ್ಟಿ ಸಾರಾಯಿ ತಯಾರು ಮಾಡುವಂಥವನನ್ನು ಬಿಟ್ಟು ಬಿಟ್ಟು ಅವನಿಂದ ಮಾಮೂಲು ಬರುತ್ತದೆಂದು ಅನೇಕ ಪೋಲೀಸಿನವರು ದುರ್ವ್ಯಾಪಾರಕ್ಕೆ ಇಳಿಯುತ್ತಿದ್ದಾರೆ. ಆದ್ದರಿಂದ ಹೋಂ ಮಿನಿಸ್ಟರ್‌ಗೆ ಎಕ್ಸೈಜು ಮತ್ತು ಪ್ರೊಹಿಬಿಷನ್ ಶಾಖೆಗಳನ್ನು ವಹಿಸಿದರೆ ಪ್ರೊಹಿಬಿಷನ್ ಕ್ರಮ ಚೆನ್ನಾಗಿ ನಡೆಯುತ್ತದೆ. ಪ್ರೊಹಿಬಿಷನ್ ಪಾಲಿಸಿಯನ್ನು ಪೋಲೀಸ್ ಇಲಾಖೆಗೆ ಜಾರಿಗೆ ತರುವಂತೆ ಕೊಟ್ಟರೆ ಅದು ಸಾಧ್ಯವಿಲ್ಲ. ಅಲ್ಲಲ್ಲಿ ವಿಜಿಲೆನ್ಸ್ ಕಮಿಟಿ ಮಾಡಬೇಕು. ಪ್ರತಿಯೊಂದು ತಾಲ್ಲೂಕ್ ಹೋಬಳಿ ಲೆವಲ್ಲಿನಲ್ಲೂ ಒಂದೊಂದು ಜೀಪ್ ಕೊಟ್ಟು ಈ ಪಾನನಿರೋಧವನ್ನು ಜಾರಿ ಮಾಡುತ್ತೇವೆಂದು ಹೇಳುತ್ತಿದ್ದರು. ಈಗ ಏನಾಗುತ್ತಿದೆಯೆಂದರೆ ದೇಶದಲ್ಲಿ ತಲೆ ಎತ್ತಿಕೊಂಡು ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ತರಹದಲ್ಲೂ ಪ್ರೊಹಿಬಿಷನ್ ಪಾಲಿಸಿಯನ್ನು ಇಂಟ್ರಡ್ಯೂಸ್ ಮಾಡುತ್ತೇವೆ ಎಂಬುದಾಗಿ ಹೇಳುವುದು ಖಂಡಿತವಾಗಿ ಅವಹೇಳನವಾಗುತ್ತದೆ. ಎಕ್ಸೈಜು, ಪ್ರೊಹಿಬಿಷನ್ ಮತ್ತು ಪೋಲೀಸ್ ಶಾಖೆಗಳು ಒಬ್ಬ ಮಂತ್ರಿಯ ಕೈಯ್ಯಲ್ಲಿಯೇ ಇರಬೇಕು. ಇಲ್ಲದಿದ್ದರೆ ಪ್ರೊಹಿಬಿಷನ್ ಪಾಲಿಸಿ ಅಡಾಪ್ಟ್ ಮಾಡುತ್ತೇವೆಂದು ಬಾಯಲ್ಲಿ ಸುಮ್ಮನೆ ಹೇಳಿಕೊಂಡು ಅವರ ಕೆಲಸವನ್ನು ಅವರು ಮಾಡುತ್ತಾರೆ. ಆದ್ದರಿಂದ ಈ ಮೂರು ಖಾತೆಗಳೂ ಒಬ್ಬ ಮಂತ್ರಿಯ ಕೈಲಿ ಇದ್ದರೆ ಖಂಡಿತವಾಗಿ ಪಾನನಿರೋಧ ಕ್ರಮ ಯಶಸ್ವಿಯಾಗಿ ನಡೆಯುತ್ತದೆ, ದೇಶದಲ್ಲಿ ಸುಭಿಕ್ಷವಾಗುತ್ತದೆ. ಏನೇ ಆಗಲಿ ದೇಶದಲ್ಲಿ ಕಳ್ಳಭಟ್ಟಿ ಸಾರಾಯಿ ಆಗುತ್ತಿರುವುದನ್ನು ಆದಷ್ಟು ಜಾಗ್ರತೆ ನಿಲ್ಲಿಸಬೇಕು. ಇಲ್ಲದಿದ್ದರೆ ಜನರ ಆರೋಗ್ಯ ಬಹಳವಾಗಿ

ಕೆಡುತ್ತದೆ. ಈ ಕಳ್ಳಭಟ್ಟಿ ಸಾರಾಯಿ ತಯಾರಿಕೆಯಿಂದ, ಅದಕ್ಕೆ ವಿಶೇಷವಾಗಿ ಸರ್ಕಾರದವರೇ ಕೆಲವು ಕಡೆಗಳಲ್ಲಿ ಇನ್ನೂ ಪ್ರೋತ್ಸಾಹ ಕೊಡುತ್ತಿರುವುದರಿಂದ, ಜನರ ಆರೋಗ್ಯ ವಿಪರೀತವಾಗಿ ಕೆಟ್ಟು ಅನೇಕರು ಈಗಾಗಲೇ ಕ್ಷೀಣಸ್ಥಿತಿಗೆ ಬರುತ್ತಿದ್ದಾರೆ. ಇದನ್ನು ಸರ್ಕಾರದವರು ಕೂಡಲೆ ಸರಿಪಡಿಸಬೇಕು. ಸ್ವಾತಂತ್ರ್ಯ ಬಂದು ಹನ್ನೆರಡು ವರ್ಷಗಳಾದರೂ ಈ ಪಾನನಿರೋಧ ಇನ್ನೂ ಪೂರ್ತಿಯಾಗಿ ಜಾರಿಗೆ ಬರಲಿಲ್ಲ, ಇನ್ನೂ ಯಶಸ್ವಿಯಾಗಿಲ್ಲ ಎಂದರೆ ಸರ್ಕಾರದವರೇ ಕಾರಣರು ಎಂದು ನಾನು ಹೇಳುತ್ತೇನೆ. ಈಗಲಾದರೂ ಸರ್ಕಾರದವರು ಎಚ್ಚೆತ್ತು ತಕ್ಕ ಕ್ರಮಗಳನ್ನು ತೆಗೆದುಕೊಂಡು ಇದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ವೀರೇಂದ್ರ ಪಾಟೀಲ್ (ಚಿಂಚೋಳಿ).—ಮಾನ್ಯ ಸಭಾಪತಿಗಳೇ, ಅರ್ಥ ಸಚಿವರು ಈ ಸಭೆಯ ಮುಂದೆ ಉಳಿತಾಯದ ಬಡ್ಜೆಟ್ಟನ್ನು ಮಂಡಿಸಿದ್ದಕ್ಕಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಅವರನ್ನು ಅಭಿನಂದಿಸಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆ ರೀತಿಯಲ್ಲಿಯೇ ನಾವೂ ಕೂಡ ಮಾನ್ಯ ಅರ್ಥ ಸಚಿವರು ಬಹಳಮಟ್ಟಿಗೆ ಶ್ರಮಿಸಿ ಒಂದು ಉಳಿತಾಯದ ಬಡ್ಜೆಟ್ಟನ್ನು ಸಭೆಯ ಮುಂದೆ ಮಂಡಿಸಿದುದಕ್ಕಾಗಿ ಅವರನ್ನು ಅಭಿನಂದಿಸುವುದು ನಮ್ಮ ಪ್ರಥಮ ಕರ್ತವ್ಯವಾಗಿದೆ. ಈ ರೀತಿಯಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದು ನಾನು ಮನಸ್ಸು ಮಾಡಿದ್ದೇನೆ. ನಾನು ಹೆಚ್ಚಿಗೆ ರಾಜ್ಯ ಸಂಬಂಧದಲ್ಲಿ ಕೆಲವು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದಿದ್ದೇನೆ. ಹೈದರಾಬಾದ್ ಕರ್ಣಾಟಕಕ್ಕೆ ಸಂಬಂಧಪಟ್ಟಂಥ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಟ್ಟಿದ್ದೇನೆ. ಮೊದಲು ನಾನು ಒಂದೆರಡು ವಿಷಯಗಳನ್ನು ಈ ಸ್ಟೇಟ್ ಬಗ್ಗೆ ಮಾತನಾಡಿ ಅನಂತರ ಹೈದರಾಬಾದ್ ಕರ್ಣಾಟಕದ ಬಗ್ಗೆ ಇಲ್ಲಿಯವರೆಗೂ ಅಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿ ಅಲ್ಲಿನ ಸರ್ಕಾರ ಮಾಡಿದ ಕಾರ್ಯಗಳನ್ನೂ ಮುಂದೆ ಈ ಸರ್ಕಾರ ಮಾಡಬೇಕಾದ ಕೆಲಸದ ಬಗ್ಗೆ ಕೆಲವು ಸಲಹೆಗಳನ್ನೂ ಕೊಡುತ್ತೇನೆ. ಎಲ್ಲಕ್ಕಿಂತ ಮೊದಲು ನಮ್ಮಲ್ಲಿ ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಂದು ಎಫಿಷಿಯನ್ಸಿ ಬರಬೇಕಾದರೆ ಒಂದು ದೊಡ್ಡ ತೊಂದರೆ ಕುಂದು, ಎಂದರೆ ಇನ್ನೂ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮತ್ತು ಈಕ್ವೇಷರ್ ಆಫ್ ಪೋಸ್ಟ್ಸ್ ಈ ಎರಡು ಸಮಸ್ಯೆಗಳನ್ನು ನಮ್ಮ ಸರ್ಕಾರದವರು ಬಗೆಹರಿಸಲಿಲ್ಲ ವೆಂಬುದು. ಇವು ಬಹಳ ಜಟಿಲ ಸಮಸ್ಯೆಗಳು. ಇವಕ್ಕೆ ಎಷ್ಟು ಪ್ರಾಮುಖ್ಯತೆ ಇದೆಯೆಂಬುದನ್ನು ಹೇಳ ಬೇಕಾಗಿಲ್ಲ. ಪ್ರತಿಯೊಬ್ಬರಿಗೂ ಈ ವಿಷಯದಲ್ಲಿ ಆಸಕ್ತಿಯಿದೆ. ಎಷ್ಟು ತೀವ್ರವಾಗಿ ಸರ್ಕಾರದವರು ನ್ಯಾಯದಿಂದ ಅನುಕೂಲಮಾಡಿಕೊಡುತ್ತಾರೋ ಅಷ್ಟು ತೀವ್ರವಾಗಿ ಎಫಿಷಿಯನ್ಸಿ ನಮ್ಮ ಅಡ್ಮಿನಿಸ್ಟ್ರೇಷನ್ನಿನಲ್ಲಿ ಬರಬಹುದು ಎಂದು ನಾನು ಹೇಳುತ್ತೇನೆ. ಆದ್ದರಿಂದ ಆದಷ್ಟು ಜಾಗ್ರತೆ ಈ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕೆಂದು ನಾನು ಹೇಳುತ್ತೇನೆ. ಈ ತೀವ್ರವಾದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮುಂದೆ ಯಾವ ಅಧಿಕಾರಿಗೂ ಕೂಡ ಅನ್ಯಾಯವಾಗದಂತೆ ನೋಡಿಕೊಳ್ಳುವುದು ಸರ್ಕಾರ ಆದ್ಯಕರ್ತವ್ಯ. ಈಗಾಗಲೇ ನಮ್ಮ ಕಿವಿಗೆ ಎಷ್ಟೋ ದೂರುಗಳು ಬೀಳುತ್ತಿವೆ. ಹೈದರಾಬಾದ್ ಕರ್ಣಾಟಕದಿಂದ ಬಂದಂಥ, ಬೊಂಬಾಯಿ ಕರ್ಣಾಟಕದಿಂದ ಬಂದಂಥ ಅಧಿಕಾರಿಗಳಿಗೆ ನ್ಯಾಯದೊರಕುತ್ತಿಲ್ಲ. ಈಗ ಮಾಡಿರುವ ಒಂದು ಪ್ರೊವಿಷನಲ್ ಅರೇಂಜ್‌ಮೆಂಟ್‌ನಿಂದಲೂ ಅಥವಾ ಮತ್ತೆ ಯಾವುದೋ ಒಂದು ರೀತಿ ಫೈನಲೈಸ್ ಮಾಡಿದರೂ ಅದರಿಂದ ಅನುಕೂಲವಾಗಲಾರದೆಂದು ಅನೇಕ ಜನರಿಂದ ದೂರುಗಳು ಬರುತ್ತಿವೆ. ಅದರ ಸಲುವಾಗಿ ಯಾವುದೋ ಒಂದು ರೀತಿಯಲ್ಲಿ ಅಧಿಕಾರಿಗಳು ಅಸಂತುಷ್ಟರಾಗಿದ್ದಾರೆ. ಹೀಗಾಗುವುದರಿಂದ ಅವರಿಗೆ ನ್ಯಾಯ ಮಾಡಿದಂತಾಗುವುದಿಲ್ಲ. ನಾವು ಆಡಳಿತದಲ್ಲಿ ದಕ್ಷತೆಯನ್ನು ತರುವುದಕ್ಕಾಗಿ ಯಾವ ಒಂದು ದೊಡ್ಡ ಉದ್ದೇಶದಿಂದ ಕೆಲಸ ಮಾಡುತ್ತಿದ್ದೇವೆಯೋ ಅದು ಸಾಧ್ಯವಾಗಲಾರದು. ಆದುದರಿಂದ ಅಧಿಕಾರಿಗಳಿಗೆಲ್ಲ ಅನ್ಯಾಯವಾಗದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ದೊಡ್ಡ ಸಮಸ್ಯೆ ಇರುವುದೇನೆಂದರೆ, ಹೊಸರಾಜ್ಯ ನಿರ್ಮಾಣವಾದ ಮೇಲೆ, ಐದು ಭಾಗಗಳಿಂದ ಬಂದಿರುವಂಥ ಕಾನೂನುಗಳು ಇನ್ನೂ ಸಮನ್ವಯ ವಾಗದೆ ಹಾಗೆಯೇ ಉಳಿದಿವೆ. ಸುಮಾರು 250-300 ಕಾನೂನುಗಳ ಸಂಬಂಧದಲ್ಲಿ uniform legislation ದೊಡ್ಡ ಕಾರ್ಯ ಹಾಗೆಯೇ ಉಳಿದಿದೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿಯೂ ಮತ್ತು ಅರ್ಥ ಸಚಿವರ ಭಾಷಣದಲ್ಲಿಯೂ ಕೆಲವು ಕಾನೂನುಗಳನ್ನು ಈ ವರ್ಷ ಜಾರಿಗೆ ತರಬೇಕೆಂದಿರುವುದಾಗಿ ಹೇಳಿದ್ದಾರೆ. ಉಳಿದಿರುವ ಕಾನೂನುಗಳನ್ನು ಕ್ರೋಡೀಕರಿಸುವಂಥ ಕಾರ್ಯವನ್ನು ಅಷ್ಟು serious ಆಗಿ ತೆಗೆದುಕೊಂಡಿಲ್ಲವೆಂದು ಕಾಣಿಸುತ್ತದೆ. ನಾವು ಮಾಡಿರುವುದು ಒಂಭತ್ತು ಕಾನೂನುಗಳೆಂದು ನನಗನ್ನಿಸುತ್ತದೆ. 18 ಬಿಲ್ಲುಗಳು ನಮ್ಮ ಮುಂದೆ ಇದ್ದು ಒಂಭತ್ತು ಬಿಲ್ಲುಗಳನ್ನು ಈ ಅಧಿವೇಶನದಲ್ಲಿ ಮಂಡಿಸುತ್ತೇವೆಂದು ಮಾನ್ಯ ಅರ್ಥ ಸಚಿವರು ಹೇಳಿದರು. ನಮ್ಮಲ್ಲಿ ಸುಮಾರು 250-300 ಕಾನೂನುಗಳಿರುವಾಗ, ನಮ್ಮ ರಾಜ್ಯ ನಿರ್ಮಾಣವಾದ ಎರಡೂವರೆ ವರ್ಷಗಳಿಂದಲೂ ಒಂಭತ್ತು ಕಾನೂನನ್ನು ಬಿಟ್ಟು ಮತ್ತೇನನ್ನೂ ಮಾಡಿಲ್ಲ. 36 ಬಿಲ್ಲುಗಳನ್ನು ಮಾತ್ರ ತಯಾರುಮಾಡಿದ್ದಾರೆಂದೆನ್ನಿಸುತ್ತದೆ. ಈ ರೀತಿಯಲ್ಲಿ ಮುಂದ ಹೋದರೆ 15-20 ವರ್ಷಗಳ ಕಾಲ uniform legislation ತರುವುದರಲ್ಲಿಯೇ ಆಗಬಹುದು. Uniform legislation ತರುವುದರಲ್ಲಿ ಎಷ್ಟು ನಿಧಾನವಾಗುತ್ತದೆಯೋ ಅಷ್ಟೂ ನಮ್ಮ ಆಡಳಿತದಲ್ಲಿ weakness ಮತ್ತು looseness ಹೆಚ್ಚುತ್ತದೆ. ಉದಾಹರಣೆಗೆ ಹೇಳುವುದಾದರೆ ಮೈಸೂರಿನ ಯಾವುದಾದರೂ ಒಬ್ಬ ಅಧಿಕಾರಿಯನ್ನು ಹೈದರಾಬಾದ್ ಕರ್ಣಾಟಕಕ್ಕೆ ಹಾಕಿದರೆ ಅಲ್ಲಿ ಜಾರಿಯಲ್ಲಿರುವ ಕಾನೂನುಗಳನ್ನು ತಿಳಿದುಕೊಳ್ಳದೆ, ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಳ್ಳದೆ, ಯಾವ ರೀತಿಯಲ್ಲಿ administration ನಡೆಸಬಲ್ಲ; ಇದೆಲ್ಲವನ್ನೂ ತಿಳಿದುಕೊಳ್ಳಬೇಕಾದರೆ ಒಂದು ವರ್ಷಕಾಲವಾದರೂ ಬೇಕು. ಅದೇ ರೀತಿ ಹೈದರಾಬಾದಿನಿಂದ ಮೈಸೂರಿಗಾಗಲಿ ಮದರಾಸ್ ಅಥವ ಬೊಂಬಾಯಿ ಕರ್ಣಾಟಕದ ಭಾಗಕ್ಕಾಗಲಿ ವರ್ಗಮಾಡಿದರೆ ಅಲ್ಲೆಲ್ಲ ಜಾರಿಯಲ್ಲಿರುವ ಕಾನೂನುಗಳು ವ್ಯತ್ಯಾಸವಾಗಿರುವ ಕಾರಣದಿಂದ ಆಡಳಿತದಲ್ಲಿ ದಕ್ಷತೆ ಬರುವುದಿಲ್ಲ. ಆದ್ದರಿಂದ uniform legislation ತರುವುದು ಬಹಳ ಅವಶ್ಯವಿದೆ. ಇಬ್ಬರು ಸ್ಪೆಷಲ್ ಆಫೀಸರುಗಳನ್ನು ಬಿಲ್ಲುಗಳನ್ನು ಡ್ರಾಫ್ಟ್ ಮಾಡುವುದಕ್ಕೆ appoint ಮಾಡಿದ್ದೀರಿ. ಬಿಲ್‌ಗಳನ್ನು ಡ್ರಾಫ್ಟ್ ಮಾಡುವುದು ದೊಡ್ಡ

(ಶ್ರೀ ವೀರೇಂದ್ರ ಪಾಟೀಲ್)

ಪ್ರಶ್ನೆಯಿಲ್ಲ. ಬಿಲ್ ಡ್ರಾಫ್ಟ್ ಮಾಡುವುದಕ್ಕೆ ಮುಂಚೆ ಎಲ್ಲೆಲ್ಲಿ ಯಾವ ಯಾವ ಪರಿಸ್ಥಿತಿ ಇದೆಯೋ ಅಲ್ಲಿನ ಅನುಕೂಲದಂತೆ ನೋಡಿಕೊಂಡು ಮಾಡಬೇಕು. ಅದರ ಸಲುವಾಗಿ ನನ್ನ ಸಲಹೆ ಏನೆಂದರೆ, ಒಂದು ಲಾ ಕಮಿಷನ್ ಮಾಡಬೇಕು. ಇದರಲ್ಲಿ ಯಾರಾದರೂ retired High Court Judge, Law Secretary Additional Law Secretary, Bar Council representative, ಪ್ರತಿಯೊಂದು ರಾಜ್ಯಗಳ ಒಬ್ಬೊಬ್ಬ ಪ್ರತಿನಿಧಿ ಇರುವಂತೆ ಮಾಡಿ ಅವರಿಗೆ ಈ ಕೆಲಸವನ್ನು ಒಪ್ಪಿಸಿರಿ. ಈಗ ಇರುವ 18+9=27 ಬಿಲ್ಲುಗಳನ್ನು ಎಲ್ಲಿಯವರಿಗೆ ಪಾಸ್ ಮಾಡುತ್ತೇವೆಯೋ ಗೊತ್ತಿಲ್ಲ. ಆದುದರಿಂದ ಕಾನೂನುಗಳನ್ನು ಕ್ರೋಡೀಕರಿಸುವ ಮತ್ತು ಸಮನ್ವಯ ಮಾಡುವ ಕಾರ್ಯವನ್ನು ಬೇಗ ಮಾಡಬೇಕೆಂದು ಈ ಸಂಬಂಧದಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Mineral policy ಬಗ್ಗೆ ಸರ್ಕಾರ ಹೆಚ್ಚು ಗಮನವನ್ನು ಕೊಡುತ್ತಿಲ್ಲವೆಂದು ನನಗನ್ನಿಸುತ್ತದೆ. ಇಡೀ ಹಿಂದೂಸ್ತಾನದಲ್ಲಿನ ಖನಿಜಸಂಪತ್ತಿನಲ್ಲಿ ನಮ್ಮ ರಾಜ್ಯ ಐದನೆಯದು. ಇಷ್ಟು ಹೇರಳವಾದ ಸಂಪತ್ತು ಇದ್ದರೂ ಅದನ್ನು ಯಾವ ರೀತಿಯಲ್ಲಿ exploit ಮಾಡಬಹುದೋ ಆ ರೀತಿ ಮಾಡುತ್ತಿಲ್ಲ. ಅದರ ಮಹತ್ವವನ್ನೇ ನಾವು ಅರಿತಿಲ್ಲವೆಂದು ಕಾಣಿಸುತ್ತದೆ. ಈಗಾಗಲೇ Mineral Development Board ಒಂದನ್ನು ಮಾಡಿಕೊಂಡಿದ್ದೇವೆ. ಈ ಬೋರ್ಡ್ ಎಷ್ಟು ಕೆಲಸ ಮಾಡಿದೆ ಎಂಬುದರ ಬಗ್ಗೆ ಪ್ರತ್ಯೇಕವಾದ ಅಂಕಿ ಸಂಖ್ಯೆಗಳನ್ನು ಕೊಟ್ಟರೆ, ಏನು ಕೆಲಸ ಮಾಡಿದೆ ಎಂಬುದು ತಿಳಿಯುತ್ತದೆ. ಇದು ಏನೂ ಕೆಲಸ ಮಾಡಿಲ್ಲವೆಂದರೆ ತಪ್ಪಾಗಲಾರದೆಂದೆನ್ನಿಸುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಎರಡು ಮೂರು ಲಕ್ಷ ಟನ್‌ಗಳಷ್ಟು ಅದುರನ್ನು ಪರದೇಶಿಗಳಿಗೆ ರಫ್ತುಮಾಡಿರುವುದಾಗಿ ಹೇಳಿದ್ದಾರೆ. ಈ ಅಂಕಿಗಳು ತಪ್ಪು ಇವೆ. ಒಟ್ಟು ರಫ್ತುಮಾಡಿರುವ ಅಂಕಿಗಳನ್ನು ಕೊಡುವಾಗ ಪ್ರೈವೇಟ್ ಮೈನ್ ಓನರ್ಸ್ ರಫ್ತುಮಾಡಿರುವುದನ್ನು ಬಿಟ್ಟು Mineral Development Boardನವರು ರಫ್ತುಮಾಡಿರುವುದು ಮಾತ್ರ ಎರಡು ಮೂರು ಲಕ್ಷಕ್ಕೆ ಬರಬಹುದು. ಹಿಂದೂಸ್ತಾನ ಸರ್ಕಾರವೂ ಕೂಡ, ನಮ್ಮ ರಾಜ್ಯ ಇಷ್ಟು ದೊಡ್ಡ ಖನಿಜ ಸಂಪತ್ತಿರುವ ರಾಜ್ಯವಾದರೂ ಸಾಕಷ್ಟು ಲಕ್ಷ್ಯ ಕೊಡುತ್ತಿಲ್ಲ. S.T.C.ಯವರದು Defective policy ಇರುವುದರಿಂದ ಸಾಕಷ್ಟು ಸಹಾಯವಾಗುತ್ತಿಲ್ಲವೆಂದು ನನಗನ್ನಿಸುತ್ತದೆ. ಇಡಿ ಹಿಂದೂಸ್ತಾನದಲ್ಲಿರುವ rich iron ore ಎಂದರೆ Ten per cent iron ore ಜಪಾನ್ ದೇಶಕ್ಕೆ ಒರಿಸ್ಸಾದಿಂದ ಹೋಗುತ್ತಿದೆ. ಅದೇ ಯೂರೋಪಿನ ರುಮೇನಿಯ, ಜರ್ಮನಿ, ಬೆಲ್ಜಿಯಂ ಮೊದಲಾದ ದೇಶಗಳವರು ನಮ್ಮ ಹತ್ತಿರ ಬಂದು, ನಮ್ಮಲ್ಲಿರುವ ಬಳ್ಳಾರಿಯ ಅದುರನ್ನು ನಮಗೆ ಕೊಡಿ, ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಆದರೆ ನಾವು direct ಆಗಿ negotiate ಮಾಡುವುದಕ್ಕಾಗುವುದಿಲ್ಲ. S.T.C.ಯವರು ಹೇಳಿದಂತೆ ಮಾಡಬೇಕು. State Trading Corporation ಎಂದು ಒಟ್ಟು ಇಂಡಿಯಾ ದೇಶಕ್ಕೆ ಇದೆ. ನಾವು Mineral Development Board ಎಂದು ಮಾಡಿಕೊಂಡಿದ್ದೇವೆ. ನಾನು ಹಿಂದೆ ಅಧಿಕಾರದಲ್ಲಿದ್ದಾಗ S.T.C. ಅವರ ಹತ್ತಿರ ಎಷ್ಟೋ ಸಲ ಹೋಗಿದ್ದೆ. ನಾವು ಮಿನರಲ್ ಡವಲಪ್‌ಮೆಂಟ್ ಬೋರ್ಡ್ ಎಂದು ಮಾಡಿಕೊಂಡಿದ್ದೇವೆ. ಯಾವ ಯಾವ ದೇಶಗಳಿಗೆ ರಫ್ತು ಮಾಡಬೇಕು, ಯಾರು ಯಾರಿಗೆ ಸಪ್ಲೈ ಮಾಡಬೇಕು ಎಂಬುದನ್ನು ತಿಳಿಸಿದರೆ ಅವರಿಗೆಲ್ಲ ನಾವು ಸಪ್ಲೈ ಮಾಡಲು ತಯಾರಿದ್ದೇವೆ ಎಂದು ಹೇಳಿದ್ದೆ. ಇವೊತ್ತು X, Y, Z, ಮದರಾಸಿನಲ್ಲಿ, ಬೊಂಬಾಯಿನಲ್ಲಿರುವವರು ಒಂದು ಲಕ್ಷ ಟನ್, ಹತ್ತು ಲಕ್ಷ ಟನ್, 20 ಲಕ್ಷ ಟನ್ ಹೇಗೆ export ಮಾಡುತ್ತಿದ್ದಾರೆ? ಅವರಿಗೆ ಒಂದಂಗುಲವೂ mining area ಇಲ್ಲ. ಅವರುಗಳು mine owners ಮತ್ತು genuine producers ಹತ್ತಿರ ಬಂದು ನಮ್ಮ ಕಮಿಷನ್ ಏಜನ್ಸಿ ಇಷ್ಟಿದೆ, ಒಂದು ಟನ್ನಿಗೆ ಐದಾರು ರೂಪಾಯಿ ಪ್ರಕಾರ ಕಮಿಷನ್ ಏಜನ್ಸಿ ಮಾಡುತ್ತೇವೆಂದು, ತಮ್ಮ ಕಮಿಷನ್ ಸಂಪಾದನೆ ಮಾಡಿಕೊಳ್ಳುತ್ತಾರೆ. ಈ ಮಧ್ಯವರ್ತಿಗಳಿಗೆಲ್ಲ ಏಕೆ ಅವಕಾಶ ಕೊಡಬೇಕು? ನಮಗೆ exploit ಮಾಡಬೇಕೆಂಬ ಉದ್ದೇಶವಿದೆ Mineral Development Board ಮುಖಾಂತರ ನಾವೇ ಎಲ್ಲವನ್ನೂ exploit ಮಾಡಬಹುದು. Private ownerಗೆ ಕೊಡಬಾರದು. Area reserve ಮಾಡಿದ್ದೇವೆ. ನಮಗೆ ಕೋಟಾ ಇದೆ. S.T.C.ಯವರು 50 ಸಾವಿರ ಟನ್, 60 ಸಾವಿರ ಟನ್ ಅಥವಾ ಒಂದು ಲಕ್ಷ ಟನ್ ಕೊಡಬಹುದು. 10–20 ಲಕ್ಷ ಟನ್ ಕೊಟ್ಟರೂ ಸಪ್ಲೈ ಮಾಡುವ ಸ್ಥಿತಿಯಲ್ಲಿದ್ದೇವೆ. ಆದುದರಿಂದ ಕೇಂದ್ರ ಸರ್ಕಾರದವರಿಗೆ ಬರೆದು, S.T.C.ಯವರು ನಮ್ಮ ಭಾಗದಿಂದ ಕಳುಹಿಸುವ ಪ್ರತಿಯೊಂದು ಟನ್ ಅದುರೂ ಸಹ Mineral Development Board ಮೂಲಕವೇ ಹೋಗಬೇಕೆಂದು ಒತ್ತಾಯ ಮಾಡಿದರೆ ಪ್ರತಿ ವರ್ಷವೂ ನಮಗೆ 50–60 ಲಕ್ಷ ರೂಪಾಯಿ ಆದಾಯ ಬರುತ್ತದೆನ್ನುವ ಭರವಸೆ ನನಗಿದೆ. ಆ ರೀತಿ ವಿಚಾರ ಮಾಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಅದೂ ಅಲ್ಲದೆ ಖನಿಜ ಸಂಪತ್ತಿನ ಶಾಖೆ ಬಹಳ ಮಹತ್ತರವಾದುದು. ಇದು ದುರ್ದೈವವಶಾತ್ ಮುಖ್ಯಮಂತ್ರಿಗಳವರ ಹತ್ತಿರವೇ ಇದೆ. ಇವರಲ್ಲಿ ಈಗಾಗಲೇ ಸಾಕಷ್ಟು ಖಾತೆಗಳಿರುತ್ತವೆ. ಇವರಿಗೆ ಇವೆಲ್ಲವನ್ನೂ ನೋಡಲು ಸಮಯ ಹೇಗೆ ಸಿಕ್ಕುತ್ತದೆಯೋ ಕಾಣೆ. ಎಲ್ಲ ಖಾತೆಗಳಿಗೂ ಸಾಕಷ್ಟು ಸಮಯವನ್ನು ಕೊಡಬೇಕು. ಅವರು ಹೇಗೆ ಎಲ್ಲವನ್ನೂ ನೋಡುತ್ತಾರೆಯೋ ಗೊತ್ತಿಲ್ಲ. ಇದರ ಸಲುವಾಗಿ ನಾನು ಸಲಹೆ ಮಾಡುವುದೇನೆಂದರೆ, ಒಬ್ಬ ಮಂತ್ರಿಗಳಿಗೆ ಈ ಖಾತೆಯನ್ನು ಕೊಡಬೇಕು. ಇದು ಸಾಧ್ಯವಿಲ್ಲವೆಂದರೆ ಈಗ ಆರು ಜನ ಡೆಪ್ಯುಟಿ ಮಂತ್ರಿಗಳಾಗಿದ್ದಾರೆ. ಅವರಿಗೆಲ್ಲ ಸಾಕಷ್ಟು ಕೆಲಸವಿಲ್ಲ. ಅವರಿಗೆ ಯಾವ ರೀತಿ ಕೆಲಸ ಕೊಡಬೇಕೋ ಆ ರೀತಿ ಕೊಟ್ಟಿಲ್ಲವೆಂದು ಕಾಣುತ್ತದೆ. ಅವರಿಗೆ ಕೆಲಸ ಮಾಡುವುದಕ್ಕೆ ಶಕ್ತಿ ಇದೆ. ಇವರಲ್ಲಿ ಯಾರಾದರೂ ಯೋಗ್ಯರನ್ನು ಆರಿಸಿ ಖನಿಜ ಸಂಪತ್ತಿನ ಖಾತೆಯನ್ನು ಒಬ್ಬ ಡೆಪ್ಯುಟಿ ಮಂತ್ರಿಗಳಿಗೆ ಕೊಡಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಪಾನನಿರೋಧ ನೀತಿಯ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ಈಗಾಗಲೇ ನನ್ನ ಮಿತ್ರರನೇಕರು ಹೇಳಿದ್ದಾರೆ. ಪಾನನಿರೋಧವನ್ನು ವಿಸ್ತರಣೆ ಮಾಡಬೇಕಾದರೆ ಜಿಲ್ಲೆಯನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳಬೇಕು. ತಾಲ್ಲೂಕು ಅಥವ ಹೋಬಳಿಯನ್ನು ಘಟಕವಾಗಿ ತೆಗೆದುಕೊಳ್ಳುವುದರಲ್ಲಿ ಅರ್ಥವಿಲ್ಲ. ಒಂದು ತಾಲ್ಲೂಕಿನಲ್ಲಿಟ್ಟು ಮತ್ತೊಂದು ತಾಲ್ಲೂಕಿನಲ್ಲಿ ತೆಗೆಯುವುದರಲ್ಲಿ ಅರ್ಥವಿಲ್ಲ. ಇದರಿಂದ ಕುಡಿಯುವವರಿಗೆ ಪ್ರೋತ್ಸಾಹ ಕೊಟ್ಟಂತೆ ಆಗಿದೆ. ಆದುದರಿಂದ ಡಿಸ್ಟ್ರಿಕ್ಟನ್ನು ಘಟಕವಾಗಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹೈದರಾಬಾದ್ ಕರ್ನಾ

ಟಕದ ಬಗ್ಗೆ ವಿಶೇಷವಾಗಿ ಸಭೆಯ ಅವಗಾಹನೆಗೆ ಕೆಲವು ವಿಷಯಗಳನ್ನು ಇಡಬೇಕೆಂದಿದ್ದೇನೆ. ಎಸ್ಟಿಮೇಟ್ಸ್ ಕಮಿಟಿಯ ಮೆಂಬರುಗಳು ಹೋಗಿರಬಹುದು, ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮೆಂಬರುಗಳು ಹೋಗಿರಬಹುದು, ಮಿನಿಸ್ಟರು ಹೋಗಿರಬಹುದು. ಅನೇಕ ಜನ ಬಂದತಕ್ಷಣ ಅಯ್ಯೋ ಪಾಪ ಎಷ್ಟು ಹಿಂದುಳಿದಿದೆ ಎಂದು ಹೇಳುತ್ತಾರೆ. ಆದರೆ ಅದರ ಸಲುವಾಗಿ ಏನೇನೂ ಮಾಡುವುದಿಲ್ಲ. ಎಸ್ಟಿಮೇಟ್ ಕಮಿಟಿಯವರು ಹೋಗಿದ್ದವರು ಅವರು ಆ ಕಡೆ ಇರಬಹುದು ಅಥವಾ ಈ ಕಡೆ ಇರಬಹುದು. ಅವರು ಬಾಯಲ್ಲಿ ಹೇಳುವುದು ಹೊರತಾಗಿ ಇನ್ನೇನೂ ಮಾಡುವುದಿಲ್ಲ.

11 A.M.

Sri C. M. ARUMUGHAM (Kolar Gold Fields).—Even as Deputy Minister in the previous cabinet what is it that you have done to Hyderabad ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆ ವಿಷಯಕ್ಕೆ ಹೋಗಲಾರೆ. ಹೈದರಾಬಾದ್ ಕರ್ಣಾಟಕಕ್ಕೆ ಸಾಕಷ್ಟು ನ್ಯಾಯ ಸಿಕ್ಕುತ್ತಾ ಇಲ್ಲ ಎಂದು ಹೇಳಬೇಕು. ಈ ವಿಚಾರ ಬಹಳ ಮುಖ್ಯವಾದದ್ದು. ಮಾನ್ಯ ಮಿತ್ರರಾದ ಶ್ರೀ ಶರಣಗೌಡರು ಸಭೆಯ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ, ಹೈದರಾಬಾದ್ ಕರ್ಣಾಟಕಕ್ಕೆ ಡೆವಲಪ್‌ಮೆಂಟ್ ಬೋರ್ಡ್ ಬೇಕು ಎಂದು ಹೇಳಿದರು. ಅವರು ಹೇಳುವ ಮಾತು ವೈಯಕ್ತಿಕ ವಿಚಾರ ಎಂದು ಅಷ್ಟು ಕಡೆಗಾಣಿಸುವ ವಿಚಾರವಲ್ಲ. ಸಾಧಾರಣವಾಗಿ ಜನಸಾಮಾನ್ಯರೆಲ್ಲರೂ ಇದೇ ಅಭಿಪ್ರಾಯಕ್ಕೆ ಬರುತ್ತಿದ್ದಾರೆ ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಅವರು ಹೇಳುವುದು ಹೊಸ ವಿಷಯ ಅಲ್ಲ. ಹೋದ ಸಲ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ನಮ್ಮ ಭಾಗದ ಜನರು ನಮ್ಮ ಭಾಗಕ್ಕೆ ನ್ಯಾಯ ಸಾಕಾದಷ್ಟು ಸಿಕ್ಕುತ್ತಾ ಇಲ್ಲ; ಆದ್ದರಿಂದ ಡೆವಲಪ್‌ಮೆಂಟ್ ಕೌನ್ಸಿಲ್ ಮಾಡಿ ಎಂದು ಒಂದೇ ವಾಯ್ಸ್‌ನಿಂದ ಹೇಳಿದ್ದಾರೆ. ಮತ್ತೊಂದು ಸಾರಿ ಅದನ್ನೇ ಹೇಳಿದ್ದೇವೆ. ಹೈದರಾಬಾದಿನ ಮೂರು ಜಿಲ್ಲೆಗಳು ಕರ್ಣಾಟಕಕ್ಕೆ ಸೇರುವ ಸಮಯದಲ್ಲಿ ನಾವು ಯಾವ ಷರತ್ತುಗಳನ್ನೂ ಹಾಕಲಿಲ್ಲ ಹೈದರಾಬಾದು ರಾಜ್ಯದ ತೆಲಂಗಾಣದ ಜನರು ಆಂಧ್ರಕ್ಕೆ ಸೇರಿದಮೇಲೆ ತಮ್ಮ ರೈಟ್ಸ್ ಮತ್ತು ಇಂಟರೆಸ್ಟ್ ಸೇಫ್‌ಗಾರ್ಡ್ ಮಾಡುವ ಸಲುವಾಗಿ ರೀಜನಲ್ ಕಮಿಟಿ ಬೇಕು ಎಂದು ಹೇಳಿದರು, ಆ ರೀತಿ ನಮಗೆ ಬೇಕಿಲ್ಲ. ನೂರಾರು ವರ್ಷಗಳಿಂದ ಹರಿದು ಹಂಚಿಹೋಗಿರುವ ಬಾಂಧವರ ಜೊತೆಗೆ ಸೇರುತ್ತೇವೆ, ಕಂಡೀಷನ್ಸ್ ಹಾಕಿ ಸೇರುವುದಿಲ್ಲ, ಅನ್‌ಕಂಡೀಷನಲ್ ಆಗಿ ಸೇರುತ್ತೇವೆ ಎಂದು ಹೇಳಿದೆವು. ರೀಜನಲ್ ಕಮಿಟಿ ಬೇಡ. ಯಾವ ಕಮಿಟಿಯೂ ಬೇಡ. ನಮ್ಮ ಏಳಿಗೆಯ ಸಲುವಾಗಿ ಸಂಪೂರ್ಣ ವಿಶ್ವಾಸವಿದೆ. ಯಾವ ಅನುಮಾನವೂ ಇಲ್ಲ. ಆದರೆ ಈಗ 27 ಲಕ್ಷ ಜನಸಂಖ್ಯೆ ಇರುವ 13,799 ಚದರ ಮೈಲಿಗಳಿರುವ ಏರಿಯಾಕ್ಕೆ ನ್ಯಾಯ ದೊರೆಯುತ್ತಿಲ್ಲ. ಮಾನ್ಯ ಅರ್ಥ ಸಚಿವರು ಇದ್ದಾರೆ. ಅವರ ಮುಂದೆ ಅಂಕಿಅಂಶಗಳಿಟ್ಟು ಹೇಳುತ್ತೇನೆ. ಗಾಳಿಯಲ್ಲಿ ಕೆಲವು ವಿಷಯಗಳನ್ನು ತಮ್ಮ ಮುಂದೆ ತಂದಿಡುತ್ತೇನೆ ಎಂದಲ್ಲ. ಮಾನ್ಯ ಸಭೆಯ ಮುಂದೆ ಅಂಕಿಅಂಶಗಳನ್ನು ಇಟ್ಟು ಸಭೆಯ ಸಹಾನುಭೂತಿಯನ್ನು ಗಳಿಸಬೇಕೆಂದು ಇಡುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಏನು ನ್ಯಾಯ ದೊರೆತಿದೆ ಎಂದು ನಾನು ಕೆಲವು ಮಾತುಗಳನ್ನು ಹೇಳುತ್ತೇನೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 145 ಕೋಟಿ ರೂಪಾಯಿಗಳು ಹೊಸ ಮೈಸೂರು ಸ್ಟೇಟಿಗೆ ಅಲಾಟ್ ಆಗಿದೆ ಎಂದು ತಿಳಿಸಿದ್ದಾರು. ಅದು ಈಗ 145 ಕೋಟಿ ಇದ್ದದ್ದು 136 ಕೋಟಿ ಆಗಿದೆ. 145 ಕೋಟಿ ಇದ್ದದ್ದು 136 ಕೋಟಿ ಹೇಗೆ ಆಯಿತು, ಯಾವ ಯಾವ ಐಟಮ್ ಜೋತಾ ಆಯಿತು ಎಂಬುದು ಗೊತ್ತಿಲ್ಲ. ಯಾವ ಯಾವ ರೋಡುಗಳು ಎಷ್ಟೆಷ್ಟು ಹೋದವು ಎಂಬುದು ಗೊತ್ತಿಲ್ಲ. ಅದಕ್ಕೆ ವಿಶೇಷ ಗಮನ ಕೊಟ್ಟಿಲ್ಲ ಹೈದರಾಬಾದ್ ಸಂಬಂಧ ನಾವು ತಿಳಿದುಕೊಳ್ಳಬೇಕಾದ ವಿಷಯ ಇದೆ. ಹಿಂದೆ ಹೈದರಾಬಾದಿನಲ್ಲಿ ಇನ್ನೂ ವಿಭಜನೆ ಆಗಿರಲಿಲ್ಲ; ಮತ್ತು ಸ್ಟೇಟ್ಸ್ ರೀಆರ್ಗನೈಜೇಷನ್ ರಿಪೋರ್ಟು ಕೊಟ್ಟಿರಲಿಲ್ಲ. ಆಗ ಹೈದರಾಬಾದಿಗೆ ಅನ್ವಯವಾಗುವಂಥ 300 ಕೋಟಿ ರೂಪಾಯಿಗಳ ಒಂದು ಪ್ಲಾನನ್ನು ಆಗ ಇದ್ದ ಮುಖ್ಯ ಮಂತ್ರಿಗಳು ಡಿಲ್ಲಿಗೆ ತೆಗೆದುಕೊಂಡು ಹೋದರು. ಕೇಂದ್ರ ಸರ್ಕಾರದವರು ತಮ್ಮ ಹತ್ತಿರ ದುಡ್ಡು ಇಲ್ಲ, 105 ಕೋಟಿಗೆ ಇಳಿಸಿ ಎಂದು ಹೇಳಿದರು. ಹೀಗೆ 105 ಕೋಟಿಗೆ ಇಳಿಸಿ ಎಂದು ಡೈರೆಕ್ಷನ್ ಬಂದಾಗ ಸ್ಟೇಟ್ಸ್ ರೀಆರ್ಗನೈಜೇಷನ್‌ವರದಿ ಹೊರಗೆ ಬಿತ್ತು. 105 ಕೋಟಿಯನ್ನು ರೀಜನ್‌ವೈಸ್ ಕನ್ನಡ ಭಾಗ, ತೆಲಂಗಾಣ ಭಾಗ, ಮರಾಠವಾಡ ಭಾಗಗಳಿಗೆ ಇಷ್ಟಿಷ್ಟು ಎಂದು ಹಂಚಿದರು. ಬಿದರೆಯ ಬಗ್ಗೆ ಎಲ್ಲರಿಗೂ ಗೊತ್ತಿರಬಹುದು ; ಸ್ಟೇಟ್ಸ್ ರೀಆರ್ಗನೈಜೇಷನ್ ಕಮಿಷನ್ ರಿಪೋರ್ಟ್ ಪ್ರಕಾರ ಬಿದರೆಯನ್ನು ಆಂಧ್ರಕ್ಕೆ ಸೇರಿಸಿತ್ತು. ಬಿದರೆ ನಮ್ಮ ಭಾಗ ಎಂದ ಹೇಳಿ ಬಿದರೆಯನ್ನು ಕರ್ಣಾಟಕಕ್ಕೆ ಸೇರಿಸಿ ಪ್ಲಾನ್ ಮಾಡಿದ್ದರು. ಬಿದರೆ ಕರ್ಣಾಟಕಕ್ಕೆ ಸೇರಿಸಿ ಪ್ಲಾನ್ ಮಾಡಿದ್ದಾಗ 23,91,68,000 ರೂಪಾಯಿಗಳನ್ನು ಅಲಾಟ್ ಮಾಡಿದರು. ಬೀದರ್ ಕಮಿಷನ್ ರಿಪೋರ್ಟ್ ಪ್ರಕಾರ ಆಂಧ್ರಕ್ಕೆ ಸೇರಿದಾಗ 21 ಕೋಟಿ ಅಲಾಟ್ ಮಾಡಿದ್ದರು ಆ ಮೇಲೆ 23 ಕೋಟಿ 91 ಲಕ್ಷ ಎಂದರೆ 24 ಕೋಟಿ ಬಂತು ಎಂದು ತಿಳಿದುಕೊಂಡೆವು. ಆ ರೀತಿ ಹಂಚಿಬಿಟ್ಟನಂತರ ಮರಾಠವಾಡ ಸದಸ್ಯರು ಜಗಳ ಮಾಡಿದರು. ಮರಾಠವಾಡಕ್ಕೆ ಬಹಳ ಅನ್ಯಾಯವಾಗಿದೆ, ನಾಲ್ಕು ಕೋಟಿ ರೂಪಾಯಿಗಳನ್ನು ಕೊಡಬೇಕು ಇಲ್ಲದಿದ್ದರೆ ಬಡ್ಜೆಟ್ ಪಾಸು ಮಾಡುವುದಿಲ್ಲ ಎಂದು ಕೂತರು. ಆಗ ಬಿಕ್ಕಟ್ಟಿನ ಪ್ರಸಂಗವೇ ಬಂತು. ಮುಖ್ಯಮಂತ್ರಿಗಳು ಅವರು ನಾಲ್ಕು ಕೋಟಿ ಕೇಳುತ್ತಿದ್ದಾರೆ ಈಗ ರಾಜ್ಯ ಹರಿದು ಹಂಚಿಹೋಗುತ್ತಿದೆ ಆದ್ದರಿಂದ ಅಸಮಾಧಾನಪಡುವುದು ಅಷ್ಟು ಚೆನ್ನಾಗಿಲ್ಲ, ನೀವು ಎರಡು ಕೋಟಿ ಕೊಡಿ ನಾವು ಎರಡು ಕೋಟಿ ಕೊಡುತ್ತೇವೆ ಎಂದು ಹೇಳಿದರು. 1947ನೆಯ ಇಸ್ವಿಯಲ್ಲಿ ತುಂಗಭದ್ರಾ ಪ್ರಾಜೆಕ್ಟ್ ತೆಗೆದುಕೊಂಡಿದ್ದರಿಂದ ಅದಕ್ಕಾಗಿ ಹೈದರಾಬಾದ್ ಕರ್ಣಾಟಕಕ್ಕೆ ಇಷ್ಟು ಪ್ಲಾನು ಇದೆ ಎಂಬುದನ್ನು ತೋರಿಸುತ್ತಿದ್ದೀರಿ, ನಮಗೆ ನ್ಯಾಯ ಮಾಡಿಲ್ಲ? ಎರಡು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆವು ಅದು ಆದನಂತರ ಏನಾಯಿತು ಎಂಬುದು ಗೊತ್ತಿಲ್ಲ. ಸ್ಟೇಟ್ಸ್ ರೀಆರ್ಗನೈಜೇಷನ್ ಆಯಿತು. ಹೊಸ ಸ್ಟೇಟ್ ಆಯಿತು. ಆಮೇಲೆ 24 ಕೋಟಿ ಹೋಗಿ 18 ಕೋಟಿ 62 ಲಕ್ಷ ಅಲಾಟ್ ಮಾಡಿದ್ದಾರೆ. 24 ಕೋಟಿ ಹೋಗಿ 18 ಕೋಟಿ ಆಗುವ ಪರಿಸ್ಥಿತಿ ಬಂತು. Size of the plan 18 ಕೋಟಿ ರೂಪಾಯಿಗಳಿಗೆ ರೆಡ್ಯೂಸ್ ಆಗುವುದಕ್ಕೆ ಮುಂಚೆ ಯಾರನ್ನು ಕೇಳಿ ಮಾಡಿದರು. ಹೈದರಾಬಾದಿನಿಂದ ಬಂದ ಸದಸ್ಯರನ್ನು

(ಶ್ರೀ ವೀರೇಂದ್ರ ಪಾಟೀಲ್)

ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಮಾಡಲಿಲ್ಲ. 24 ಕೋಟಿಯನ್ನು 18 ಕೋಟಿಗೆ ಇಳಿಸಿದ ನಂತರ ನಮ್ಮ ಗತಿ ಏನು? ಯಾವ ಪ್ಲಾನ್ಸ್ ಯಾವ ಐಟಮ್ಸ್ ಕಟ್ ಆಗಿದೆಯೋ ಗೊತ್ತಿಲ್ಲ. ನಮ್ಮ ಪ್ಲಾನಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವುದೂ ಕೂಡ ಗೊತ್ತಿಲ್ಲ. ಅರ್ಥ ಸಚಿವರು ಫೈನಾನ್ಸ್ ಬಂದಿತ್ತು ಎಂದು ಹೇಳಿದರು. ಸ್ಟೇಟ್ಸ್ ರೀಆರ್ಗನೈಜೇಷನ್ ಆದನಂತರ ಎಷ್ಟು ಹಿಂದುಳಿದ ಪ್ರದೇಶಗಳು ಬಂದುವು. ಅವುಗಳ ಅಭಿವೃದ್ಧಿಗಾಗಿ ಇನ್ನೂ ಹೆಚ್ಚು ದುಡ್ಡು ಕೊಡಿರಿ ಎಂದು ಮೆಮೋರೆಂಡಮ್ ಕಮಿಷನ್ನಿಗೆ ಕೊಟ್ಟರು. ಅವರು ಉದಾರ ಮನಸ್ಸಿನಿಂದ ಆರು ಕೋಟಿ ಕೊಟ್ಟರು. ಹರಿದುಹಂಚಿಹೋದ ಭಾಗದಲ್ಲಿ ಹೈದರಾಬಾದ್ ಕರ್ಣಾಟಕ ಎಲ್ಲಾ ಪ್ರದೇಶಕ್ಕಿಂತಲೂ ಹಿಂದುಳಿದದ್ದು ಆದ್ದರಿಂದ ಆರು ಕೋಟಿ ರೂಪಾಯಿ ಹೆಚ್ಚಿಗೆ ನಮ್ಮ ಹೆಸರಿನಲ್ಲಿ ತೆಗೆದುಕೊಂಡು ಅದರಲ್ಲಿ ಎಷ್ಟು ಹೆಚ್ಚಿಗೆ ಖರ್ಚು ಮಾಡುತ್ತಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇನ್ನೊಂದು ಹೇಳಬೇಕಾದರೆ ತಮ್ಮ ಅಧಿಕಾರಿಗಳನ್ನು ಕೇಳಿಕೊಳ್ಳಿ. ಮೊನ್ನೆತಾನೆ P.W.D. ಮಿನಿಸ್ಟರು ಒಂದು ಪ್ರಾಜೆಕ್ಟ್ ವಿಷಯದಲ್ಲಿ ನಮ್ಮ ಪ್ರಶ್ನೆಗೆ ಉತ್ತರ ಕೊಡುತ್ತಾ ನಮ್ಮಲ್ಲಿ ಪೇಪರ್ ಇಲ್ಲ ಎಂದು ಹೇಳಿದರು ಹೈದರಾಬಾದ್ ಕರ್ಣಾಟಕದಿಂದ ಎಷ್ಟೋ ಫೈಲ್ಸ್ ಬಂದಿಲ್ಲ ಎಂದು ಹೇಳುತ್ತಾರೆ. ಆಫೀಸರ್‌ಗಳನ್ನು ಕೇಳಿದರೆ ಬಂತು ಎಂದು ಹೇಳುತ್ತಾರೆ. ಹೀಗಾಗಿ ಫೈಲು ಬಂತೋ ಇಲ್ಲವೊ ಎನ್ನುವುದೂ ಕೂಡ ಗೊತ್ತಿಲ್ಲ. ರಿ ಸ ರ್ವೆ ಮಾಡೋಣ, ಪರಿಶೀಲನೆ ಮಾಡೋಣ ಎಂದು ಬರೆಯುತ್ತಿದ್ದಾರೆ. ಹೈದರಾಬಾದ್ ಕರ್ಣಾಟಕದ ಪ್ಲಾನು ಏನು ಎಂಬುದು ಗೊತ್ತಿಲ್ಲ. ಯಾವ ಯಾವ ಐಟಮ್ಸ್ ಇದೆ, ಯಾವ ಐಟಮ್ಸ್ ಇಲ್ಲ ಎಂಬುದು ಗೊತ್ತಾಗಬೇಕು. ಇದೇ ಸಂದರ್ಭದಲ್ಲಿ ಹೈದರಾಬಾದ್ ಸದಸ್ಯರನ್ನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ನಮ್ಮ ಪ್ಲಾನ್ ಕಟ್ ಮಾಡಲು ಕಾರಣ ಏನು ಯಾವ ಯಾವ ಐಟಮ್ಸ್ ತೆಗೆದುಕೊಳ್ಳುತ್ತಾರೆ ಯಾವ ಯಾವ ಕೆಲಸಕ್ಕೆ ಎಷ್ಟು ಖರ್ಚು ಮಾಡುತ್ತಾರೆ ಯಾವ ಕೆಲಸದ ಸಲುವಾಗಿ ಖರ್ಚು ಮಾಡುತ್ತಾರೆ ಎಂಬುದರ ಬಗ್ಗೆ ಒಂದು ನೋಟ್ ಕೊಟ್ಟರೆ ಬಹಳ ಉಪಕಾರವಾಗುತ್ತದೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಹೈದರಾಬಾದ್ ಕರ್ಣಾಟಕ ಉಳಿದ ಭಾಗಕ್ಕಿಂತ ಹೆಚ್ಚು ಹಿಂದುಳಿದಿದೆ ಎಂದು ಅಂಕಿ ಸಂಖ್ಯೆಗಳನ್ನು ಕೊಟ್ಟು ಬೇಕಾದರೆ ಹೇಳುತ್ತೇನೆ. ಅದನ್ನು ಹೇಳುವುದಕ್ಕೆ ಮುಂಚೆ ಒಂದು ವಿಷಯವನ್ನು ಹೇಳಬೇಕೆಂದಿದ್ದೇನೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಹೈದರಾಬಾದು ಹಳೆಯ ಮೈಸೂರಿನ ಮಟ್ಟಕ್ಕೆ ಬರುವವರೆವಿಗೂ ಮೈಸೂರಿನಲ್ಲಿ ಯಾವ ಪ್ರಗತಿ ಆಗಬಾರದು ಎನ್ನುವ ಭಾವನೆಯಿಲ್ಲ. ಮೈಸೂರಿನಲ್ಲಿ ಯಾವ ರೀತಿ ಪ್ರಗತಿ ಉಂಟಾಗಿದೆ ಅದರಂತೆ ಹೈದರಾಬಾದಿನಲ್ಲೂ ಆಗುವಂತೆ ಮಾಡಿ ಕೊಡಿ ಎಂದು ಹೇಳುತ್ತೇನೆ. ಕೆಲವು ಅಂಕೆ ಸಂಖ್ಯೆಗಳನ್ನು ಕೊಡುತ್ತೇನೆ. ಮೊದಲನೆಯದಾಗಿ ರೋಡ್ಸ್ ವಿಷಯ ತೆಗೆದುಕೊಳ್ಳುತ್ತೇನೆ.

ರೋಡುಗಳ ವಿಷಯ ತೆಗೆದುಕೊಳ್ಳೋಣ. ನಮ್ಮ ಕಡೆಗಳ ರೋಡುಗಳ ಪರಿಸ್ಥಿತಿಯನ್ನು ನಮ್ಮ ಮಂತ್ರಿಗಳೂ ಕೂಡ ಹೋಗಿ ನೋಡಿಕೊಂಡು ಬಂದಿರಬಹುದು. ನಾನೇನೂ ಹೊಸದಾಗಿ ಹೇಳುವಂತಿಲ್ಲ. ನಮ್ಮ ಕಡೆ ಭಾಗಗಳಲ್ಲಿ ನೂರು ಚದರ ಮೈಲಿಗೆ ಸುಮಾರು 8.6 ಮೈಲಿಯಷ್ಟು ಮಾತ್ರ ರೋಡುಗಳಿವೆ. ಅದೇ old Mysore areaದಲ್ಲಿ 36.7 ಮೈಲಿಗಳಷ್ಟು ರೋಡುಗಳಿವೆ. ಹೈದರಾಬಾದು ಪ್ರದೇಶದ ಭಾಗಗಳು ಬಹಳ ಹಿಂದುಳಿದಿದ್ದರಿಂದ ಅದನ್ನು ನಮ್ಮ ಹಳೆಯ ಮೈಸೂರಿನ ಮಟ್ಟಕ್ಕೆ ತರಬೇಕಾದರೆ ಇನ್ನೂ ನಾಲ್ಕು ಸಾವಿರ ಹೆಚ್ಚು ಮೈಲಿಗಳಷ್ಟು ರೋಡುಗಳನ್ನಾದರೂ ಮಾಡಬೇಕು. ಇದಕ್ಕೆ ಸುಮಾರು ಐದು ಕೋಟಿ ರೂಪಾಯಿಗಳಷ್ಟನ್ನಾದರೂ ಖರ್ಚು ಮಾಡಬೇಕೆಂದು ತಮ್ಮಲ್ಲಿ ನಾನು ವಿನಯಪೂರ್ವಕವಾಗಿ ಹೇಳುತ್ತೇನೆ.

ಇವತ್ತು ನಮ್ಮ ಕಡೆ ಅನೇಕ ತಾಲ್ಲೂಕುಗಳಲ್ಲಿ ಎತ್ತಿನ ಬಂಡಿ, ಕುದುರೆ ಮೇಲೆ ಹೋಗತಕ್ಕ ಪ್ರಸಂಗ ಇವೆ. ಅನೇಕ ತಾಲ್ಲೂಕುಗಳಿಂದ District Headquartersಗೆ ಹೋಗಲು ರಸ್ತೆಯಿಲ್ಲದೆ ತೊಂದರೆಯಾಗಿದೆ. ನನ್ನ ಕಾನ್‌ಸ್ಟಿಟ್ಯೂಯನ್ಸಿಗೇನೆ ಹೋಗಬೇಕಾದರೆ ನಾನು ಅರವತ್ತು ಮೈಲಿಗಳಷ್ಟು ದೂರ ಆಂಧ್ರ ಕಾನ್‌ಸ್ಟಿಟ್ಯೂಯನ್ಸಿಯೊಳಗೆ ಹಾದು ಹೋಗಬೇಕಾಗಿದೆ. ಇದು ತುಂಬಾ ಶೋಚನೀಯವಾದ ಅಂಶ. Second-Five Year Planನಲ್ಲಾದರೂ ಈ ಬಗ್ಗೆ priority ಯಿಂದಲಾದರೂ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ನಾನು ಯಾರೊಬ್ಬರ ಮೇಲೂ ಹೇಳುತ್ತಿಲ್ಲ. ಯಾರೂ ನಾನು ಹೇಳುವುದನ್ನು ತಪ್ಪು ಎಂದು ತಿಳಿದುಕೊಳ್ಳಬಾರದು. ಇಲ್ಲಿ ಸರಕಾರ ಮಾಡಿದ್ದರೆ ಆಗುತ್ತಿತ್ತು ಎಂದು ಹೇಳುತ್ತಿಲ್ಲ. ದೇಶದ ಸಲುವಾಗಿ ಹೈದರಾಬಾದಿನ ಕರ್ನಾಟಕದ ಪ್ರತಿನಿಧಿಗಳ ಸಲುವಾಗಿ ಅವರಿಗೆ ಸೌಕರ್ಯವಾಗಬೇಕೆಂದು ಹೇಳುತ್ತಿದ್ದೇನೆ. ಮಿನಿಸ್ಟರು ಯಾರೇ ಬರಲಿ ಯಾರೇ ಹೋಗಲಿ ಅಧಿಕಾರದಲ್ಲಿರತಕ್ಕ ಮೆಷಿನರಿ ಸರಿಯಾಗಿರಬೇಕು ಎನ್ನುವ ಕುತೂಹಲದಿಂದ ಹೇಳುತ್ತಿದ್ದೇನೆ. ಯಾವುದಾದರೂ ಬೇರೆ ಸರಕಾರ ಇದ್ದರೆ ಇಂತಹ ಪರಿಸ್ಥಿತಿ ಇರುತ್ತಿರಲಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಂತಹ ಪರಿಸ್ಥಿತಿಯನ್ನು ಪರಿಹರಿಸದೇ ಇರುವುದು ಸರಿಯಲ್ಲ. ಫೈಲುಗಳು ಮತ್ತು ಪೇಪರುಗಳು ಮಂತ್ರಿಗಳಿಗೇನೋ ಬರುತ್ತದೆ. ಅದನ್ನು ಯಾವ ರೀತಿಯಾಗಿ ಸುಧಾರಿಸಿದ್ದೀರಿ ಎಂದು ನಾನು ಕೇಳುತ್ತೇನೆ.

Sri M. RAMAPPA (Harihar).—Is it the intention of the Sp aker that no chance should be given to this side?

Mr. SPEAKER.—After all, no member from Hyderabad Karnatak has spoken. Not only that. Latitude has been given to members on the Opposition side also. The P.S.P. members have taken six hours; the other Opposition members have taken 5 hours 11 minutes. The Congress members have taken 11 hours. I have been very fair.

Sri J. H. SHAMSUDDIN (Deputy Minister for Finance).—I would request the Speaker to fix the proportion of speakers in relation to the party strength.

Mr. SPEAKER.—That is what I have done. *Two for the Congress and one for the Opposition.*

Sri J. H. SHAMSUDDIN.—The relation must be both in number of speakers as well as in time.

Mr. SPEAKER.—I have no objection; I would gladly do it. I have come to the conclusion that I must fix the time for each party. I have been very kind to the Opposition. I have given 11 hours to the Opposition including P.S.P. and other members. The Members of the Congress party also should get 11 hours on an equal basis. The only alternative for me is that I should divide the time according to the strength; I will do it if the Leader of the House, the Leader of the Opposition and other members agree.

Sri B. SHAMSUNDER (Bhalki).—Is it in order to allow Police in the lounge or lobby?

Mr. SPEAKER.—I am not aware whether the Police are in the lobbies. They will not be in the lobbies; they may be just at the entrance. They are allowed in the gallery.

ಶ್ರೀ ವೀರೇಂದ್ರ ಪಾಟೀಲ್. ಇನ್ನು ಹೆಲ್ತ್‌ನ ಬಗ್ಗೆ 88 ಸಾವಿರ ಜನಸಂಖ್ಯೆ ಇರುವ areaಕ್ಕೆ ಒಂದು Allopathic Hospital ಇದೆ. ಅದೇ old Mysore area ದಲ್ಲಿ 19,215 ಜನಸಂಖ್ಯೆಗೆ ಒಂದು ಅಸ್ಪತ್ರೆ ಇದೆ. ಈ ರೀತಿಯಲ್ಲಿ ವಿದ್ಯಾಭ್ಯಾಸದಲ್ಲಿಯೂ ಕೂಡ ಹಿಂದಿನ ಮತ್ತು ಮುಂದಿನ ಅಂಕಿಅಂಶಗಳ ಸಂಖ್ಯೆಯನ್ನು ಕೊಡಬೇಕಾದ ಆವಶ್ಯಕತೆಯಿಲ್ಲ. ನಮ್ಮಲ್ಲಿ ಎಷ್ಟೋ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಹೈಸ್ಕೂಲೇ ಇಲ್ಲ. ನಮ್ಮ ಡಿವಿಜನ್ನಿನ ಹೆಡ್‌ಕ್ವಾರ್ಟರಿನಲ್ಲಿ ಕಾಲೇಜು ಇಲ್ಲ. ಕಾಲೇಜಿಗೆ ಬರಬೇಕಾದರೆ ಬೆಂಗಳೂರಿಗೆ ಬರಬೇಕು. ಕಲ್‌ಬರ್ಗಿಯಲ್ಲಿ Head quarters High School ಇಲ್ಲ. ಆದರೆ ಅಲ್ಲಿನ ತಾಲ್ಲೂಕಿನಲ್ಲಿ ಹೈಸ್ಕೂಲಿದೆ. ಬೀದರ್ ಡಿಸ್ಟ್ರಿಕ್ಟಿಗೆ ಇದುವರೆಗೂ ಒಂದು ಕಾಲೇಜು ಇಲ್ಲ. ಎಷ್ಟೋ ವರ್ಷಗಳಿಂದ ಕಾಲೇಜು ಬೇಕೆಂದೂ ಬೇಡುತ್ತಿದ್ದರೂ ಇನ್ನೂ ಆಗಿಲ್ಲ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ವಿದ್ಯಾಶಾಖೆಯ ಮಂತ್ರಿಗಳು ಹೈದರಾಬಾದು ಏರಿಯಾಕ್ಕೆ ಎಷ್ಟೋ ಪ್ರೈಮರಿ ಸ್ಕೂಲುಗಳನ್ನು ಕೊಟ್ಟಿದ್ದೇನೆಂದು ಹೇಳಿದರಲ್ಲ, ಎಲ್ಲಿ ಕೊಡಬೇಕಾಗಿತ್ತು?

ಶ್ರೀ ವೀರೇಂದ್ರ ಪಾಟೀಲ್.—ನನಗಿರುವ ಕಾಲಾವಕಾಶದಲ್ಲಿ ಹೀಗೆ interfere ಮಾಡಿದರೆ ನನ್ನ ಕೈಲಿ ಎಲ್ಲ points ಗಳನ್ನೂ ಕುರಿತು ಈಗ ಮಾತನಾಡುವುದಕ್ಕೆ ಸಾಧ್ಯವಿಲ್ಲ.

ಹಾಗೆಯೇ ಇನ್ನು well sinkingನ ಬಗ್ಗೆ ಹೇಳಬೇಕಾಗಿದ್ದರೆ. ನಮ್ಮಲ್ಲಿ ಶೇಕಡ 33 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ. ಕುಡಿಯುವ ನೀರಿನ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ಐದು ಮೈಲಿಗಳಷ್ಟು ದೂರಹೋಗಿ ನೀರನ್ನು ತರಬೇಕಾದ ಪರಿಸ್ಥಿತಿ ಇದೆ. ಇದೇ ತರಹದ ಸ್ಥಿತಿ ಬಿಜಾಪುರದಲ್ಲಿಯೂ ಇದೆ. ಒಂದೊಂದು ಸ್ಥಳದಲ್ಲಿ ಒಂದೊಂದು ಕುಡಿಯುವ ನೀರಿನ ಬಾವಿಯನ್ನಾದರೂ ಮಾಡಿಸಿಕೊಟ್ಟಹೊರತು ನಾವು ನಮ್ಮ ದೇಶವನ್ನು welfare state ಎಂದು ಕರೆಯುವುದಕ್ಕಾಗುವುದಿಲ್ಲ.

Sri C. J. MUCKANNAPPA.—There are 3 or 4 police officials moving about in mufti in the lobby and the lounge. That was what I brought to your notice some time back.

Mr. SPEAKER.—You did not tell me that they ware moving about in the lobbies and lounges. They will be allowed only at the entrance of the Hall.

Sri A. V. NARASIMHA REDDY (Bangalore South).—If they have come here for any police work, then that will be wrong. Otherwise, they are free to move about in these premises.

Mr. SPEAKER.—Nobody can be allowed in the lounges and lobbies except the members. That is meant only for members. If it is brought to my notice that outsiders are moving about in the lobbies and lounges, they will be expelled, whoever they may be.

Sri J. B. MALLARADHYA (Nanjangud).—When half-a-dozen members of the Opposition were talking in the lounge, three or four people who looked suspicious and prying, tried to overhear our conversation. I should like the Speaker to depute somybody and see whether this is going on or not. It looks as though we are treated like criminals. I did not expect that a thing like this would happen in the lounges and lobbies. Even if they have come here on any Government work to arrest anybody, they must take the permission of the Speaker to enter the precincts of the lounges and the lobbies. The presence of these people in the lounges is derogatory to the dignity of the members.

Mr. SPEAKER.—I agree with you there. It is for the first time and only today that this fact has been brought to my notice. I will see that no police men ever enters the lounge or lobby. They are meant only to keep watch and ward outside the precincts of the Legislature lounge and lobby. They are allowed in the galleries.

Sri Y. VEERAPPA.—I want to have a clarification from Government as to whether they have instructed the police to move about in the lounge and lobby.

Mr. SPEAKER.—I have said that the police are here with my permission.

Sri G. N. PUTTANNA (Tumkur).—When they are moving about in the lounge I am afraid of my own safety.

Sri N. RACHIAH—Government have not deputed any police or reserve police C.I.D. to the lobby or lounge. The practice is that only members are allowed in the lobby and lounge. Ex-members of the Legislature are allowed in the lobby and lounge with the permission of the Speaker. This is the practice in Parliament also. Government have not deputed any police to the Opposition lobby or Congress lobby.

Sri V. P. DEENADAYALU NAIDU.—You were pleased to tell us that the police were here with your permission. Let us know how the whole thing has come about. Who asked for permission of the Speaker? What is the basis on which these people have come here? Did they ask for permission? Is there any compelling necessity for the Speaker to indent on them and to give permission? I would like to know how the whole thing has come about and where is the necessity for these people to be here.

Mr. SPEAKER.—The Hon'ble Member is under a wrong impression. The police are not here as police; they are here as watch and ward. They have been posted here, because I wanted them and because this is the practice in other Assemblies and in Parliament. If they have come here as watch and ward they can move about, but if they come here as police they cannot go about in the lobby or lounge. When they are here as watch and ward, they work under my orders. They are part and parcel of our watch and ward. If any extra police comes here as police, then certain restrictions have to be put.

Sri J. P. SARWESH (Jewargi).—Sir, you said that they were protecting the members. I think you must withdraw those words.

Mr. SPEAKER.—They are meant for the protection of the members here and the protection of the House and the Chair. This is the practice everywhere. Protection to the life of a member so long as he is within the precincts of the House is my concern. I have to give them safety and protection.

Sri G. VENKATAI GOWDA (Palaiyam).—The presence of so many police officials in mufti in a group in the lobby and lounge naturally leads to a presumption that the Government must have sent them here to watch our movements.

Mr. SPEAKER.—That is a wrong impression. Nobody is here at the behest of Government. Everybody who has come here as watch and ward or as police is here under my orders.

Sri C. M. ARUMUGHAM.—If they belong to the watch and ward, the watch and ward people have got an uniform and a badge, but I do not find these people with the uniform and badge. So it appears to us that they have come from the Police Department. I understand that the Government have instructed the D.S P., Bangalore Division, to post them here and so he has sent his men to the lobby. Because they are police officials and because the watch and ward also are drawn from the police and because the police officials are the friends of these people, they allow them to move about in the lobby and lounge. There is therefore a danger to the safety of the members. If you want a watch and ward, you must draw them from some other department and not from the police Department.

Mr. SPEAKER.—I have heard what the Hon'ble Member wanted to say, but I would say that this is not a practice which I have started, but this is the normal practice which has been followed in Mysore for a very long time and this is the practice elsewhere also. I have seen in Bombay also that the Bombay Legislature draws on the police for its watch and ward. This is the practice in the Lok Sabha also. Therefore, there is nothing wrong in this practice. If you say that we should have an independent watch and ward, that is a different matter. In the Lok Sabha and the Rajya Sabha, they have separate watch and ward, but there also they draw from the police for their watch and ward. But if Hon'ble Members have any grievance against the police who are here as

watch and ward, I will examine it and I will see that no Hon'ble Member is inconvenienced. At the same time, I request Hon'ble Members to bear with me when I say that the watch and ward work under my orders, but if any person is found working as a police officer here, then I will see that the man is expelled immediately.

Sri V. P. DEENADAYALU NAIDU.—I would like to know how my safety is jeopardised in this House. What is the necessity for these people ?

Mr. SPEAKER.—I do not know that, but I can only say that this is the practice everywhere. I have got to see to the safety of the members. Morever, we have got to keep out the public from the entrance and see that they do not enter the House. If, however, members ask me, what is wrong with us, who is going to molest or manhandle us, that is a different matter. I am sure that nobody is going to manhandle or insult the members here, but even then it is my duty to give them protection.

11-30 A.M.

Sri B. L. NARAYANASWAMY (Mulbagal).—Sir, commonsense dictates that there is need for home guards to be here.

Mr. SPEAKER.—I have already stated that the practice is to obtain them from the Police Department. I will keep in view the suggestion regarding home guards. But the trouble is that we will have to pay for the home guards which means additional expenditure. We are not paying to the Police.

Sri M. RAMAPPA.—There are C.I.D.s watching our movements.

Mr. SPEAKER.—If the Hon'ble Member gives his name, I will expel him and substitute by some other person.

*ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಅಧ್ಯಕ್ಷರೆ, ಸುದೈವದಿಂದ ಮಾತನಾಡಲು ಅವಕಾಶ ಸಿಕ್ಕಿದರೆ, ನನ್ನ ಕಾಲಕ್ಕೇ ತುಂಬ ಗಲಾಟೆಯ ಪ್ರಸಂಗ ನನ್ನ ದುರ್ದೈವದಿಂದ ಬಂದು ಒದಗಿದೆ. ನಾನು ಚಿಕ್ಕವನಿದ್ದಾಗ ನನ್ನ ತಂದೆ ತಾಯಿಗಳು ಗರಡಿ ಮನೆಗೆ ಹೋಗು ಎಂದು ಹೇಳಿದರು. ನಾನು ಹೋಗದ್ದರಿಂದ ದೇವರು ಒಂದು ಶಾಪ ಕೊಟ್ಟು ಬಿಟ್ಟ. ಮುಂದಿನ ಕಾಲಕ್ಕೆ ನೀನು ಎಂ. ಎಲ್. ಎ. ಆಗುತ್ತಿ, ಆಗ ನಿನ್ನವರೇ ಒಬ್ಬರು ನಿನ್ನಿಂದ ಉಟ್‍ಬ್ರೈಸ್ ತೆಗೆಯುತ್ತಾರೆಂದು. ಆ ಕಾಲ ಈಗ ಬಂದಿದೆ. ನೋಡಿ, ನನ್ನ ಊರಿನವರೇ ಆದ ಶ್ರೀ ಕಂಬಿಯವರು ಉಟ್ ಬ್ರೈಸ್ ತೆಗೆಯುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ಉಟ್‍ಬ್ರೈಸ್ ಎಲ್ಲರಿಗೂ ನಡೆಯುತ್ತಿದೆ.

ಶ್ರೀ ಬಿ. ಕೆ. ನಾಗೂರ್.—ಪ್ರತಿ ವರ್ಷವೂ ಕಾಲವನ್ನು ಒದಗಿಸಿಕೊಳ್ಳಬೇಕಾಗಿದೆ. ಹೋದಸಲ ಮಾತನಾಡುವ ಕಾಲದಲ್ಲ ಏಳು ಜನ ಮಂತ್ರಿಗಳು 3¼ ಉಪ ಮಂತ್ರಿಗಳಿದ್ದರು. 3¼ ಏಕೆಂದರೆ, ಹೊರಗಡೆಯಿಂದ ಒಬ್ಬರು ಬರುತ್ತಿದ್ದರು. ಈಗ ಮೂರು ಜನ ಮಂತ್ರಿಗಳು, ಮೂರು ಜನ ಉಪಮಂತ್ರಿಗಳಿದ್ದಾರೆ. ಸಂತೋಷದ ಸಂಗತಿ. ಹೋದ ಸಮಯದಲ್ಲಿ ನಾನು ಮಾತನಾಡಿದ ಹಾಗೆಯೇ ಸರ್ಕಾರದ ರೀತಿನೀತಿಗಳಲ್ಲಿ ಏನೇನು ಲೋಪದೋಷಗಳಿವೆಯೋ ಅವುಗಳನ್ನು ತಿಳಿದುಕೊಂಡು ಸರಿಮಾಡುವ ದೃಷ್ಟಿಯಿಂದ ಮಾತನಾಡುತ್ತ ಇದ್ದೇನೆ. ಮಂತ್ರಿಗಳು ಅಸೆಂಬ್ಲಿ ನಡೆಯುವ ಕಾಲದಲ್ಲಿ ಎಲ್ಲಿಯಾದರೂ ಸಂಚಾರಕ್ಕೋ, ಅಸ್ತಿಭಾರ ಹಾಕುವುದಕ್ಕೋ ಹೋದರೆ, ಇಲ್ಲಿ ನಮ್ಮನ್ನು ಕೇಳುವವರು ಯಾರು ! ಹಾಗೆ ಆಗಬಾರದು. ಇಂದು ಮುಖ್ಯ ಮಂತ್ರಿಗಳು ಹಾಗೂ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಎಲ್ಲಿಯೋ ಆರು ಗಂಟೆಗೆ ದೀಪ ಹಚ್ಚುವುದಕ್ಕೆ ಹೋಗುತ್ತಾರಂತೆ. ಹೀಗೆ ಮಾಡದೆ, ಉಳಿದ ಕಾಲವನ್ನು ಅಡ್ಡಾಡಿಕೊಳ್ಳಲಿಕ್ಕೆ ಇಟ್ಟುಕೊಳ್ಳಬಹುದು.

ಕಂದಾಯ ಖಾತೆಗೆ ಸಂಬಂಧಪಟ್ಟಂತೆ ಒಂಭತ್ತು ಕಾನೂನುಗಳನ್ನು ಪಾಸುಮಾಡಿದುದಕ್ಕಾಗಿ ಮಂತ್ರಿಗಳು ಈ ಸಭೆಗೆ ಧನ್ಯವಾದಗಳನ್ನು ಅರ್ಪಿಸಿದ್ದಾರೆ. ಆದರೆ ಈ ಸಭೆಗೆ ಮಂತ್ರಿಗಳ ಧನ್ಯವಾದಗಳ ಅವಶ್ಯಕತೆ ಇಲ್ಲ. ರಾಷ್ಟ್ರದ ಹಿತದೃಷ್ಟಿಯಿಂದ ಒಂಭತ್ತು ಏಕೆ, 90 ರಚನಾತ್ಮಕ ಕಾನೂನುಗಳನ್ನು ಪಾಸು ಮಾಡಲು ಈ ಸಭೆಯವರು, ಯಾವಾಗಲೂ ಸಿದ್ಧರಿದ್ದಾರೆ. ಆದರೆ ಪಾರ್ಟಿ ಪಕ್ಷಗಳ ಒಳಗುಂಪುಗಳ ಜಗಳದಿಂದ ಈ ಸಭೆಯ ಕಾರ್ಯ ಒಂದುಮಟ್ಟಿಗೆ ಸ್ತಂಭಿತವಾಗಿದೆ. ಇದ್ದಕ್ಕಿದ್ದಹಾಗೆಯೇ ಸಭೆಯ ಕಾರ್ಯಕಲಾಪಗಳನ್ನು ಮುಗಿಸಿಬಿಡುತ್ತೀರಿ. ಈ ಸಭೆಯನ್ನು ದಸರಾದೊಳಗೆ ಕರೆಯಬೇಕಾಗಿತ್ತು. ಸಭೆ ಕರೆಯುವಾಗ ಒಂದು ವಾರ ನಿಧಾನ; ಸಭೆ ಮುಕ್ತಾಯಮಾಡುವುದು ಒಂದೆರಡು ವಾರ ಮೊದಲು. ನಡುವಿನ ಅಧಿವೇಶನಗಳನ್ನೇ ಹಾರಿಸಿ ಬಿಡುವುದು ಬೇರೆ. ಹೀಗೆ ಸರಕಾರ ಈ ಸಭೆಯ ಕಾರ್ಯಮಾಡಲು ಆತಂಕವನ್ನೇ ಮಾಡುತ್ತಾ ಬಂದಿದೆ. ಈಗ ಸಭೆಯ ಎದುರು ಬಂದಿರುವ 18 ಕಾನೂನುಗಳನ್ನೂ ಇನ್ನೂ ಬರಲಿರುವ ಒಂಭತ್ತು ಕಾನೂನುಗಳನ್ನೂ ಇದೇ ಅಧಿವೇಶನದಲ್ಲಿ ಪಾಸುಮಾಡಿದ ನಂತರ ಈ ಸಭೆಯನ್ನು ವಿಸರ್ಜಿಸಬೇಕು. ಈ ಸಭೆಯ ಸದಸ್ಯರು ತಮ್ಮ ಅನಾನುಕೂಲತೆಗಳನ್ನು ಕಡೆಗಣಿಸಿ ಈ ಕಾರ್ಯದಲ್ಲಿ ಸರ್ಕಾರಕ್ಕೆ ಸಹಾಯವಾಗುವುದರಲ್ಲಿ ಸಂಶಯವಿಲ್ಲ. ಇಷ್ಟರಿಂದಲೂ ಕಾರ್ಯ ಮುಗಿದಂತಾಗುವುದಿಲ್ಲ. ಇನ್ನೂ ನೂರಾರು ಕಾನೂನುಗಳ ಸಮೀಕರಣವನ್ನು ಈ ಸಭೆಯು ಮಾಡಬೇಕಾಗಿದೆ. ಸರಕಾರವು ತನ್ನ ಪಕ್ಷದ ಜನರಿಗೆ ಬೆದರದೆ ಈ ಸಭೆಯ ಎದುರು ರಚನಾತ್ಮಕ ಕಾನೂನುಗಳನ್ನು ಮಂಡಿಸುತ್ತ ಹಾಗೂ ಈ ಸಭೆಯ ಸಹಕಾರವನ್ನು ಪಡೆಯುತ್ತಾ ಮುಂದುವರಿಯಬೇಕು. ಹಾಗೆ ಮಾಡಿದರೆಯೇ ಈ ರಾಜ್ಯದ ಜನತೆಯ ಕಲ್ಯಾಣವಾಗುವುದು. ಕಾಂಗ್ರೆಸ್ಸಿನ ಒಳ ಪಂಗಡಗಳಿಗೆ ಜಗ್ಗದೆ, ಶ್ರೀಮಾನ್ ಜತ್ತಿಯವರು ಇಂಗ್ಲಿಷ್ ಸ್ಪೆಲ್ಲಿಂಗಿನ ಜಟ್ಟಿಯವರಾಗಬೇಕು ;

(ಶ್ರೀ ಬಿ. ಕೆ. ನಾಗೂರ್)

ಕನ್ನಡ ಜತ್ತಿಯವರಾಗಕೂಡದು. ಇಂಗ್ಲೀಷಿನಲ್ಲಿ Jatti ಎಂದು ಇದೆ. ಜಟ್ಟಿಯಾಗಬೇಕು, ಜಾತಿಯಾಗ ಕೂಡದು. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಿಗೆ ಅಭಿಮಾನದಿಂದ ಹೇಳುತ್ತಿದ್ದೇನೆ. ಯಾವುದಾದರೂ ಆರ್ಡರ್ ಮಾಡಿದರೆ ಅದನ್ನು ಸಮರ್ಥನೆಮಾಡಿಕೊಳ್ಳ ಬೇಕು. ಎರಡು ಪ್ಲಸ್ ಎರಡು ನಾಲ್ಕು ಆಗಬೇಕೇ ವಿನಾ, ನಾಲ್ಕು-ಐದು-ಏಳು-ಆರ್-ಒಂಭತ್ತು ಅಂದರೆ, ಆಡಳಿತ ಅಷ್ಟು ಸಮರ್ಪಕವಾಗಿರುವುದಿಲ್ಲ. ನಿಮ್ಮ ಟ್ರಾನ್ಸ್‌ಫರ್ ಆರ್ಡರುಗಳನ್ನು ನೋಡಿರಿ. ಒಬ್ಬ ಅಧಿಕಾರಿಯನ್ನು ಮೈಸೂರಿಗೆ ವರ್ಗ ಮಾಡುತ್ತೀರಿ. ಅವನು ಮೈಸೂರು ಮುಟ್ಟುವುದರೊಳಗಾಗಿ, ತುಮ ಕೂರಿಗೆ ವರ್ಗವಾಗಿದೆ ಎಂದು ಹೇಳುತ್ತೀರಿ. ಅತ ತುಮಕೂರಿಗೆ ಹೋಗೋಣವೆಂದು ಯೋಚಿಸುತ್ತಿದ್ದರೆ, ಬಿಜಾಪುರಕ್ಕೆ ಹೋಗಬೇಕೆಂದು ಆರ್ಡರ್ ಬರುತ್ತದೆ. ಈರೀತಿ ಅನ್ಯಾಯವಾದಂಥ ಆರ್ಡರ್ ಮಾಡಕೂಡದು. ಯಾವುದೇ ಆರ್ಡರ್ ಇರಲಿ, ಒಬ್ಬ ಅಧಿಕಾರಿಗೆ ಒಂದು ಕಾಲಕ್ಕೆ, ಒಂದು ಕಡೆ ವರ್ಗಮಾಡಿದರೆ, ಯಾವ ಎಂ.ಎಲ್.ಎ. ಆಗಲಿ, ಮಂತ್ರಿಗಳೇ ಆಗಲಿ, ಅವರ ಅಪ್ಪರೋ, ಅಳಿಯನೋ ಬಂದು ಶಿಫಾರಸು ಮಾಡಿದರೆ, ಅದನ್ನು ಕ್ಯಾನ್ಸಲ್ ಮಾಡಲಿಕ್ಕೆ ಮನಸ್ಸು ಮಾಡ ಕೂಡದು.

ಶ್ರೀ ಕಡಿದಾಳ್ ಮಂಜಪ್ಪ.—Instances ಕೊಡಿ.

ಶ್ರೀ ಬಿ. ಕೆ. ನಾಗೂರ್.—ಆಮೇಲೆ ಕೊಡು ತ್ತೇನೆ. ಈಗ ನಾನು ಈಲ್ಡ್ ಆಗುವುದಿಲ್ಲ. ಮಂತ್ರಿ ಗಳು ದಯವಿಟ್ಟು ಇಂಟರ್‌ಫಿಯರ್ ಮಾಡಕೂಡದು. ನನ್ನ ಕಾಲಾವಕಾಶವನ್ನು ಕಳೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

ಈಗ ಈ ಸಭೆಯ ಮುಂದೆ 18 ಕಾನೂನುಗಳಿವೆ, ಇನ್ನೂ ಒಂಭತ್ತು ಕಾನೂನುಗಳು ಇದೇ ಅಧಿವೇಶನ ದಲ್ಲಿ ಬರಲವೆ. ಇವುಗಳನ್ನು ಈ ಅಧಿವೇಶನದಲ್ಲಿಯೇ ಪಾಸುಮಾಡಬೇಕು. ಏಕೆ ಈ ವಿಷಯವನ್ನು ಪುನಃ ಹೇಳಬೇಕೆಂದರೆ, ಮೊನ್ನೆ ಅಸೆಂಬ್ಲಿಗೆ ಬರುವ ಪೂರ್ವ ದಲ್ಲಿ ಒಂದು ಊರಿಗೆ ಹೋಗಿದ್ದೆ. ರಾಶಿಮಾಡತಕ್ಕಂಥ ಕಾಲದಲ್ಲಿ ಒಬ್ಬ ರೈತ, ರಾಶಿಮಾಡಿಕೊಂಡು ಬರುವುದ ರಲ್ಲಿ ತಡಮಾಡಿದ ಇನ್ನೊಬ್ಬನಿಗೆ ಹೀಗೆಂದು ಹೇಳಿದ: "ಮೈಸೂರು ಮಂತ್ರಿಗಳ ಹಾಗೆ ಮಾಡುತ್ತೀಯಲ್ಲ" ಎಂದು. ಇದರ ಅರ್ಥ "ಮನೆಯಲ್ಲೇ ಇರುವುದಿಲ್ಲ, 24 ತಾಸೂ ಅಡ್ಡಾಲಕ್ಕೆ ಹೊರಗೇ ಇರುತ್ತಿ" ಎಂದು ನಮ್ಮಲ್ಲಿ ಜನ ಸಾಮಾನ್ಯರು ಉದಾಹರಣೆ ಕೊಡುವ ರೀತಿಯಲ್ಲಿ ನಮ್ಮ ಮಂತ್ರಿಗಳ ಪ್ರವಾಸ ಕಾರ್ಯಕ್ರಮ ಆಗಬಾರದೆಂದು ಮಂತ್ರಿಗಳನ್ನ ದಯವಿಟ್ಟು ಕೇಳಿ ಕೊಳ್ಳುತ್ತೇನೆ.

ಮಾತನಾಡುವ ವಿಷಯಗಳು ಬಹಳ ಇವೆ. ಶ್ರೀ ಮಲ್ಲಾರಾಧ್ಯರು ಹೆಚ್ಚಾಗಿ ಎಲ್ಲಾ ವಿಷಯಗಳ ಮೇಲೂ ಮಾತನಾಡಿದ್ದಾರೆ. ಶ್ರೀ ಮಲ್ಲಾರಾಧ್ಯರು ವಿರೋಧ ಪಕ್ಷದಲ್ಲಿರುವುದನ್ನು ನಾನು ಅಭಿಮಾನದಿಂದ ಹೇಳಿಕೊಳ್ಳುತ್ತೇನೆ. ನಾನು ಜಾಸ್ತಿ ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ. ನನಗಿರುವ ಕಾಲಾವಕಾಶ ವನ್ನೂ ಮಲ್ಲಾರಾಧ್ಯರಿಗೇ ಕೊಡುತ್ತಿದ್ದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಸರ್ಕಾರದ ರೀತಿನೀತಿಗಳನ್ನು ಯೋಗ್ಯ ರೀತಿಯಲ್ಲಿ ಸರ್ಕಾರಕ್ಕೆ ಸರಿಯಾಗಿ ತಿಳಿವಳಿಕೆ ಕೊಡತಕ್ಕಂಥವರಿಗೆ ಹೆಚ್ಚು ಸ್ಥಾನ, ಕಾಲಕೊಡ ಬೇಕು. ನಿಜವಾಗಿಯೂ ಮಲ್ಲಾರಾಧ್ಯರು ವಿರೋಧ ಪಕ್ಷದ ಒಂದು ಬೆಂಚಿನಲ್ಲಿ ಕುಳಿತಿರುವುದು ಅಭಿಮಾನ ವೆನಿಸುತ್ತದೆ. ನನಗೆ ಕೊಟ್ಟ ಕಾಲಾವಕಾಶದಲ್ಲಿ ನಾನು ಕೆಲವು ವಿಷಯಗಳನ್ನು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

(1) ಸಿವಿಲ್ ವರ್ಕ್ಸ್ ಶಾಖೆಯಿಂದ ಬಂದ ಆದಾಯ ಅಂದಾಜಿಗಿಂತಲೂ 84 ಲಕ್ಷ ರೂಪಾಯಿ ಕಡಮೆ ಆಗಿದೆ.

(2) ನೀರಾವರಿಗಾಗಿ 90 ಲಕ್ಷ ರೂಪಾಯಿ ಹೆಚ್ಚು ವೆಚ್ಚ ಬಂದಿದೆ.

(3) Annual Financial Statement P. 4. ಸಾರ್ವಜನಿಕ ಸಾಲ ಅಂದಾಜಿಗಿಂತಲೂ ಮೂರು ಕೋಟಿ ರೂಪಾಯಿ ಹೆಚ್ಚಾಗಿದೆ.

(4) ಸಾಲ ತಿರುಗಿ ಕೊಟ್ಟುದು ಅಂದಾಜಿ ಗಿಂತಲೂ ಎರಡು ಕೋಟಿ ರೂಪಾಯಿ ಕಡಮೆಯಾಗಿದೆ.

(5) ನೀರಾವರಿ ರಚನೆಗಳ ಬಂಡವಾಳದಮೇಲೆ ಕೊಟ್ಟ ಬಡ್ಡಿ ಹಣ ಅಂದಾಜಿಗಿಂತಲೂ 85 ಲಕ್ಷ ಹೆಚ್ಚು.

(6) ಉದ್ಯಮಗಳಿಂದ ಬಂದದ್ದು ಅಂದಾಜಿ ಗಿಂತಲೂ ಎರಡು ಕೋಟಿ ರೂಪಾಯಿ ಕಡಮೆ.

ಕೊನೆಯದಾಗಿ ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಕಾನೂನುಗಳ ವಿಚಾರ. ಹಿಂದೆ ಉಪಮಂತ್ರಿ ಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲ್‌ರವರು ಈ ವಿಷಯದಮೇಲೆ ಮಾತನಾಡಿದ್ದಾರೆ. ಪೋಲೀಸು ಕಾನೂನು ಹೈದರಾಬಾದಿನಲ್ಲಿ ವಿಚಿತ್ರವಾಗಿದೆ; ಉತ್ತರ ಕರ್ಣಾಟಕದಲ್ಲಿರುವ ಕಾನೂನೇ ಬೇರೆ; ಮಂಗಳೂರು ಕಡೆ ಪ್ರದೇಶಗಳ ಕಾನೂನೇ ಬೇರೆ. ಇದು ಯಾವುದೂ ಗೊತ್ತಾಗುವುದಿಲ್ಲ. ಹಳೆಯ ಮೈಸೂರಿ ನಲ್ಲಿ 1981ನೇ ಕಲಮ್ ಹಚ್ಚಿ ಬಿಟ್ಟು ಅರೆಸ್ಟ್ ಮಾಡಿ ಬಿಟ್ಟಿದ್ದೇವೆಂದು ಹೇಳುತ್ತಾರೆ. ಈ ರೀತಿಯಾಗಿ ಬೇರೆ ಬೇರೆ ಕಾನೂನುಗಳು ಒಂದೇ ರಾಜ್ಯದಲ್ಲಿರಕೂಡದು. ಕಾನೂನು ಕಟ್ಟಳೆಗಳನ್ನು ಸಮನ್ವಯಮಾಡಿ, ರಾಜ್ಯ ಕ್ಕೆಲ್ಲಾ ಅನ್ವಯಿಸುವ ರೀತಿಯಲ್ಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ತರಹ ಬೇರೆ ಬೇರೆ ಕಾನೂನು ಗಳಿರುವುದು ಅಸಮಂಜಸ.

ಹೀಗೆ ಈ ಪೋಲೀಸ್ ಕಾನೂನುಗಳು ಬಹಳ ವಿಚಿತ್ರವಾಗಿವೆ. ಇದು ಹೋಗಲಿ ಈಗ ಆ ಪೋಲೀಸರ ಡ್ರೆಸ್ ನೋಡಿದರೆ ಅದು ಇನ್ನೂ ವಿಚಿತ್ರವಾಗಿದೆ. ಈಗ ಆ ಪೋಲೀಸರು ಹಾಕುತ್ತಿರುವ ಟೊಪ್ಪಿ ಎಷ್ಟು ಉದ್ದವಾಗಿದೆಯೆಂದರೆ ಅದನ್ನು ಹೇಳಲು ಸಾಧ್ಯವಿಲ್ಲ. ಇಂಥ ಒಂದು ಉದ್ದದ ಟೊಪ್ಪಿಗೆ ಸರಿಯಾಗಿ ಅವರ ಕೊರಳಿಗೆ ಎತ್ತುಗಳ ಕೊರಳಿಗೆ ಹಾಕತಕ್ಕಂಥ ಒಂದು ಗೆಜ್ಜೆಸರವೇನಿದೆ ಅದೊಂದನ್ನು ಇವರಿಗೆ ಕಟ್ಟಿಬಿಟ್ಟರೆ ಅಲ್ಲಿಗೆ ಇವರ ವೇಷ ಪೂರ್ತಿ ಆದಂತೆಯೇ. ಆಗ ಇದು ಇನ್ನೂ ಬರೋಬರಿ ಇರುತ್ತಿತ್ತು. ಇವರು ಕಾಲಿಗೆ ಹಾಕತಕ್ಕ ಆ ಬೂಟ್ಸೋ ಹೇಳತೀರದು. ಬೊಂಬಾಯಿ ಪೋಲೀಸರಿಗೆ ಪಠಾಣ ಚಪ್ಪಲ್ ಎಂದು ಅಲ್ಲಿ ಆ ಸರ್ಕಾರದವರು ಕೊಟ್ಟಿದ್ದಾರೆ. ಅದನ್ನು ಹಾಕಿಕೊಂಡೇ ಅವರು ಕಳ್ಳರನ್ನು ಹಿಂಬಾಲಿಸಿ ಓಡಿಹೋಗಿ ಹಿಡಿಯು ಲಿಕ್ಕೂ ಸಹ ಅನುಕೂಲವಾಗಿದೆ. ಆದರೆ ನಮ್ಮ ಮೈಸೂರು ಪೋಲೀಸರಿಗೆ ಈಗ ಕೊಟ್ಟಿರತಕ್ಕ ಬೂಟ್ಸು ಗಳನ್ನು ಅವರು ಹಾಕಿಕೊಂಡು ಅವರು ಓಡಿಹೋಗ ತಕ್ಕ ಕಳ್ಳರನ್ನು ಹಿಡಿಯುವುದಿರಲಿ, ಈ ಮಾನ್ಯ ಸಭೆ ಯಲ್ಲಿರತಕ್ಕ ಶ್ರೀ ಭೀಮಪ್ಪನಾಯಕರಾಗಲಿ, ಶ್ರೀ ಜಿ. ಎಚ್. ಪುಟ್ಟಣ್ಣನವರಾಗಲಿ ಓಡಲಿಕ್ಕೆ ಹತ್ತಿದರೆ ಅವರನ್ನು ಸಹ ಓಡಿ ಹಿಡಿಯಲಿಕ್ಕೆ ಈ ಪೋಲೀಸರಿಗೆ ಆಗಲಿಕ್ಕಿಲ್ಲ. ಇವರಿಗೆ ಅಷ್ಟೂ ಕೂಡ ಶಕ್ತಿಯಿಲ್ಲ. ಇಂಥ ಭಾರವಾದ ಬೂಟ್ಸನ್ನು ಇವರಿಗೆ ಸಪ್ಲೈಮಾಡಿದರೆ ಅವುಗಳನ್ನು ಹಾಕಿಕೊಂಡು ಅವರು ಹೇಗೆ ಕೆಲಸ

ಮಾಡಲು ಸಾಧ್ಯವೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡುವುದು ಬೇಡವೇ ?

ಇನ್ನು ಪಾನನಿರೋಧದ ಸಲುವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿರುವುದರಿಂದ ನಾನು ಹೆಚ್ಚು ಹೇಳಲಿಕ್ಕೆ ಹೋಗದೆ ಕೇವಲ ಒಂದೆರಡು ಶಬ್ದಗಳನ್ನು ಮಾತ್ರ ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಸರ್ಕಾರದವರು ಮಾಡಿರತಕ್ಕ ಕಾನೂನುಗಳೆಲ್ಲ ನಿರುಪಯೋಗವಾಗಿವೆ. ಈಗ ನಮ್ಮ ಕಡೆ ಸದಾ ಈ ಪಾನದ ಕೆಲಸದಲ್ಲಿ ನಿರತರಾಗಿದ್ದ ಈಳಿಗರೆಂಬ ಒಂದು ಜನಾಂಗದವರಿದ್ದಾರೆ. ಈಗ ದೇಶದಲ್ಲಿ ಪಾನನಿರೋಧ ಜಾರಿಗೆ ಬಂದಿರತಕ್ಕ ಪ್ರದೇಶದಲ್ಲಿ ಈ ಜನಾಂಗದವರ ಬಗ್ಗೆ ಯಾವ ಒಂದು ವ್ಯವಸ್ಥೆಯನ್ನೂ ಸರ್ಕಾರ ಮಾಡಿಲ್ಲ. ಈಗ ಆ ಜನರೆಲ್ಲ ಏನು ಕೆಲಸ ಮಾಡಬೇಕೆಂಬುದೇ ಅವರಿಗೆ ತಿಳಿಯದಂತಾಗಿದೆ. ಈ ಹಿಂದೆ ಆ ರಾಮಮೂರ್ತಿಯವರ ರಿಪೋರ್ಟಿನಲ್ಲಿ ದೇಶದಲ್ಲಿ ಕುಡಿತ ಶೇಕಡ 6ರಷ್ಟು ಮಾತ್ರ ಇದೆಯೆಂದು ಹೇಳಿದ್ದಾರೆ. ಈಗ ಇದು ಇಮ್ಮಡಿಯಾಗಿದೆ. ಇತ್ತೀಚಿನ ಪರಿಸ್ಥಿತಿಯನ್ನು ನೋಡಿದರೆ ಇದು ಶೇಕಡ 18ಕ್ಕೆ ಬಂದಿದೆಯೆಂದು ಹೇಳಬಹುದು. ಹೀಗೆ ಕುಡಿತದ ಸಂಖ್ಯೆ ದೇಶದಲ್ಲಿ ದಿನದಿನಕ್ಕೂ ಜಾಸ್ತಿಯಾಗುತ್ತಿದೆ. ಈ ಪಾನನಿರೋಧವನ್ನು ಜಾರಿಗೆ ತರುವ ಮಾರ್ಗದಲ್ಲಿ ಸರ್ಕಾರದವರು ಕೈಗೊಂಡಿರತಕ್ಕ ಪದ್ಧತಿ ಹೇಗಿದೆಯೆಂದರೆ ಇಲಿಗಳನ್ನು ತಿನ್ನತಕ್ಕ ಬೆಕ್ಕಿಗೆ ಒಂದು ಖಾದಿ ಬಟ್ಟೆಯನ್ನು ಹಾಕಿ—'' ಎಲೈ ಬೆಕ್ಕೇ ನೀನೀಗ ಖಾದಿ ವಸ್ತ್ರಧಾರಿಯಾಗಿದ್ದೀಯೆ ; ನೀನಿನ್ನು ಇಲಿಗಳನ್ನು ತಿನ್ನಬಾರದು '' ಎಂದರೆ ಕೇವಲ ಖಾದಿ ವಸ್ತ್ರಧಾರಿಯಾದ ಮಾತ್ರಕ್ಕೇ ಆ ಬೆಕ್ಕಿಗೆ ಇಲಿಯನ್ನು ತಿನ್ನದೆ ಕೈಬಿಡಲು ಸಾಧ್ಯವಿದೆಯೇನು ? ಇದೇರೀತಿ ನೀವೀ ದಿವಸ ಪೋಲೀಸರಿಗೆ ಖಾದಿ ವಸ್ತ್ರಧಾರಿಗಳಿಗೆ ಪಾನನಿರೋಧವನ್ನು ಜಾರಿಗೆತರಬೇಕೆಂದರೆ ಅದು ಸಾಧ್ಯವಾದೀತೇನು? ಪೋಲೀಸರ ನಡತೆಯ ಬಗ್ಗೆ ಈಗಾಗಲೇ ಶ್ರೀ ಕೆ. ಟಿ. ಜಂಬಣ್ಣನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಇಲ್ಲಿಯ ಪೋಲೀಸರು 800, ಸಾವಿರ ರೂಪಾಯಿಗಳ ಸಂಭಾವನೆಯನ್ನು ತೆಗೆದುಕೊಂಡು ಚೆನ್ನಾಗಿ ಜೀರ್ಣಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಹಳೆಯ ಮೈಸೂರು ಪ್ರದೇಶದಲ್ಲೇ, ನಮ್ಮ ಕಡೆ ಜನ ಬಹಳ ಒರಟು —ಉಳ್ಳಿಗಡ್ಡೆ-ಬೆಳ್ಳುಳ್ಳಿ ತಿಂದು ಘುರ್ ಎಂದು ಶಬ್ದ ಮಾಡತಕ್ಕ ಜನರು. ನಿಮ್ಮ ಕಡೆ 'ಸಂಭಾವನೆ' ಎಂದು ಯಾವುದಕ್ಕೆ ಹೇಳುತ್ತೀರೋ ಅದನ್ನೇ ನಮ್ಮ ಕಡೆ 'ಲಂಚ' ಎಂದು ಹೇಳುತ್ತೇವೆ. ಆದ್ದರಿಂದ ನಮ್ಮ ಭಾಷೆ ಸ್ವಲ್ಪ ಒರಟು. ನಿಮ್ಮ ಭಾಷೆಯಲ್ಲಿ ಲಂಚದ ಶಬ್ದವನ್ನೇ ಬಹಳ ಗಂಭೀರವಾದ ಶೈಲಿಯಲ್ಲಿ '' ಸಂಭಾವನೆ '' ಎಂದು ಹೇಳುತ್ತಿದ್ದೀರಿ. ಹೀಗೆ ನೀವು ಗಂಭೀರವಾದ ಶೈಲಿಯಲ್ಲಿ ಏಕೆ ಹೇಳುತ್ತಿದ್ದೀರೆಂದರೆ ನಮ್ಮ ಹಾಗೆ ನೀವು ಉಳ್ಳಿಗಡ್ಡೆ—ಬೆಳ್ಳುಳ್ಳಿಗಳ ಖಾರ ತಿನ್ನುವುದಿಲ್ಲ. ನೀವೇನಿದ್ದರೂ ಚೊಕ್ಕವಾದ ಅನ್ನ-ಮಜ್ಜಿಗೆಯನ್ನು ಊಟಮಾಡುತ್ತೀರಿ. ಅದು ಬಹಳ ಚೆನ್ನಾಗಿ ಆರೋಗ್ಯವಾಗಿರುತ್ತದೆ. ನಿಮ್ಮ ತಿಂಡಿ ಹೇಗೆ ಬಹಳ ಆರೋಗ್ಯಕರವಾದದ್ದೂ—ಗಂಭೀರತೆರನಾದದ್ದೂ ಆಗಿದೆಯೋ ಹಾಗೆಯೇ ನಿಮ್ಮ ಕಡೆ ತೆಗೆದುಕೊಳ್ಳುವ ಲಂಚವ ಶಬ್ದಕ್ಕೂ ಗಂಭೀರವಾದ ಶೈಲಿ ಇದೆ. ಆ ಸಂಭಾವನೆಯಿಂದ ಪೋಲೀಸರ ಆರೋಗ್ಯವೂ ಕೂಡ ಬಹಳ ಚೆನ್ನಾಗಿಯೇ ಇದೆ! ಈಗಿನ ಸರ್ಕಾರ ಜಾರಿಗೆ ತಂದಿರತಕ್ಕ ಪ್ರೊಹಿಬಿಷನ್ ನೀತಿ ಇಷ್ಟು ಚೆನ್ನಾಗಿದೆ. ನಿಜವಾಗಿಯೂ ಇದು ಈ ಅಸೆಂಬ್ಲಿ ಸದಸ್ಯರ ಒಂದು ದುರ್ದೈವ! ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ—ಬಿಜಾಪುರ ಜಿಲ್ಲೆಯ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯೋ ಅಥವಾ ಕಾರ್ಯದರ್ಶಿಯೋ, ಅತನು ಡಿಸ್ಟ್ರಿಕ್ಟ್ ಪ್ರೊಹಿಬಿಷನ್ ಸಮಿತಿಯ ಸದಸ್ಯ ಬೇರೆ ಆಗಿದ್ದಾನೆ, ಅಂಥ ಮನುಷ್ಯನೇ ಈಗ ಅಲ್ಲಿ ಕುಡಿದು ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ತನಿಖೆ ನಡೆಯುತ್ತಿದೆ.

ಶ್ರೀ ಎಂ. ಕೆ. ಸುರಪುರ್ (ಇಂದಿ.—ಅವರು ಹೇಳತಕ್ಕದ್ದರಲ್ಲಿ ಏನೂ ಸತ್ಯಾಂಶವಿಲ್ಲ. ಅಲ್ಲಿ ಯಾರೂ ಹಾಗೆ ಕುಡಿದಿಲ್ಲ, ಸಿಕ್ಕಿಬಿದ್ದೂ ಇಲ್ಲ.

ಶ್ರೀ ಬಿ. ಕೆ. ನಾಗೂರ್.—ಸ್ವಾಮಿ, ಇದು ಬಹಳ ವ್ಯಸನಕರವಾದಂಥ ಸಂಗತಿ. ನಾನು ಇದನ್ನು ರುಜುಮಾತು ಮಾಡಿಕೊಡದಿದ್ದರೆ ನನ್ನ ಈ ಸದಸ್ಯತ್ವಕ್ಕೇ ರಾಜೀನಾಮೆ ಕೊಡುತ್ತೇನೆ. ನಾನು ರುಜುಮಾತು ಮಾಡಿಕೊಟ್ಟರೆ ಆ ಶ್ರೀ ಸುರ್‌ಪುರ್ ಏನು ಪಣ ತೊಡುತ್ತಾರೆ ಹೇಳಲಿ. ದೇಶದಲ್ಲಿ ಕಾಂಗ್ರೆಸ್ ಸಂಸ್ಥೆಯ ಹೆಸರನ್ನು ಹೇಳಿಕೊಂಡು, ಮಹಾತ್ಮ ಗಾಂಧಿಯವರ ಹೆಸರನ್ನು ಹೇಳಿಕೊಂಡು ಜನರು ಇಂಥ ಹೀನಕೃತ್ಯಗಳನ್ನು ಮಾಡಬಾರದು. ಆ ಕಾಂಗ್ರೆಸ್ ಸಂಸ್ಥೆಯ ಬಗ್ಗೆ ನನಗೂ ಕೂಡ ಬಹಳ ಅಭಿಮಾನವಿದೆ. ಸಂಸ್ಥೆಯ ಬಗ್ಗೆ ಅಭಿಮಾನವಿಲ್ಲದವರೆಲ್ಲ ಖಾದಿ ವಸ್ತ್ರಧಾರಿಗಳಾದ ಮಾತ್ರಕ್ಕೇ ಅವರಲ್ಲಿ ಅಭಿಮಾನ ಬಂದುಬಿಡುತ್ತದೆಯೆಂದು ಹೇಳಿದರೆ ಇದು ಎಂಥ ಅಪಹಾಸ್ಯದ ಮಾತು !

ಅ ಧ್ಯ ಕ್ಷ ರು.—ಬಜೆಟ್‌ಮೇಲಿನ ಚರ್ಚೆಗೂ ಕಾಂಗ್ರೆಸ್ ಸಂಸ್ಥೆಗೂ ಏನು ಸಂಬಂಧವಿದೆ ?

ಶ್ರೀ ಬಿ. ಕೆ. ನಾಗೂರ್.—ಇದೆ; ಹೇಳುತ್ತೇನೆ. ಕಾಂಗ್ರೆಸ್‌ನವರನ್ನೂ ಪೋಲೀಸರನ್ನೂ ದೇಶದಲ್ಲಿ ಪ್ರೊಹಿಬಿಷನ್ ಜಾರಿಗೆ ತರಲು ನೇಮಿಸಿರತಕ್ಕದ್ದು ಹೇಗಿದೆಯೆಂದರೆ, ಪತಿವ್ರತಾಧರ್ಮವನ್ನು ಪ್ರಚಾರ ಮಾಡಲಿಕ್ಕೆ ಪಾತರದಾಕೆಯನ್ನು ಪಗಾರ ಕೊಟ್ಟು ನೇಮಿಸಿದಂತೆ. ಇದು ಸರ್ವಥಾ ನ್ಯಾಯವಾದದ್ದಲ್ಲ. ಇದನ್ನು ತಾವು ವಿಚಾರಮಾಡಿ ನ್ಯೂನತೆಗಳನ್ನು ಸರಿಪಡಿಸಿ ಎಂದು ಹೇಳುತ್ತೇನೆ. ಕೊನೆಯದಾಗಿ ನಾನಿನ್ನು ಆಯುರ್ವೇದದ ಬಗ್ಗೆ ಒಂದು ಮಾತನ್ನಾಡಬೇಕಾಗಿದೆ.

ಈ ಆಯುರ್ವೇದ ವಿಚಾರವನ್ನು ನಾನು ಇದೇ ಸಭೆಯಲ್ಲಿ ಹೋದವರ್ಷ ಕೂಡ ಹೇಳಿದ್ದೇನೆ. ಆದರೆ ಇಲ್ಲಿಯವರೆಗೂ ಏನೂ ಕಾರ್ಯಕ್ರಮ ನಡೆದಂತೆ ಕಾಣುತ್ತಿಲ್ಲ. ಈಗಲಾದರೂ ಮಾನ್ಯ ಸರ್ಕಾರ ನಡೆಸತಕ್ಕ ಮಂತ್ರಿಗಳು ಈ ವಿಚಾರಕ್ಕೆ ಹೆಚ್ಚು ಪ್ರೋತ್ಸಾಹ ಹಾಗೂ ಗಮನಕೊಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲೇನೋ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪನೆಮಾಡಿದ್ದೀರಿ. ಅದಕ್ಕಾಗಿ ಮೊದಲು ತಮಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ನನಗೆ ಈ ಆಯುರ್ವೇದಲ್ಲಿ ಅನುಭವವಿರುವಂತೆ ಆಲೋಪೆಥಿಕ್ ಔಷಧಿಗಳ ಹಾಗೂ ಯೂನಾನಿ ಚಿಕಿತ್ಸೆಗಳ ಅನುಭವವಿದೆ. ನಮ್ಮ ದೇಶದಲ್ಲಿ ಈ ಆಯುರ್ವೇದ ವೈದ್ಯವೆಂಬುದು ಪೂರ್ವಕಾಲದಿಂದಲೂ ಬಂದಿರತಕ್ಕದ್ದಾಗಿದೆ. ಇದು ಕೇವಲ ಸಣ್ಣಪುಟ್ಟ ರೋಗಗಳಿಗೆ ಮಾತ್ರ ಉಪಯೋಗವುಳ್ಳದ್ದೆಂಬುದಾಗಿ ಕೆಲವರಿಗೆ ಭಾವನೆ ಇರುವಂತೆ ತೋರುತ್ತಿದೆ. ಆದರೆ ಇದು ಕೇವಲ ಸಣ್ಣಪುಟ್ಟ ರೋಗಗಳಿಗೆ ಮಾತ್ರವೇ ಅಲ್ಲದೆ ಅನೇಕ ದೊಡ ದೊಡ್ಡ ರೋಗಗಳನ್ನೂ ಕೂಡ ಇದರಿಂದ ವಾಸಿಮಾಡಲಿಕ್ಕೆ ಸಾಧ್ಯವಿದೆ. ಅಂಥ ಅಮೂಲ್ಯವಾದ ಬೇರು, ತೊಪ್ಪಲು ಮತ್ತು ಬಳ್ಳಿಗಳೂ ನಮ್ಮ ದೇಶದಲ್ಲಿವೆ. ನಮ್ಮ ಮಾನ್ಯ ಸಭಾಪತಿಗಳಿಗೂ ಕೂಡ ಈಗ ನಾನು ಹೇಳತಕ್ಕ ವಿಚಾರ ಗೊತ್ತಿರಬಹುದೆಂದು ನಂಬಿದ್ದೇನೆ. ಆ ವಿಚಾರ ಏನೆಂದರೆ

(ಶ್ರೀ ಬಿ. ಕೆ ನಾಗೂರ್)

ಬಾಗಿಲುಕೋಟೆ ಬಳಿ ಹಿರೇಕರ್‌ಗುಳಿಗಿ ಎಂದು ಒಂದು ಗ್ರಾಮವಿದೆ. ಅಲ್ಲಿ ಕೈಕಾಲು ಮುರಿದಿದ್ದರೆ ಅವರಿಗೆ ಒಂದು ತೊಪ್ಪಲಿನ ಗುಳಿಗೆಯನ್ನು ಹಾಲಿನಲ್ಲಿ ಹಾಕಿ ಕುಡಿಸಿದರೆ ಸಾಕು ಆ ಮುರಿದಿದ್ದ ಭಾಗವು ಸರಿ ಹೋಗುವುದಲ್ಲದೆ ಮತ್ತೆ ಬೇರೆ ಯಾವ ಭಾಗ ಮುರಿದರೂ ಮುರಿಯಬಹುದೇ ಶಿವಾಯಿ ಈ ಮೊದಲು ಮುರಿದಿದ್ದ ಭಾಗ ಮತ್ತೆ ಮುರಿಯುವಂತಿಲ್ಲ. ಅಂಥ ಗುಣಕಾರಿಯಾದ ಔಷಧಿಯನ್ನು ಅಲ್ಲಿ ಕೊಡುತ್ತಾರೆ. ಇಂಥ ಗಿಡ-ಬಳ್ಳಿ-ಬೇರುಗಳ ವಿಚಾರದಲ್ಲಿ ಸರ್ಕಾರದವರು ಸಂಶೋಧನೆಗಳನ್ನು ನಡೆಸಬೇಕಾದದ್ದು ಅತ್ಯಗತ್ಯ. ಈ ದಿವಸ ನಿಮೋನಿಯಾ ಕಾಯಿಲೆಗೆ ಅಲೋಪೆಥಿಕ್‌ನಲ್ಲಿ ಸ್ಟ್ರೆಪ್ಟೋಮೈಸಿನ್ ಇತ್ಯಾದಿ ಏನೇನೋ ಔಷಧಿಗಳಿವೆ. ಆದರೆ ನಮ್ಮ ಆಯುರ್ವೇದ ಪದ್ಧತಿ ಪ್ರಕಾರ ಈಶ್ವರಿಬೇರು ಎಂದು ಒಂದು ಬೇರಿದೆ. ಅದನ್ನು ನಿಮೋನಿಯಾ ಕಾಯಿಲೆಯಾಗಿರತಕ್ಕವರ ಕೊರಳಿಗೆ ಕಟ್ಟಿದರೆ ಸಾಕು. ಅವರು ಅದರ ವಾಸನೆಯನ್ನು ಉಸಿರಾಡುವುದರಿಂದಲೇ ಎದೆಯಲ್ಲಿ ಕಟ್ಟಿರತಕ್ಕ ಕಫವೆಲ್ಲ ಕರಗಿ ಈಚೆಗೆ ಬಂದುಬಿಡುತ್ತದೆ. ಕೆಲವರು ಹೀಗೆ ಹೇಳತಕ್ಕದ್ದನ್ನು ಟೀಕೆಮಾಡಬಹುದು. ಇದನ್ನು ನಾನು ಖಾತರಿಮಾಡಿ ತೋರಿಸಿಕೊಡಬಲ್ಲೆ. ನಿಮೋನಿಯಾಕ್ಕೆ ಇದು ಖಾತರಿಯಾದ ಔಷಧಿ. ಒಮ್ಮೆ ಉಪಯೋಗ ಮಾಡಿದರೆತಾನೆ ಅದರ ಗುಣ ಗೊತ್ತಾಗುವುದು? ಇದೇರೀತಿ ದಾಂತ್‌ಪಹಡ್ ಎಂಬ ಒಂದು ಬೇರಿದೆ. ಅದನ್ನು ಚೆನ್ನಾಗಿ ಬಾಯಲ್ಲಿ ಜಗಿದು ನಂತರ ಉಗುಳಿಬಿಟ್ಟರೆ ಬಾಯಲ್ಲಿರತಕ್ಕ ಹಲ್ಲುಗಳೊಂದೂ ಇರುವುದಿಲ್ಲ. ಎಲ್ಲ ಹಲ್ಲುಗಳೂ ಒಂದು ತೊಟ್ಟು ರಕ್ತ ಸಹಾ ಬಾರದಂತೆ ಉದುರಿಹೋಗುತ್ತವೆ. ತಾವುಗಳು ಇದನ್ನು ಪರೀಕ್ಷೆಮಾಡಿ ನೋಡಬಹುದು. ನಮ್ಮ ಮಂತ್ರಿಮಂಡಲದಲ್ಲಿರತಕ್ಕ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಮರಿಯಪ್ಪನವರು ಹಾಗೂ ಶ್ರೀ ಕಡಿದಾಳ್ ಮಂಜಪ್ಪನವರಿಬ್ಬರನ್ನು ಬಿಟ್ಟರೆ ಇನ್ನು ಈಗ ಹಾಲಿ ಇರತಕ್ಕ ಶ್ರೀಮಾನ್ ರಾಚಯ್ಯನವರು ಹಾಗೂ ನಮ್ಮ ಹೆಲ್ತ್ ಮಿನಿಸ್ಟರ್ ಹೆಗ್ಗಡೆಯವರು ಇವರುಗಳಿಗಿನ್ನೂ ಹಲ್ಲು ಬಿಗಿಯಾಗಿರುವುದರಿಂದ ಅವರು ಈ ಬೇರನ್ನು ತಿಂದು ಉಗುಳಿದರೆ ಆಗ ಅವರಿಗೇ ಇದರ ಬೆಲೆ ಗೊತ್ತಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ನಾವು ನಿಜವಾಗಿಯೂ ಅಂಥ ಕೆಲವು ಉತ್ತಮ ಔಷಧಿಗಳನ್ನು ತರಿಸಿಕೊಳ್ಳಬೇಕಾಗಿದೆ. ನೀವು ಸ್ವಲ್ಪ ನಿಧಾನವಾಗಿ ಹೇಳಿದರೆ ಅವುಗಳನ್ನು ಗುರ್ತು ಹಚ್ಚಿಕೊಳ್ಳಲು ಅಗುತ್ತದೆ. ಇಷ್ಟು ಅವಸರದಲ್ಲಿ ಹೇಳಿದರೆ ಏನು ಪ್ರಯೋಜನ?

ಶ್ರೀ ಬಿ. ಕೆ. ನಾಗೂರ್.—ನನಗೆ ಶ್ರೀಮಾನ್ ಕಂಠಿಯವರ ಗಂಟೆಯಮೇಲೆ ಬಹಳ ನಿಗಾ ಇದೆ. ಆದುದರಿಂದ ನನಗೆ ಕಾಲಾವಕಾಶವಿಲ್ಲ. ಇನ್ನು ಪೆರ್ಯಾಲಿಟಿಕ್ಸ್ ಕಾಯಿಲೆಗೆ—ಎಂದರೆ ಪಾರ್ಶ್ವವಾಯುವಿಗೆ ಇಂಗ್ಲಿಷ್ ಚಿಕಿತ್ಸೆ ಪ್ರಕಾರ 'B_{12}', 'ಬಿ' ಕಾಂಪ್ಲೆಕ್ಸ್ ಇತ್ಯಾದಿ ಏನೇನೋ ಔಷಧಿಗಳಿವೆ. ಆದರೆ ಇದಕ್ಕೆ ಈ ದಿವಸ ಆ ತಾಳಿಕೋಟೆ ಮತ್ತು ಸಿರ್ಸಿ ಈ ಎರಡು ಕಡೆಗಳಲ್ಲಿ ಒಂದು ತೊಪ್ಪಲನ್ನು ಕೊಡುತ್ತಾರೆ. ಆದರಿಂದ ಈ ರೋಗ ಖಾತರಿಯಾಗಿ ಗುಣವಾಗುತ್ತಿರುವುದು ಅನೇಕರಿಗೆ ಕಂಡುಬಂದಿದೆ. ಹೀಗೆ ಇನ್ನೂ ಅನೇಕ ರೋಗಗಳಿಗೆ ಗುಣಕಾರಿಯಾದಂಥ ಅನೇಕ ಗಿಡಮೂಲಿಕೆಗಳು ನಮ್ಮಲ್ಲಿ ಹೇರಳವಾಗಿರುತ್ತವೆ. ಇವುಗಳನ್ನು ಉಪಯೋಗಕ್ಕೆ ತಂದು ದೇಶದ ಜನರಿಗೆ ಅನುಕೂಲ ನೀಡಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಆದರೆ ಇಲ್ಲಿಯವರೆಗೂ ಸರ್ಕಾರದವರು ಈ ಆಯುರ್ವೇದ ಬಾಬಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಈಗಲಾದರೂ ಆರೋಗ್ಯ ಮಂತ್ರಿಗಳು ಈ ವಿಚಾರಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಹೇಳುತ್ತೇನೆ.

ಇನ್ನು ಬಸ್ಸುಗಳ ರಾಷ್ಟ್ರೀಕರಣ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ನಮ್ಮಲ್ಲಿ S.T. ಬಸ್ಸುಗಳೇನೋ ಓಡಾಡುತ್ತವೆ. ಅವುಗಳಲ್ಲಿ ಜನರಿಗೆ ಟಿಕೆಟ್‌ಗಳನ್ನು ಕೊಡುವಾಗ 49 ಜನರು ಕೂಡ್ರುವುದು, 19 ಜನರು ನಿಲ್ಲುವುದು; 18 ಜನರು ಅಂಡಿಗಾಲು ಹಚ್ಚಿ ಕೂಡ್ರುವುದು ಮತ್ತೆ ಕೆಲವರು ಮಲಗುವುದು ಎಂದು ಹೀಗೆಲ್ಲಾ ವಿಚಿತ್ರ ರೀತಿ ಇರುತ್ತದೆ. ಎಲ್ಲರೂ ಒಂದೇ ಸಮನಾಗಿ ರೊಕ್ಕ ಕೊಟ್ಟು ಬಸ್ಸಿನಲ್ಲಿ ಪ್ರಯಾಣಮಾಡುತ್ತಿರುವಾಗ ಕೆಲವರು ಕೂಡ್ರುವುದು, ಕೆಲವರು ನಿಲ್ಲುವುದು, ಕೆಲವರು ಮಲಗುವುದು ಈರೀತಿ ಮಾಡುತ್ತಿರುವುದು ಬಹಳ ಅಕ್ಷಮ್ಯಕರವಾದದ್ದು. ಇಂಥ ಪದ್ಧತಿ ಬೇಗ ತೊಲಗಬೇಕು. ನಿಮಗೆ ಅಂಥ ಕಡೆ ಸಾಕಷ್ಟು ಬಸ್ಸುಗಳನ್ನು ಹಾಕಲಿಕ್ಕೆ ಶಕ್ತಿಯಿಲ್ಲದಿದ್ದರೆ ಅಲ್ಲಿ ಖಾಸಗೀ ಜನರಿಗಾದರೂ ಆ ಉದ್ಯಮವನ್ನು ಬಿಟ್ಟುಕೊಡಿ. ಇಲ್ಲವಾದರೆ ಸಾಕಷ್ಟು ಬಸ್ಸುಗಳನ್ನು ಹಾಕಿ, ಜನರಿಗೆ ಅನುಕೂಲವನ್ನೊದಗಿಸಿಕೊಡ್ರಿ. ಇಲ್ಲಿ ಹಳೆಯ ಮೈಸೂರು ಪ್ರದೇಶದಲ್ಲಿ ಸರ್ಕಾರದವರು ಯಾರಿಗೆ ಬೇಕಾದರೂ ಖಾಸಗೀ ಜನಗಳಿಗೆ ಬಸ್ಸುಗಳನ್ನೋಡಿಸಲು ಲೈಸೆನ್ಸುಗಳನ್ನು ಕೊಡುತ್ತಿದ್ದಾರೆ. ಆದರೆ ನಮ್ಮ ಪ್ರಾಂತ್ಯದಲ್ಲಿ ಅದನ್ನೂ ಸಹ ತಾವು ಕೊಡುತ್ತಿಲ್ಲ. ಅಲ್ಲಿಯ ಪ್ರಾಯಾಣಿಕರ ತೊಂದರೆಯನ್ನು ಹೇಳತೀರದಾಗಿದೆ. ಒಂದಾವರ್ತಿ ನಾನೂ ಮತ್ತು ಇದೇ ಸಭೆಯ ಮತ್ತೊಬ್ಬ ಮಾನ್ಯ ಸದಸ್ಯರಾದ ಶ್ರೀ ಸುರಪುರ ಮಲ್ಲಪ್ಪನವರೂ S.T. ಬಸ್ಸಿನಲ್ಲಿ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ಬಸ್ಸೇ ಬಿದ್ದುಹೋಗಿತ್ತು. ಆದರೆ ಬಸ್ಸನ್ನು ಹತ್ತಿದ್ದಾಗ ನಮ್ಮ ಮಿತ್ರರಾದ ಶ್ರೀ ಮಲ್ಲಪ್ಪನವರು ನಮ್ಮ ಕೈಕಾಲುಗಳನ್ನೆಲ್ಲಾ ಹುಬ್ಬಳ್ಳಿಯಲ್ಲಿ ಕಟ್ಟಿಟ್ಟವರು ಮತ್ತೆ ಬಿಜಾಪುರಕ್ಕೆ ಬಂದಮೇಲೆ ಮತ್ತೆ ಅವರ ಕೈಕಾಲುಗಳನ್ನೆಲ್ಲಾ ಜೋಡಿಸಿಕೊಂಡು ಇಳಿಯಬೇಕಾಯಿತು. ನಿಮ್ಮ ಉದ್ದೇಶ ಬಹಳ ಒಳ್ಳೆಯದು. ಆದರೆ ಅದು ಪರಿಣಾಮಕಾರಿಯಾದ ರೀತಿಯಲ್ಲಿ ನಡೆಯದೆ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಅಂಥ ತೊಂದರೆಗಳು ಎಲ್ಲೂ ಆಗಲಿಕ್ಕೆ ತಾವು ಅವಕಾಶಕೊಡಬಾರದು. ಇಲ್ಲದಿದ್ದರೆ ನಿಮ್ಮ ಆ ಒಂದು ಘನೋದ್ದೇಶವೇನಿದೆ ಅದು ಸಫಲವಾದಂತಾಗುವುದಿಲ್ಲ.

ಇನ್ನು ನಮ್ಮ ಬಿಜಾಪುರದಲ್ಲಿ ಗುಂಡಾಗಳ ಹಾವಳಿಯನ್ನು ತಪ್ಪಿಸಲು ಕೆಲವು ಜನರಲ್ಲಿದ್ದ ಅಕ್ರಮ ಆಯುಧಗಳನ್ನು ಎಂದರೆ ದೇಶೀಯ ಪಿಸ್ತೂಲು, ಬಂದೂಕುಗಳನ್ನು ಅಲ್ಲಿಯ ಡಿ.ಎಸ್.ಪಿ. ವಶಪಡಿಸಿಕೊಂಡು ಅವುಗಳನ್ನು ಪೋಲೀಸ್ ಸ್ಟೇಷನ್ನಿನಲ್ಲಿಟ್ಟಿದ್ದಾಗ ನಮ್ಮ ಮುಖ್ಯ ಮಂತ್ರಿಗಳೂ ಕಣ್ಣಾರೆ ನೋಡಿದ್ದಾರೆ. ಈಗ ಅಲ್ಲಿ ಅಕ್ರಮವಾಗಿಟ್ಟುಕೊಂಡಿದ್ದ 60–70 ದೇಶೀಯ ಪಿಸ್ತೂಲು-ಬಂದೂಕಗಳನ್ನು ಪೋಲೀಸರು ಜಪ್ತಿಮಾಡಿ ವಶಪಡಿಸಿಕೊಂಡಿದ್ದಾರೆ. ಇದು ನಿಜವಾಗಿಯೂ ಒಂದು ಸ್ತೋತ್ರಾರ್ಹವಾದ ಕಾರ್ಯ. ಇದರಿಂದ ಅಲ್ಲಿಯ ಜನರಿಗೆ ಬಹಳ ಉಪಕಾರವಾಗಿದೆ. ಇಂಥ ದಕ್ಷರಾದ ಮತ್ತು ಸತ್ವವಂತರಾದ ಅಧಿಕಾರಿಗಳನ್ನೇ ಪ್ರತಿಯೊಂದು ಜಿಲ್ಲೆಯಲ್ಲೂ ನೋಡಿ ನೇಮಿಸಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಮುಗಿಸುವ ಕಾಲಕ್ಕೆ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಪ್ರವಾಸ ಕಾಲದಲ್ಲಿ ಯೋಗ್ಯ ರೀತಿಯಿಂದ ಅಡ್ಡಾಡಬೇಕು. ತಮ್ಮ ಭಾಗದಲ್ಲಿ ಕಾಂಗ್ರೆಸ್ ಪತಿಯಿಂದ ಮಾತನಾಡಿದಂಥ ಸಹೋದರಿ ಶ್ರೀಮತಿ ನಾಗರತ್ನಮ್ಮ ಹಿರೇಮಠ ಅವರ ಮಾತುಗಳನ್ನು ಕೇಳಿದೆ. ಮನೆಯ ದೀಪವೆಂದು ಮುತ್ತಿಡುವುದಕ್ಕಾಗುವುದಿಲ್ಲ. ಭಂಗಾರದ ಸೂಜಿ ಎಂದು ಕಣ್ಣಿಗೆ ಚುಚ್ಚಿಕೊಳ್ಳುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಆಳುವ ಪಕ್ಷದವರು ಗಮನಿಸಬೇಕು. ಯೋಗ್ಯ ಟೀಕೆಗಳನ್ನು ಸ್ವೀಕಾರ ಮಾಡಿ ಮುಂದೆ ಆರೀತಿ ಆಗದಂತೆ ನೋಡಿಕೊಳ್ಳಬೇಕು. ಅಂತೆಯೇ ವಿರೋಧಪಕ್ಷದ ಕಡೆಯಿಂದ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮೊನ್ನೆ ದಿವಸ ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರಿಗೆ ಉತ್ತರ ಕೊಡುವ ಕಾಲದಲ್ಲಿ ಒಳ್ಳೆಯ ರೀತಿಯಿಂದ ಉತ್ತರ ಕೊಟ್ಟದ್ದನ್ನೂ ನೋಡಿದರೆ, ಅಭಿಮಾನವೆನ್ನಿಸುತ್ತದೆ. ಮಂತ್ರಿಗಳು ಅದನ್ನು ಸ್ವೀಕಾರಮಾಡಿಕೊಳ್ಳಬೇಕು. ಹೆಣ್ಣುಮಕ್ಕಳಾದವರು ಆ ರೀತಿಯಾಗಿ ಮಾತನಾಡಿದ್ದಾರೆಂದು ತಿಳಿಯಬಾರದು. ಇತಿಹಾಸದ ಮಾತನಾಡುವಾಗ ಹಿಂದಿನ ಇತಿಹಾಸದ ನೆನಪು ಬರುತ್ತದೆ. ಇವರುಗಳು ಗಂಭೀರವಾಗಿ ನಿಂತು ಹೇಳಿದುದನ್ನು ನೋಡಿದರೆ ಕಿತ್ತೂರು ಚೆನ್ನಮ್ಮ ಮತ್ತು ಮಲ್ಲಮ್ಮ ಇತ್ಯಾದಿಯವರ ಹೆಸರು ಜ್ಞಾಪಕಕ್ಕೆ ಬರುತ್ತದೆ. ನಿಮ್ಮ ಕಡೆ ಒಬ್ಬ ನಾಗರತ್ನಮ್ಮ ಇದ್ದರೆ ನಮ್ಮ ಕಡೆಯೂ ಒಬ್ಬ ನಾಗರತ್ನಮ್ಮ ಇದ್ದಾರೆಂದು ಬಹಳ ಅಭಿಮಾನದಿಂದ ಹೇಳುತ್ತೇನೆ. ದೇಶದ ಹಿತದೃಷ್ಟಿಯಿಂದ ಎರಡೂ ಕಡೆ ಇರುವ ಕನ್ನಡಿಗರಿಗೂ ಉಪಯೋಗವಾಗುವ ರೀತಿಯಲ್ಲಿ ಕೆಲಸಮಾಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಪ್ರವಾಸಕ್ಕೆ ಬರುವ ಕಾಲದಲ್ಲಿ ಯೋಗ್ಯ ದೃಷ್ಟಿಯಿಂದ ಕೆಲಸಮಾಡಬೇಕು. ಎಲ್ಲ ಜನರೂ ಕುಳಿತುಕೊಂಡು ಒಂದು ರೆಸಲೂಷನ್ ಮಾಡಬೇಕೆಂದು ಯೋಚನೆಮಾಡಿದ್ದೇವೆ. ರಷ್ಯಾದವರು ಉಪಗ್ರಹವನ್ನು ಬಿಡುವಾಗ ಇಬ್ಬರನ್ನು ಕೂಡಿಸಿ ಕಳುಹಿಸುತ್ತೇವೆಂದು ಹೇಳುತ್ತಾರೆ. ಆದರೆ ನಾನು ಈ ಸಭೆಯಲ್ಲಿ ಕೇಳಿಕೊಳ್ಳುವುದೇನೆಂದರೆ ಆ ಇಬ್ಬರು ಬೇಡ, ನಮ್ಮ ರಾಜ್ಯದ ಹತ್ತು ಜನ ಮಂತ್ರಿಗಳನ್ನೂ ಆರು ಜನ ಉಪಮಂತ್ರಿಗಳನ್ನೂ ಕಳುಹಿಸೋಣವೆಂದು ಹೇಳುತ್ತೇನೆ. (*Laughter and interruptions*) ದಯವಿಟ್ಟು ಇನ್ನು ಮುಂದೆ ಮಾನ್ಯ ಮಂತ್ರಿಗಳು ಆ ಭಾಗದಲ್ಲಿ ಪ್ರವಾಸಮಾಡುವ ಕಾಲದಲ್ಲಿ ಎಂಥವರೇ ಇರಲಿ, ಪಿ.ಎಸ್.ಪಿ. ಇರಲಿ, ಕಮ್ಯೂನಿಸ್ಟ್ ಇರಲಿ, ಅವರ ಕಡೆಗೆ ಹೋಗಿ ಮಂತ್ರಿಗಳು ವ್ಯವಸ್ಥೆಮಾಡಬೇಕು. ಮಂತ್ರಿಗಳಾಗಿರುವವರು ಪ್ರವಾಸ ಕಾಲದಲ್ಲಿ ಎಂ.ಎಲ್.ಎ. ಆಗಿರುವಂಥ ನಮ್ಮ ಹತ್ತಿರ ಬಂದರೆ ನಾವೇನೂ ವಿಷಹಾಕುವುದಿಲ್ಲ. ಬೇರೆ ರೀತಿಯಿಂದ ವರ್ತಿಸುವುದಿಲ್ಲ. ನಮ್ಮ ಮಂತ್ರಿಗಳು ಬಂದಿದ್ದಾರೆನ್ನುವ ಅಭಿಮಾನದಿಂದ ನಿಮ್ಮನ್ನು ನಮ್ಮ ಮನೆಗೆ ಕರೆದುಕೊಂಡು ಹೋಗಿ ಚಹಾ ಕುಡಿದರೆ ಚಹಾ ಕೊಡುತ್ತೇವೆ, ಕಾಫಿ ಕುಡಿದರೆ ಕಾಫಿ ಕೊಡುತ್ತೇವೆ, ಹಾಲು ಕುಡಿದರೆ ಹಾಲು ಕೊಡುತ್ತೇವೆ. ಏನೂ ಬೇಡವೆನ್ನುವವರಿಗೆ ಹಾರಹಾಕಿ ಕಳುಹಿಸುತ್ತೇವೆ. ಹಾಗಿಲ್ಲದೆ black market ಮಾಡುವ ಜನರಲ್ಲಿ ಕಳ್ಳಪೇಟೆಯಲ್ಲಿ ಅಗ್ರಗಣ್ಯರಾಗಿರುವ ಜನರಲ್ಲಿ ಸೇರಿ ಅದರಿಂದ ದೇಶದ ಮತ್ತು ಕರ್ಣಾಟಕದ ಹೆಸರನ್ನು ಕೆಡಿಸಿಬಿಡುವುದು ಸಲ್ಲದೆಂದು ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ. ಎಂ.ಎಲ್.ಎ. ಗಳಿಗೆ ಅಪಮಾನವಾದರೆ ತಮಗೂ ಅಪಮಾನವೆಂದು ತಿಳಿಯಬೇಕೆಂದು ವಿನಯದಿಂದ ಕೈ ಜೋಡಿಸಿಕೊಂಡು ಹೇಳಿ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri M. RAMAPPA.—Sir, with the limited time I have at my disposal, while making a passing reference to certain matters, I would like to put forward some proposals which I made during the budget session in 1957. Whatever may be our political ideologies and differences, we can come to certain agreement if we study things in a spirit of honest enquiry. My first accusation against this Government is that this Government is notoriously lacking in this spirit of honest enquiry and it is for that reason that we cannot come to certain agreements. My first proposal was that the post of Police Inspector, especially in the rural areas, that is at the taluk headquarters, is absolutely unnecessary. It may be necessary only in cities and at district headquarters. We can very conveniently dispense with these posts throughout the State. The Inspectors of Police will take up investigation of heinous offences only and their work is only supervisory. We really cannot understand why Government has not taken this matter very seriously even though the previous Inspector General of Police has made a recommendation in this behalf. This is the first step I would like to suggest to the Government in the matter of economy.

Next, I really cannot understand as to why the Government has not progressed in the scheme of nationalisation of road transport. I cannot really understand the difficulty of the Government. I can only say that Government is unwilling to wound or affect the interests of some friends. This is a policy of willing to strike but afraid to wound, but I wonder whether they are really willing to strike even.

Sri T. MARIAPPA.—Willing to wound but afraid to strike.

Sri M. RAMAPPA.—It is only because of the influences of some friends and relatives of vested interests

(SRI M. RAMAPPA)

who have been helping this Government in their political and other activities, that they are unwilling to introduce or complete the scheme of nationalisation of road transport by which they can easily expect an income of Rs. 1½–2 crores.

The next point I would like to raise is whether they have thought of nationalising the road transport in the matter of goods traffic. What is the difficulty of the Government in this regard? Have they thought at any time as to the probable income the State may get by nationalisation of goods traffic.

Sri T. MARIAPPA.—Instead of income, we will lose, because that part of the Bombay goods traffic . . .

Mr. SPEAKER.—For want of time, let him not be disturbed.

Sri M. RAMAPPA.—I know that the Finance Minister is capable of meeting my argument. I do not want him to do it; I want him to honestly think about these things and put forward proposals before the Cabinet and Government of India and try and see what difficulties stand in the way of the proposals. I know that these things cannot be done overnight, but if they honestly try to do it, it is possible. That is what I say. My first accusation is that they do not honestly make an endeavour in these directions. By this I expect at least an additional income of about Rs. 5 crores. Because we are all aware of the tremendous profits now taken by this goods traffic by the owners of the lorries throughout the country. They have got an upper hand over the railways. I want the Government to take over this. That is the second proposal I put forward.

Regarding the Land Reforms Bill that the Government has placed before us, I will speak on some other occasion, but I would like to only say that this is not progressive as the Finance Minister said, while speaking on the recommendations of the Tenancy Agricultural Land Reforms Committee and the Central Planning Commission. It is highly reactionary and I beg to differ from the view of the Revenue Minister that it is very progressive. I will take some other occasion to convince the House and the Revenue Minister as to how this is reactionary and for that I will quote the exemptions that they have given for arecanut and coconut.

12 NOON.

In 1957 I made a personal appeal to Government regarding recruitment to posts for which the qualification prescribed is only S.S.L.C. These jobs do not really require any extraordinary merit or technical knowledge. So while making recruitment to these posts I requested Government to give first preference to those who are landless irrespective of merit. What is the difficulty of Government to give these jobs to the landless persons who have no other means of livelihood. I am stressing this point for the simple reason that in villages we see that the sons of well-to-do persons with sufficient resources and landed property, have a fancy for these jobs and they get them. It so happens that they somehow score a few marks more than the sons of the poor agriculturists. Even though the boys of the agriculturists have passed S.S.L.C., still they do not get the jobs because they have scored a few marks less than the sons of the rich people in the villages. Why should these marks be taken into consideration while giving these small jobs? I can understand if merit is taken into consideration for jobs requiring technical knowledge, but for these small jobs which do not require technical knowledge what is the difficulty of Government in formulating rules on the lines suggested by me? I request them to take up this matter very seriously because we have to be alert about the growing tendency of Communism in the minds of these your boys.

While introducing the Land Reforms Bill I expected some observations from the Revenue Minister. I thought he would make a reference to the introduction of ceiling in other sectors also. About two days back we heard

Pandit Nehru saying that we should be alert and should not allow concentration of economic and political power in the hands of a few. If they introduce land reforms then that will be a ceiling in the agricultural sector, but if they do not seriously consider the introduction of ceiling in other sectors also, then there will be concentration of power in the hands of merchants in the cities. I request Government to take a definite and bold stand and recommend to the Government of India and the Planning Commission that they should introduce ceiling in other sectors also. I know that the Revenue Minister has made a reference to this here and there, but he has not been bold enough.

Sri Kadidal MANJAPPA.—The Revenue Minister is powerless.

Sri M. RAMAPPA.—He should not be afraid of anybody. He should boldly make this suggestion to the Central Government. If he is meek and submissive, naturally we cannot expect them to accept our views.

There is a clamour all over the country that we in this secular State should not think of reservations for Backward Classes in educational institutions and Government services. We know that it is provided in the Preamble to our Constitution that equal opportunity must be provided to all to come to the level of others. I want to know whether Government have made an endeavour to provide equal opportunity to all the Backward Classes to come up to the level of the other intelligent classes. If they have really provided equal opportunities to all the Backard Classes, then certainly I would not be in favour of any reservation for Backward Classes. Since they have not done that and since we are labouring under these disadvantages, it is absolutely necessary that we have to safeguard the interests of the Backward Classes. I do not mean by Backward Classes backward communities. I only say Backward Classes in the sense that we have to take into consideration the difficulties of all people coming from the rural areas. I would be glad if the Government reserve 80 per cent of the seats in educational institutions and in services for those who come from rural areas without any consideration of caste, creed or sex. I do not mind even a Brahmin boy competing for a seat in this 80 per cent. It appears that at present the Government cares more for those who are residing in towns and cities. It should not be so. I am equally one with those who say that in a secular State we should not think in terms of communities and castes. The son of Sri Mallaradhya will in no way be inferior to the son of any man in a forward community. I am prepared to say that my son is prepared to compete with the son of any member of the forward community; but can this be said of the son of any poor agriculturist residing in villages? Can you expect him to compete with a person residing in cities and who is in a better position to compete having had facilities for good educa- tion and other things?

I will close my speech with a reference to Article 46 of the Constitution, which refers to education of Scheduled Castes. I am sorry that the Hon'ble Minister for Excise and Social Welfare is not present in the House, but I wish to point out that the Government have not taken steps in this direction. Though something has been done with respect to the implementation of the other Articles in respect of the Scheduled Castes, nothing has been done towards the fulfilment of this Article. I suggest that compulsory primary education may be introduced at least for the Scheduled Castes children, if that is not possible for all the children. I also wish to point out that Aritcle 46 is not like the other Directive Principles of State Policy. The Article begins with "The State shall promote...", whereas the other Articles only say 'the State shall endeavour'. Article 46 is mandatory and the State should do everything possible to introduce compulsory primary education to the Scheduled Castes children. Thank you.

*ಶ್ರೀ ಸಿ ಎಂ. ಪೂಣಚ್ಚ (ವೀರರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದೆ ಇಟ್ಟಿರತಕ್ಕಂತಹ ಆಯವ್ಯಯದ ಪಟ್ಟಿಯ ಮೇಲೆ ವಿಪುಲವಾದ ಚರ್ಚೆ ನಡೆದಿದೆ. ಅನೇಕ

(ಶ್ರೀ ಸಿ. ಎಂ. ಪೂಣಚ್ಚ)

ಸದಸ್ಯರು ಅವರಿಗೆ ತಮ್ಮ ಅಭಿನಂದನೆಗಳನ್ನು ಅರ್ಪಿಸುತ್ತ ಪುಷ್ಪಹಾರಗಳನ್ನೂ ಅರ್ಪಿಸಿದ್ದಾರೆ. ಕೆಲವರು ಉಗ್ರವಾದ ಟೀಕೆಗಳನ್ನೂ ಮಾಡಿದ್ದಾರೆ. ಒಟ್ಟಿನಲ್ಲಿ ಬಡ್ಜೆಟ್ಟು ಸ್ವಾಗತಾರ್ಹವಾಗಿದೆ. ಆದಾಯದ ಬಾಬುಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಂಡು ಖರ್ಚನ್ನು ಸರಿಯಾದ ರೀತಿಯಲ್ಲಿ ಮಾಡಿದ್ದೇ ಆದರೆ ಮುಂದಿನ ವರ್ಷ ರಾಜ್ಯದ ಆದಾಯ ಇನ್ನೂ ಹೆಚ್ಚುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

ಇನ್ನು ಆಯವ್ಯಯದ ಪಟ್ಟಿಯೊಡನೆ ಕೊಟ್ಟಿರುವ ಅಪ್ರೋಪ್ರಿಯೇಷನ್ ಆಫ್ ಅಕೌಂಟ್ಸ್ ಮತ್ತು ಇತರ ಅಕೌಂಟು ಕಮಿಟಿಗಳ ರಿಪೋರ್ಟುಗಳನ್ನು ನೋಡಿದರೆ ಯಾವ ಯಾವ ಬಾಬುಗಳಿಗಾಗಿ ಖರ್ಚನ್ನು ಮಾಡಬೇಕೆಂದು ಹಣವನ್ನು ಒದಗಿಸಿತ್ತೋ ಅದಕ್ಕೆ ತಕ್ಕಂತೆ ಖರ್ಚುಗಳನ್ನು ಮಾಡದೆ ಉಳಿವರಿಯಾಗಿ ಹಣವು ಬಂದಿದೆ ಎಂದು ಇದರಿಂದ ಕಂಡುಬರುತ್ತದೆ. ಇದು ಸಂತೋಷಕರವಾದ ಒಂದು ಸ್ಥಿತಿಯಲ್ಲ. ಇಂತಹ ಉಳಿವರಿಗೆ ಅವಕಾಶವಾಗದಂತೆ ಆಯವ್ಯಯದ ಪಟ್ಟಿಯಲ್ಲಿ ಖರ್ಚಿನ ಅಂದಾಜಿಗೆ ಪ್ರಾಶಸ್ತ್ಯವನ್ನು ಕೊಡುವ ವ್ಯವಸ್ಥೆ ಮಾಡಬೇಕು, ಹೆಚ್ಚಿನ ಗಮನವನ್ನು ಕೊಟ್ಟು ಅನಾವಶ್ಯಕವಾದ ಉಳಿವರಿಯು ವರ್ಷಂಪ್ರತಿ ಬರದಂತೆ ಆಯವ್ಯಯದ ಪಟ್ಟಿಯನ್ನು ತಯಾರಿಸಬೇಕೆಂದೂ ಸೂಚಿಸಿದ್ದಾರೆ. ಇಂತಹ ಒಂದು ಬಡ್ಜೆಟ್ಟನ್ನು ಮಂಡಿಸುವಾಗ ಪ್ರತಿ ವರ್ಷವೂ ಈ ರೀತಿಯಾಗಿ ಉಳಿವರಿ ಇರುವುದು ಕಂಡುಬರುತ್ತಿದೆ. ಮುಂದಿನ ವರ್ಷಕ್ಕಾದರೂ ಕೂಡ ತಾವು ಈಗ ನಿರೀಕ್ಷಿಸಿರುವಷ್ಟು 48 ಲಕ್ಷರೂಪಾಯಿಗಳ ಉಳಿತಾಯಕ್ಕೆ ಬದಲಾಗಿ ಇನ್ನೂ ಹೆಚ್ಚಿನ ಉಳಿತಾಯವನ್ನು ಪಡೆಯಲು ಅವಕಾಶವಿದೆ ಎನ್ನುವುದು ಇಲ್ಲಿರುವ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ ಮತ್ತು ಸಾಕಷ್ಟು ಹಿಂದಿನ ಅನುಭವದಿಂದಲೂ ಗೊತ್ತಾಗುತ್ತದೆ. ಈ ದೃಷ್ಟಿಯಿಂದ ಹೆಚ್ಚಿನ ತ್ವರಿತದಿಂದ ಕಾರ್ಯಾಚರಣೆ ಮಾಡುವುದು ಅವಶ್ಯಕ ಎನ್ನುವುದು ನನಗೆ ಕಂಡು ಬರುತ್ತದೆ.

ಶ್ರೀ ಟಿ. ಮರಿಯಪ್ಪ.—ಇನ್ನೂ ಡಿಫಿಸಿಟ್ಟು ಜಾಸ್ತಿಯಾಗುತ್ತದೆ ಎಂದು ಹೇಳುತ್ತಾರೆ.

ಶ್ರೀ ಸಿ. ಎಂ. ಪೂಣಚ್ಚ.—ಆ ರೀತಿಯಾದ ಟೀಕೆಯೂ ಬಂದಿದೆ ಮತ್ತು ಉಗ್ರವಾದ ಮತ್ತು ಉತ್ಪ್ರೇಕ್ಷೆಯಿಂದ ಕೂಡಿದ ಟೀಕೆಗಳನ್ನೂ ಮಾಡಿದ್ದಾರೆ. ಸಮಾಧಾನವಾಗಿ ಆಲೋಚನೆ ಮಾಡಿದರೆ ನಮ್ಮ ಸಂಸ್ಥಾನದ ಹಣಕಾಸಿನ ಸ್ಥಿತಿ ಆಶಾದಾಯಕವಾಗಿದೆ, ಸುಭದ್ರವಾಗಿದೆ ; ಮತ್ತು ಆ ವಿಷಯದಲ್ಲಿ ಅಧೈರ್ಯಪಡಬೇಕಾದ ಸಂಗತಿ ಕಾಣಿಸುವುದಿಲ್ಲ ಎಂದು ಖಂಡಿತವಾಗಿ ಹೇಳಬಹುದು.

ಇನ್ನೊಂದು ವಿಷಯದಲ್ಲಿ ನಮಗೆ ಬಹಳ ಸಂತೋಷವಾಗುತ್ತದೆ. ಪಂಚವಾರ್ಷಿಕ ಯೋಜನೆಯ ಖರ್ಚಿನ ಮಟ್ಟಕ್ಕೆ ಮುಂದಿನ ವರ್ಷಕ್ಕಾಗಿ ಕೇಂದ್ರ ಸರಕಾರದಿಂದ ಇಪ್ಪತ್ತೈದು ಕೋಟಿ ರೂಪಾಯಿಗಳಷ್ಟೆಂದು ನಿಗದಿಯಾಗಿತ್ತು ಮತ್ತು ಒಪ್ಪಿಗೆಯೂ ಕೂಡ ಬಂದಿತ್ತು. ಆದರೆ ಇತ್ತೀಚೆಗೆ ಇದನ್ನು ಮೂವತ್ತೈದು ಕೋಟಿ ರೂಪಾಯಿಗಳಷ್ಟಕ್ಕೆ ಏರಿಸಲಾಗಿದೆ. ಈ ವ್ಯವಸ್ಥೆಯಿಂದ ಕೂಡ ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆಗಳನ್ನು ಇನ್ನೂ ಹೆಚ್ಚಿನ ತ್ವರಿತದಿಂದ ಅಭಿವೃದ್ಧಿ ಮಾಡಬೇಕೆಂದು ಮಾಡಿರುವುದು ಶ್ಲಾಘನೀಯ. ಅದಕ್ಕಾಗಿ ಈ ಮೂವತ್ತೈದು ಕೋಟಿ ರೂಪಾಯಿಗಳಷ್ಟು ಖರ್ಚು ಆಗಬೇಕಾದ ವ್ಯವಸ್ಥೆಗಳನ್ನು ಈಗಿನಿಂದಲೇ ಸರ್ಕಾರ ಮಾಡಬೇಕು. ವರ್ಷದ ಆರಂಭದಲ್ಲಿಯೇ ಮಾಡಬೇಕಾದ ಖರ್ಚುಗಳನ್ನು ಫೆಬ್ರುವರಿ, ಮಾರ್ಚಿ ತಿಂಗಳುಗಳಿಗೆ ಮುಂಚೆಯೇ ಮಾಡಿ ಪ್ಲಾನಿನಂತೆ ನ್ಯಾಯವಾಗಿ ಆಗಬೇಕಾದ ಕೆಲಸಗಳು ಯಶಸ್ವಿಯಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕಾದುದು ಅಗತ್ಯ. ಆ ರೀತಿ ಮಾಡಬೇಕೆಂದು ಪುನಃ ಹೇಳುತ್ತೇನೆ.

ಇಂತಹ ಬಡ್ಜೆಟ್ಟಿನ ಅಧಿವೇಶನದಲ್ಲಿ ಸಾಧಾರಣವಾಗಿ ಟೀಕೆ ಮಾಡುವಾಗ ಕೆಲವೊಂದು ಅಧಿಕಾರಿಗಳನ್ನು ಟೀಕೆ ಮಾಡುವಂತಹ ಒಂದು ದುರದೃಷ್ಟಕರವಾದ ಪರಿಸ್ಥಿತಿ ಹೆಚ್ಚುತ್ತಿದೆ. ಇದನ್ನು ನಾನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಏತಕ್ಕೆಂದರೆ ಇಂತಹ ಒಂದು ಸಂದರ್ಭದಲ್ಲಿ ಈ ಸಭೆಯಲ್ಲಿ ಈ ರೀತಿಯ ಟೀಕೆಗಳನ್ನು ಮಾಡುವುದರಿಂದ ಇದರ ಪರಿಣಾಮ ಎಷ್ಟರ ಮಟ್ಟಿಗೆ ಆಗುತ್ತದೆ ಎನ್ನುವುದನ್ನು ಅರಿತುಕೊಳ್ಳಬೇಕು. ಹಾಗೆ ಸದಸ್ಯರು ಟೀಕೆ ಮಾಡುವುದಕ್ಕೆ ಸ್ವಾತಂತ್ರ್ಯವಿದೆ. ಆದರೆ ಅಭಿಪ್ರಾಯವನ್ನು ಎಷ್ಟು ಮಿತಿಯಿಂದ ಪ್ರಕಟಮಾಡಬೇಕು ಎನ್ನುವುದನ್ನು ತಿಳಿದು ಕೊಂಡು ಜವಾಬ್ದಾರಿಯಿಂದ ಟೀಕೆಗಳನ್ನು ಮಾಡಬೇಕು.

ಮಾನ್ಯ ಸದಸ್ಯರಾದ ಶ್ರೀ ಪುಟ್ಟರಾಮಯ್ಯನವರು ಪೋಲಿಸು ಇಲಾಖೆಯ ಆಡಳಿತ ವ್ಯವಸ್ಥೆ ಸರಿಯಾಗಿಲ್ಲ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಅಂತಹ ಆತಂಕಜನಕವಾಗಿರುವಂತಹ ಪರಿಸ್ಥಿತಿ ಏನಿಲ್ಲ. ಪೋಲೀಸರಿರುವುದು ದೇಶದಲ್ಲಿರುವ ಜನಗಳ ಪರಿಸ್ಥಿತಿಗಳನ್ನು ಉತ್ತಮಪಡಿಸುವುದಕ್ಕೆ ಮತ್ತು ಸಹಾಯಗಳನ್ನು ಮಾಡುವುದಕ್ಕಾಗಿ ಎಂದು ನನ್ನ ಅಭಿಪ್ರಾಯ. ಇಡೀ ಹಿಂದೂಸ್ಥಾನದಲ್ಲೇ ಹಿಂದಿನ ಜನಸಂಖ್ಯೆಯ ಆಧಾರದ ಮೇಲೆ ಯಾವ ಯಾವ ಪ್ರಾಂತದಲ್ಲಿ ಎಷ್ಟೆಷ್ಟು ಜನ ಪೋಲೀಸರು ಇರಬೇಕು ಎನ್ನುವ ಪಟ್ಟಿಯನ್ನು ತಯಾರಿಸಿದ್ದಾರೆ. ಅದರ ಪ್ರಕಾರ ನಮ್ಮ ಸಂಸ್ಥಾನದ ಜನಸಂಖ್ಯೆಯ ಆಧಾರದ ಮೇಲೆ ಪರ್‌ಕ್ಯಾಪಿಟಾ ಮೇಲೆ ಇಷ್ಟು ಖರ್ಚಾಗಬೇಕೆಂದು ಖರ್ಚುಮಾಡುವುದು ವಾಡಿಕೆಯಾಗಿದೆ.

Sri U. M. MADAPPA (Chamarajanagar).—May I know if it is calculated on the basis of offences committed ?

Sri T. MARIAPPA.—Even then, we stand very favourably by comparison.

ಶ್ರೀ ಸಿ. ಎಂ. ಪೂಣಚ್ಚ.—ತಮಗೆ ಬೇಕಾದರೆ ಅದರ ವಿಷಯಗಳನ್ನೆಲ್ಲ ಹೇಳುತ್ತೇನೆ. ಕೇಂದ್ರ ಸರ್ಕಾರದ ಹೋಮ್ ಮಿನಿಸ್ಟ್ರಿಯವರು ಎಲ್ಲಾ ಪ್ರಾಂತಗಳಲ್ಲಿರುವಂತೆ ಪೋಲೀಸ್ ಆಡಳಿತವನ್ನು ವಿಮರ್ಶೆಮಾಡಿ ರಿಪೋರ್ಟ್ ಕೊಡುತ್ತಾ ಇರುತ್ತಾರೆ. Every year they are giving a general review of the police administration. The latest report indicates that so far as Mysore State is concerned, we stand second in the whole of India amongst the Indian States. First comes Madras so far as detection, discipline, integrity, etc. are concerned.

Sri U. M. MADAPPA.—Therefore we can effect economy in that department.

ಶ್ರೀ ಸಿ. ಎಂ. ಪೂಣಚ್ಚ.—ಸುಮ್ಮನೆ ಹೇಳಬೇಕು ಎಂದರೆ ಬೇಕಾದಷ್ಟು ಹೇಳುತ್ತೇನೆ. ಅದರ ಪರಿಣಾಮ ಏನು ಎಂದು ವಿವೇಚನೆ ಇಲ್ಲದೆ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಮ್ಮ ಸಂಸ್ಥಾನದಲ್ಲಿರುವ ಪೋಲೀಸ್ ಅಷ್ಟರಮಟ್ಟಿಗೆ ಟೀಕೆಗೆ ಒಳಗಾಗುವ ಸ್ಥಿತಿ ಇಲ್ಲ. ಬಹಳ ದಕ್ಷತೆಯಿಂದ ಕೆಲಸ ನಡೆಯುತ್ತಿದೆ ಎನ್ನುವ ವಿಷಯ ನನ್ನ ಬಾಯಿಮಾತಲ್ಲ; ಇಡೀ ಹಿಂದೂಸ್ಥಾನದ ಎಲ್ಲಾ ಸಂಸ್ಥಾನಗಳಲ್ಲಿರುವ ಪೋಲೀಸ್ ಕಾರ್ಯಾಚರಣೆ ವಿಮರ್ಶೆಯಾಗಿರುವ ಆಧಾರದಮೇಲೆ ನೋಡಿದರೆ ವಕ್ತವಾಗುತ್ತದೆ ಮತ್ತು ನಗರಗಳ ಪೋಲೀಸ್ ಅಡ್ಮಿನಿಸ್ಟ್ರೇಷನ್ ಪರಿಶೀಲನೆ ಮಾಡಿದರೆ, ಬೆಂಗಳೂರು ಪ್ರಥಮಸ್ಥಾನ ಪಡೆದಿದೆ. ಎರಡನೆಯದು ಮದ್ರಾಸ್ ಸಿಟಿ. ಅದು ತಿಳಿದುಕೊಳ್ಳಬೇಕಾದಂಥ ಅಂಶ. ಅಂಥಾದ್ದನ್ನು ತಿಳಿದುಕೊಂಡು ನಾವು ವ್ಯಕ್ತಮಾಡುವಂಥ ಅಭಿಪ್ರಾಯಗಳನ್ನು ವ್ಯಕ್ತಮಾಡುವುದು ಸೂಕ್ತ ಎಂದು ಹೇಳುತ್ತೇನೆ. ಕೆಲವು ಇಲಾಖೆಗಳ ವಿಷಯದಲ್ಲಿ ಈಗಾಗಲೇ ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪುನರುಕ್ತಿಮಾಡುವುದಕ್ಕೆ ನಾನು ಉದ್ದೇಶ ಪಡುವುದಿಲ್ಲ. ರೆವಿನ್ಯೂ ಇಲಾಖೆಯ ವಿಷಯ ಒಂದನ್ನು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಅದು ಏನೆಂದರೆ, ರೆವಿನ್ಯೂ ಇಲಾಖೆಯಲ್ಲಿರುವ ರೆಕಾರ್ಡ್ ಆಫ್ ರೈಟ್ಸ್ ಸರಿಯಾದ ರೀತಿಯಲ್ಲಿ ಇಲ್ಲ. ಅದರಲ್ಲೂ ನಮ್ಮ ಹಳೆಯ ಮೈಸೂರು ಸಂಸ್ಥಾನಕ್ಕೆ ಒಳಪಟ್ಟ ಪ್ರದೇಶದಲ್ಲಿ ಇನ್ನೂ ಬಹಳ ಹೀನಸ್ಥಿತಿಯಲ್ಲಿವೆ. ಇದಕ್ಕೆ ಕಾರಣವೇನೆಂದರೆ ಆಜನ್ಮಸಿದ್ಧವಾದ ಶ್ಯಾನುಭೋಗರ ನೇಮಕದ ಪದ್ಧತಿ ಇದಕ್ಕೆ ಮುಖ್ಯ ಕಾರಣವಾಗಿದೆ. ಇದನ್ನು ಆದಷ್ಟು ಬೇಗನೆ ತೆಗೆದುಹಾಕಬೇಕಾದದ್ದು ಅನಿವಾರ್ಯ. ಈ ಸಂಬಂಧವಾಗಿ ಲ್ಯಾಂಡ್ ರಿಫಾರಮ್ ಬಿಲ್ ಇಟ್ಟಿದ್ದಾರೆ. ನಾಳೆ ಆ ಪದ್ಧತಿಯನ್ನು ಕಾರ್ಯಾಚರಣೆಗೆ ತರುವಂಥ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲೆ ಬರುತ್ತದೆ. ಆ ಪದ್ಧತಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸದೆ ಹೋದರೆ ಲ್ಯಾಂಡ್ ರಿಫಾರಮ್ಸ್ ಜಾರಿಗೆ ತರುವುದು ಅಸಾಧ್ಯ ಎನ್ನುವ ಪರಿಸ್ಥಿತಿಗೆ ಬರುತ್ತದೆ. ಈ ರೆಕಾರ್ಡ್ ಸರಿಯಾದ ರೀತಿಯಲ್ಲಿ ಇಲ್ಲ. ಅದನ್ನು ದುರಸ್ತುಮಾಡಿ, ಸರಿಯಾಗಿ ಆಧಾರ ಪೂರ್ವಕವಾಗಿ ಇಡಬೇಕಾದರೆ ಅದಕ್ಕೆ ಹೋಲ್‌ಟೈಮ್ ಪೇಯ್ಡ್ ಶ್ಯಾನುಭೋಗರನ್ನು ಮಾಡಿ, ಸರಿಯಾದ ಸರ್ಕಾರಿ ಉದ್ಯೋಗಸ್ಥನನ್ನಾಗಿ ಮಾಡುವ ವ್ಯವಸ್ಥೆಮಾಡುವುದು ಬಹಳ ಅವಶ್ಯಕವಾದ ವಿಷಯ. ಆದರಿಂದ ರೆವಿನ್ಯೂ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಈ ವಿಷಯದಲ್ಲಿ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ. ಸರ್ಕಾರದವರು ಅವರನ್ನು ತರಪೇತು ಮಾಡಬೇಕಾದರೆ ಅವರಿಗೆ ಸರ್ವೆ ಟ್ರೈನಿಂಗ್ ಆಗಬೇಕು. ಇಷ್ಟು ಜನರನ್ನು ರೆಕ್ರೂಟ್‌ಮಾಡುವುದು ಕಷ್ಟವಿದೆ. ಅಷ್ಟು ಸುಲಭದಲ್ಲಿ ಆಗುವುದಿಲ್ಲ. ಆದರೂ ಅದನ್ನು ಮಾಡಿಸಲೇ ಬೇಕು, ಅನಿವಾರ್ಯವಾದದ್ದು. ಆದ್ದರಿಂದ ಈ ವಿಷಯವನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ಸರ್ಕಾರಕ್ಕೆ ನಾನು ಅರಿಕೆಮಾಡಿಕೊಳ್ಳುತ್ತೇನೆ. ಇದೇ ರೀತಿ ಬೊಂಬಾಯಿ ಸಂಸ್ಥಾನದಲ್ಲಿಯೂ ಇತ್ತೀಚೆಗೆ ಮಾಡಿದ್ದಾರೆ. ಇದು ಸೌತ್ ಕೆನರಾದಲ್ಲಿ ಜಾರಿಯಲ್ಲಿದೆ. ಅಲ್ಲಿ ಅವರಿಗೆ ಟ್ರೈನಿಂಗ್ ಕೊಟ್ಟಿರುತ್ತಾರೆ. ಆದರೆ ಮೈಸೂರಿನಲ್ಲಿ ಆ ರೀತಿ ಯಾವುದೂ ಇಲ್ಲ. ಬಹಳ ತೊಂದರೆಯಾಗಿದೆ. ಸಾಮಾನ್ಯವಾಗಿ ನಮ್ಮಲ್ಲಿ ಆಗುವ ವ್ಯಾಜ್ಯ ಮತ್ತು ಪೋಲೀಸರಿಗೆ ಬರುವ ದೂರುಗಳು ಇವೇ ವಿಶೇಷವಾಗಿವೆ. ಏತಕ್ಕೆಂದರೆ ಸುಖೀ ರಾಜ್ಯದ ಕೆಲಸಕಾರ್ಯಗಳು ಒಂದೊಂದಾಗಿ ನಡೆಯುತ್ತಾ ಹೋದರೆ ಸರ್ಕಾರಕ್ಕೂ ಜನತೆಗೂ ಸಂಪರ್ಕ ಬಹಳ ಅನ್ಯೋನ್ಯವಾಗಿ ಬೆಳೆಯುತ್ತದೆ. ಹಿಂದೆ ಶಾಲೆ ತೆರೆದರೆ ಮೇಷ್ಟ್ರು ಊರಿನಲ್ಲಿ ಇದ್ದರೂ ಮಕ್ಕಳು ಬಾರದ ಪರಿಸ್ಥಿತಿ ಇತ್ತು. ಈಗ 100ಕ್ಕೆ ಹೆಚ್ಚಿಗೆ ಮಕ್ಕಳು ಬರುವ ಪರಿಸ್ಥಿತಿ ಉಂಟಾಗಿದೆ. ನಮ್ಮ ಜೀವನದ ಪ್ರತಿ ಅಂಶದ ಪರಿಸ್ಥಿತಿಯೂ ಕೂಡ ಬದಲಾಯಿಸುತ್ತಾ ಇದೆ. ಹಿಂದಿನ ಕಾಲದಲ್ಲಿ ಆಸ್ಪತ್ರೆಗೆ ಚಿಕಿತ್ಸೆಗೆ ಬರುವವರೇ ಇರಲಿಲ್ಲ. ಈಗ ಸಾವಿರ ಜನ ಬಂದರೂ ಚಿಕಿತ್ಸೆಮಾಡಬೇಕು ಎನ್ನುವ ಮನೋವೃತ್ತಿ ಬೆಳೆದು ಬಂದಿದೆ. ಹಿಂದಿನ ಕಾಲದಲ್ಲಿ ಪೋಲೀಸ್ ದಫೇದಾರ ಬಂದರೆ ಓಡಿ ಒಳಗೆ ಹೋಗುವ ಪರಿಸ್ಥಿತಿ ಇತ್ತು. ಈಗಿನ ಕಾಲದಲ್ಲಿ ಆಕಳು ದನ ಬಂದರೂ ಪೋಲೀಸರಿಗೆ ಹೋಗಿ ರಿಪೋರ್ಟ್ ಕೊಡುವ ಪರಿಸ್ಥಿತಿ ಬಂದಿದೆ. ಸರ್ಕಾರಕ್ಕೂ ಜನಗಳಿಗೂ ಇರುವ ವ್ಯವಹಾರಸಂಬಂಧ ದಿನೇ ದಿನೇ ಬಹಳ ತೀವ್ರವೇಗದಿಂದ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಪ್ರತಿಯೊಬ್ಬರೂ ಕೂಡ ಸರ್ಕಾರದ ಸಹಾಯವನ್ನು ನಿರೀಕ್ಷಿಸುವುದರಿಂದ ಇಲಾಖೆಗಳು ಬೆಳೆಯುವಂಥಾದ್ದು ಕೂಡ ಅವಶ್ಯವಾದಂಥ ವಿಷಯ. ಆ ದೃಷ್ಟಿಯಿಂದ ರೈತನ ಜನ ಜೀವನಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ರೆವಿನ್ಯೂ ಇಲಾಖೆ ಅತಿ ಮುಖ್ಯವಾಗಿರುವುದರಿಂದ ಈ ವಿಷಯವನ್ನು ತಾವು ಪರಿಶೀಲಿಸಿ ಇದಕ್ಕೆ ನ್ಯಾಯವಾದ ಕ್ರಮತೆಗೆದುಕೊಳ್ಳಬೇಕು ಎಂದು ಅರಿಕೆಮಾಡಿಕೊಳ್ಳುತ್ತೇನೆ. ಅದೇ ಪ್ರಕಾರ ಬೊಂಬಾಯಿ ಸಂಸ್ಥಾನಕ್ಕೆ ಸಂಬಂಧಪಟ್ಟ ಸಂಸ್ಥೆಗಳಲ್ಲಿ ಪೋಲೀಸ್ ಪಟೇಲರು ಇದ್ದಾರೆ. ಇದೇ ರೀತಿ ಕಾರ್ಯಕ್ರಮವನ್ನು ಕೈಗೊಂಡು ಅವರನ್ನೂ ಕೂಡ ರದ್ದುಗೊಳಿಸಬೇಕು. ಈ ಪೋಲೀಸ್ ಖಾತೆಯಲ್ಲಿ ನನ್ನ ಅನುಭವದಲ್ಲಿ ನೋಡಿದ ಹಾಗೆ ಅನೇಕ ದೊಡ್ಡ ದೊಡ್ಡ ಅಪಾದನೆಗಳಲ್ಲಿ ಮತ್ತು ಕೊಲೆ ಮುಂತಾದ ಕೇಸುಗಳಲ್ಲಿ ಪ್ರಥಮವಾಗಿ ಕೊಡುವ ರಿಪೋರ್ಟಿನ ಮೇಲೆ ಹೆಚ್ಚಿನ ಆಧಾರ ಇರುವ ಸಂದರ್ಭಗಳು ಇವೆ. ಅದರಲ್ಲಿ ನ್ಯಾಯವಾದ ಅಂಶಗಳು ಅಡಕವಾಗದೆ ಎಷ್ಟೋ ಕೇಸುಗಳು ವಿಚಾರಣೆಗೆ ಸರಿಯಾದ ರೀತಿಯಲ್ಲಿ ಬಾರದೆ ಅಪಾದಿತರು ತಪ್ಪಿಸಿಕೊಳ್ಳುವುದು ಸುಲಭವಾಗಿದೆ. ಇಂಥಾ ಕೇಸುಗಳಲ್ಲಿ ಸಬ್ ಇನ್ಸ್‌ಪೆಕ್ಟರ್ ರಿಪೋರ್ಟ್ ಕಳುಹಿಸುವ ಅಧಿಕಾರ ಕೊಡಬೇಕಾಗಿದೆ. ಈಗ ಸರಿಯಾಗಿ ವಿಚಾರಣೆ ಆಗುತ್ತಾ ಇಲ್ಲ. ತಾವು ನೋಡಬಹುದು. ಬೊಂಬಾಯಿ ಪ್ರದೇಶದಲ್ಲಿ ಕ್ರೈಮ್ಸ್ ಬಹಳ ಹೆಚ್ಚಿಗೆ ಆಗಲು ಪೋಲೀಸ್ ಪಟೇಲರು ಇರುವುದು ಒಂದು ಕಾರಣ ಎಂದು ಹೇಳಬಲ್ಲೆ. ಅದನ್ನು ರದ್ದುಗೊಳಿಸಿ ನ್ಯಾಯವಾದ ರೀತಿಯಲ್ಲಿ ಮುಂದುವರಿಸಬೇಕು ಎಂದು ಹೇಳುವುದು ನನ್ನ ಸಲಹೆ.

ನಮ್ಮ ಆದಾಯದ ಮಟ್ಟಿಗೆ ಹೇಳುವುದಾದರೆ ಅರಣ್ಯ ಇಲಾಖೆ ಒಂದು ದೊಡ್ಡ ಇಲಾಖೆ. ಇದರಿಂದ ಸಂಸ್ಥಾನಕ್ಕೆ 5½ ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತದೆ. 2½ ಕೋಟಿ ರೂಪಾಯಿಗಳಷ್ಟು ಖರ್ಚಿನ ಅಂಶ ಕಾಣುತ್ತದೆ. ಅದರಲ್ಲಿ ಒಂದು ವಿಷಯ ತಾವು ಸ್ವಲ್ಪ ಆಲೋಚನೆಮಾಡಬೇಕು. ಅರಣ್ಯ ಇಲಾಖೆಯಲ್ಲಿ ಸಮಗೆ ಸಾಕಷ್ಟು ಆಡಳಿತಕ್ಕೆ ಬೇಕಾದಂಥ ಸಿಬ್ಬಂದಿ ಸಹಾಯವಿದೆ. ಕಂಟ್ರಾಕ್ಟ್‌ದಾರರಿಗೆ ಅರಣ್ಯವನ್ನು ಪ್ರವೇಶಿಸಿ ಅಲ್ಲಿ ಅವರಿಗೆ ಬೇಕಾದಂಥ ಮರವಾಗಲಿ, ಬಿದಿರು ಆಗಲಿ, ಬೊಂಬು ಆಗಲಿ, ಕಟ್ಟಿಗೆ ಆಗಲಿ ಎತ್ತಲಿಕ್ಕೆ ಇರುವ ಪದ್ಧತಿಯನ್ನು ನಿಲ್ಲಿಸಬೇಕು. ಅದರಿಂದಲೇ ಒಂದು ಕೋಟಿ ರೂಪಾಯಿನ ಆದಾಯ ಹೆಚ್ಚಿಗೆ ಬರುತ್ತದೆ. ಈ ಬಡ್ಜೆಟ್ಟಿನಲ್ಲಿ ಫಾರೆಸ್ಟ್ ರೆವಿನ್ಯೂ ಮೂರು ಕೋಟಿ

(ಶ್ರೀ ಸಿ. ಎಂ. ಪೂಣಚ್ಚ)

ಆದರೆ ಕನ್‌ಸ್ಯೂಮರ್ಸ್ ಎತ್ತಬಹುದಾದಂಥ ರೈಟ್ಸ್ ಕೊಡುವುದರಲ್ಲಿ ಒಂದು ಕೋಟಿಯಷ್ಟು ಆದಾಯ ಬರುತ್ತದೆ. ಎಂದು ಧೈರ್ಯವಾಗಿ ಹೇಳುತ್ತೇನೆ. ಆದ್ದರಿಂದ ಕಂಟ್ರಾಕ್ಟ್ ಪದ್ಧತಿಯನ್ನು ನಿಲ್ಲಿಸಿದರೆ ಒಂದೆರಡು ಕೋಟಿ ಆದಾಯ ಹೆಚ್ಚಿಗೆ ಬರುತ್ತದೆ ಎಂದು ಹೇಳುವುದರಲ್ಲಿ ಸಂದೇಹವಿಲ್ಲ.

ಎರಡನೆಯದಾಗಿ ಬರೀ ಆದಾಯ ಹೆಚ್ಚಿಸುವ ವಿಚಾರ ಒಂದೇ ಅಲ್ಲ. ಹತ್ತು ಗಾಡಿ ಸೌದೆ ಅಥವಾ ಒಂದು ಲಾರಿ ಇದ್ದಿಲು ಸಂಗ್ರಹಿಸುವುದಕ್ಕೆ ಕಂಟ್ರಾಕ್ಟ್ ತೆಗೆದುಕೊಂಡ ಕಂಟ್ರಾಕ್ಟರು ಗೋಪ್ಯವಾಗಿ ಸಾಗಿಸುವಂಥ ವಿಷಯ ಇದೆ. ಅದರ ಬೆಲೆಯನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಆ ಪ್ರಕಾರ ಕಳವು ಆಗುತ್ತಿರುವ ಮಾಲನ್ನು ತಡೆಗಟ್ಟಿದರೆ ಸಾಕು. ಒಂದು ಕೋಟಿ ಆದಾಯ ಬರಲಿಲ್ಲ ಎಂದು ತಿಳಿದುಕೊಳ್ಳಲಿ. ಹತ್ತು ಕೋಟಿಯಷ್ಟು ಆದಾಯ ವನ್ನು ಉಳಿಸುತ್ತೇವೆಂಬ ಧೈರ್ಯವನ್ನು ಇಟ್ಟುಕೊಳ್ಳ ಬಹುದು. ಖಂಡಿತವಾಗಿ ಈ ಪದ್ಧತಿಯನ್ನು ನಿಲ್ಲಿಸಬೇಕು. ನಮ್ಮಲ್ಲಿ ಈಗ ಇರುವಂಥ ಆಫೀಸರುಗಳು, ಈಗ ಇರುವಂಥ ಸಿಬ್ಬಂದಿ ಈ ಇಲಾಖೆಗೆ ಸಾಕು. ಉದಾಹರಣೆಗೆ ಹೇಳುತ್ತೇನೆ. ಈಗ ಕೊಡಗು ಚಿಕ್ಕದು. ಆದರೂ ಕೂಡ ಅಲ್ಲಿ ಸಾಧಾರಣವಾಗಿ 75 ಲಕ್ಷ ರೂಪಾಯಿಗಳ ಅರಣ್ಯ ಉತ್ಪತ್ತಿ ಆ ಒಂದು ಜಿಲ್ಲೆಯಿಂದ ಇದೆ.

12-30 P.M.

ಎಪ್ಪತ್ತೈದು ಲಕ್ಷ ರೂಪಾಯಿಗಳ ಉತ್ಪತ್ತಿ ಬರುವಂಥ ಆ ಭಾಗದಲ್ಲಿ ಎಷ್ಟು ಸಿಬ್ಬಂದಿಯಿದೆ, ಎಷ್ಟು ಆಫೀಸರಿ ದ್ದಾರೆ ನೋಡಿ. ಈಗಿರುವಂಥ ಸಿಬ್ಬಂದಿ ಸರಿಯಾದ ಪ್ರಯಾಣದಲ್ಲಿಯೇ ನೋಡಿ. ಇದರ ಎರಡರಷ್ಟು ಸಿಬ್ಬಂದಿ ಬೇರೆಕಡೆಯಲ್ಲಿದೆ. ಈಗಿರತಕ್ಕ ಸಿಬ್ಬಂದಿಯನ್ನು ಅಲ್ಪ ಸ್ವಲ್ಪ ತಾವು ಹೆಚ್ಚಿಸಿಕೊಂಡಲ್ಲಿ, ಹಾಗೂ ಕೆಲವು ನೂತನವಾದ ಯಾಂತ್ರಿಕ ಉಪಕರಣಗಳನ್ನು ಉಪಯೋಗಿಸುವುದರಿಂದ ಉತ್ಪತ್ತಿಯನ್ನು ಏನೇನೂ ತೊಂದರೆಯಿಲ್ಲದೆ ಹೆಚ್ಚುಮಾಡಿಕೊಳ್ಳಬಹುದೆಂದು ಹೇಳುತ್ತೇನೆ.

ಇನ್ನು ಕಂಟ್ರಾಕ್ಟರುಗಳ ಮೂಲಕ ಕೆಲಸಮಾಡಿಸುತ್ತಿರುವುದು ತಮ್ಮಲ್ಲಿ ಬೇಕಾದಷ್ಟು ಉಪಕರಣಗಳಿವೆ, ಬೇಕಾದಷ್ಟು ಕೆಲಸಗಾರರಿದ್ದಾರೆ. ಫಾರೆಸ್ಟ್ ಲೇಬರರ್ಸ್ ಕೋ-ಆಪರೇಟಿವ್ ಯೂನಿಯರ್ಸ್ ಎಂಬ ಸಂಸ್ಥೆಗಳು ಬೊಂಬಾಯಿನಲ್ಲಿವೆಯೆಂದು ಕೇಳಿದ್ದೇನೆ. ಅದೇ ರೀತಿಯ ಸಂಸ್ಥೆಗಳನ್ನು ಇಲ್ಲಿಯೂ ಏರ್ಪಡಿಸಿ, ನೇರವಾಗಿ ಕಂಟ್ರಾಕ್ಟರುಗಳಿಂದ ಫಾರೆಸ್ಟ್ ರಿಸರ್ವ್‌ಗಳಲ್ಲಿ ಕೆಲಸಮಾಡಿಸುವುದನ್ನು ನಿಲ್ಲಿಸಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಮೂರನೆಯದಾಗಿ, ಕೈಗಾರಿಕಾ ಇಲಾಖೆಯ ವಿಚಾರವಾಗಿ ಮಾತನಾಡುವುದಾದರೆ, ಈಗಿರುವಂಥ ಕೈಗಾರಿಕೆಗಳು ಚೆನ್ನಾಗಿ ಕೆಲಸಮಾಡುತ್ತಿವೆ, ಪ್ರಗತಿದಾಯಕ ಪಥದಲ್ಲಿ ನಡೆಯುತ್ತಿವೆಯೆಂಬುದು ಒಂದು ಸಂತೋಷದ ವಿಷಯ. ಕೋಲಾರದ ಚಿನ್ನದ ಗಣಿಯ ಲೆಕ್ಕ ತೆಗೆದುಕೊಂಡರೆ ಹೆಚ್ಚುಕಡಮೆ 14 ಕೋಟಿ ರೂಪಾಯಿಗಳ ವರಮಾನಬರುತ್ತದೆ. ಇದಕ್ಕಿರುವ ಖರ್ಚು ತೆಗೆದರೂ ಒಂದೂವರೆ ಎರಡು ಕೋಟಿ ರೂಪಾಯಿಗಳಷ್ಟು ವರಮಾನ ಬರುತ್ತಿದೆಯೆಂದು ಕಾಣುತ್ತದೆ.

ಇತ್ತೀಚಿನ ಸರ್ಕಾರದ ಪ್ರಕಟಣೆಗನುಸಾರವಾಗಿ ಕೆಲವು ಕೈಗಾರಿಕೆಗಳನ್ನು ಕಾರ್ಪೊರೇಷನ್ನಾಗಿ ಮಾಡಬೇಕೆಂಬ ಅಭಿಪ್ರಾಯವಿದೆಯೆಂದು ಗೊತ್ತಾಗಿದೆ. ಈ ವಿಷಯದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ತಾವು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಮೈಸೂರು ಸಂಸ್ಥಾನದಲ್ಲಿ ಅದರಲ್ಲೂ ಹಳೆಯ ಮೈಸೂರು ಸಂಸ್ಥಾನದಲ್ಲಿ ಕೆಲವು ಕೈಗಾರಿಕೆಗಳನ್ನು ಬಹಳ ಮಮತೆಯಿಂದ ಬೆಳೆಸಿಕೊಂಡು ಬಂದಿದ್ದಾರೆನ್ನಬೇಕು. ಅವುಗಳಿಂದ ಸಂಸ್ಥಾನಕ್ಕೆ ಎಷ್ಟೋ ಮಟ್ಟಿಗೆ ಆರ್ಥಿಕ ಬೆಂಬಲ ದೊರೆತಿದೆ. ಅಂಥಾದ್ದನ್ನು ಈಗ ಇತರರಿಗೆ ವಹಿಸುವಲ್ಲಿ ಅತಿ ಜಾಗರೂಕತೆಯಿಂದ ತೀರ್ಮಾನ ಕೈಕೊಳ್ಳಬೇಕಾದದ್ದು ಅವಶ್ಯಕ. ಒಂದು ವೇಳೆ ಅಂಥ ತೀರ್ಮಾನವನ್ನು ಕೈಕೊಳ್ಳಬೇಕೆಂದರೆ ಆ ಪ್ರಶ್ನೆಯ ಸಂಬಂಧದಲ್ಲಿ ಈ ಸಭೆಯ ಅಭಿಪ್ರಾಯವನ್ನೂ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಏಕೆಂದರೆ, ಈಗ ಸಾಧಾರಣವಾಗಿ ಕೇಳಿಬರುತ್ತಿರುವ ಮಾತಿನ ಪ್ರಕಾರ ನೋಡಿದರಲ್ಲಿ ಭದ್ರಾವತಿ ಉಕ್ಕಿನ ಕಾರ್ಖಾನೆ ಮತ್ತು ರೋಡ್ ಟ್ರಾನ್ಸ್‌ಪೋರ್ಟ್ ಇವೆರಡನ್ನು ಕಾರ್ಪೊರೇಷನ್ನಾಗಿ ಪರಿವರ್ತಿಸಬೇಕೆಂದಿದ್ದಾರೆಂದು ತಿಳಿದುಬಂದಿದೆ. ಅಲ್ಲಿಗೆ ಸರ್ಕಾರದವರ ಆದಾಯಲ್ಲಿ ಒಂದು ಕೋಟಿ ರೂಪಾಯಿ ನಷ್ಟವಾಗುತ್ತದೆ. ನೇರವಾಗಿ ಒಂದು ಕೋಟಿ ರೂಪಾಯಿಯಾದರೂ ಕಡಮೆಯಾಗುತ್ತದೆನ್ನಬಹುದು. ಇದಲ್ಲದೆ, ಪರೋಕ್ಷವಾಗಿ ಸರ್ಕಾರದ ಹಣಕಾಸಿನ Ways and Means ಭದ್ರತೆಯ ದೃಷ್ಟಿಯಿಂದ ಇನ್ನೂ ಹೆಚ್ಚಿನ ನಷ್ಟವಾಗುತ್ತದೆ. ಅಲ್ಲದೆ, ಈಗ ನಿಮ್ಮಲ್ಲಿ ಡಿಪ್ರಿಸಿಯೇಷನ್ ಫಂಡು ಎಂಟು ಕೋಟಿ ರೂಪಾಯಿಗಳಿವೆ. ಈ ರೀತಿಯೇನಾದರೂ ತಾವು ತೀರ್ಮಾನ ತೆಗೆದುಕೊಂಡಲ್ಲಿ ಈ ಫಂಡಿನಲ್ಲಿಯೂ ಒಂದು ಅಂಶವನ್ನು ಕೊಡಬೇಕಾಗಿ ಬರುತ್ತದೆ. ಅಲ್ಲಿಗೆ ಒಟ್ಟಿನಲ್ಲಿ ಮೂರು ಕೋಟಿ ರೂಪಾಯಿಗಳ ನಷ್ಟವುಂಟಾಗುತ್ತದೆ. ಇದೆಲ್ಲಾ ತಮಗೂ ಚೆನ್ನಾಗಿ ಗೊತ್ತೇ ಇದೆ. ಅಲ್ಲದೆ, ಇದರಿಂದ ಆಗುವ ದೊಡ್ಡ ಪ್ರಯೋಜನವಾದರೂ ಏನೂ ಇಲ್ಲ. ಇಂಥ ಒಂದು ಕಾರ್ಪೊರೇಷನಿಗೆ ವಹಿಸುವುದರಿಂದ ಈ ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುತ್ತವೆಂದೂ ನಾನು ಹೇಳಲಾರೆ. ಸಂಸ್ಥಾನದ ಆರ್ಥಿಕ ಭದ್ರತೆಗೆ ಬೇರೆ ತೊಂದರೆ ಬರುತ್ತದೆ. ಈಗ ಅನೇಕ ಸದಸ್ಯರು ಪಾನನಿರೋಧವನ್ನು ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಘಟಕದಲ್ಲಿ ಕೂಡ ಇದು ಅಡಕವಾಗಿದೆ. ಪಾನನಿರೋಧವನ್ನು ಜಾರಿಗೆ ತರದೆ ಇದ್ದರೆ ಪ್ರತಿಯೊಬ್ಬ ನಾಗರಿಕನೂ ತಮ್ಮನ್ನು ಪ್ರಶ್ನಿಸುತ್ತಾನೆ, ಅದಕ್ಕೆ ಸಮಾಧಾನ ಹೇಳುವ ಜವಾಬ್ದಾರಿ ತಮ್ಮ ಮೇಲೆ ಬಿದ್ದಿದೆ. ಆದರೆ, ನಾಳೆ, ರೋಡ್ ಟ್ರಾನ್ಸ್‌ಪೋರ್ಟನ್ನು ಏಕೆ ಮಾಡಲಿಲ್ಲವೆಂದು ಕೇಳುವ ಪ್ರಮೇಯ ಜನತೆಯಲ್ಲಿಲ್ಲ. ಹೀಗಿರುವಾಗ ನೀವು ಇಂದು ಕಾರ್ಪೊರೇಷನ್‌ಗಳನ್ನು ಮಾಡಿಬಿಟ್ಟು ಮೂರು ಕೋಟಿ ರೂಪಾಯಿಗಳನ್ನು ಕಳೆದುಕೊಂಡರೆ, ಪ್ರೊಹಿಬಿಷನ್ ಜಾರಿಗೆ ತರುವ ಸಂದರ್ಭದಲ್ಲಿ ತಮಗೆ ಹಣಕಾಸಿನ ತೊಂದರೆ ತೀವ್ರವಾಗಿ ಬರುತ್ತದೆ, ತಲೆಯೆತ್ತದಂತಾಗುತ್ತದೆಂದು ನಾನು ಹೇಳುತ್ತೇನೆ. ಆದ್ದರಿಂದ ಈ ವಿಷಯದಲ್ಲಿ ಖಂಡಿತವಾಗಿ ಸಮ್ಮತಿಯನ್ನು ಕೊಡಕೂಡದೆಂದು ನಾನು ಒತ್ತಾಯಮಾಡ ಬಯಸುತ್ತೇನೆ. ಕೊಟ್ಟಲ್ಲಿ ಸರ್ಕಾರದ ಹಣಕಾಸಿನ ಭದ್ರತೆ ಕುಂಠಿತವಾಗುವುದಲ್ಲದೆ, ಸರ್ಕಾರದ ಡಿಪ್ರಿಸಿಯೇಷನ್ ಫಂಡಿನಲ್ಲಿಯೂ ಸ್ವಲ್ಪಭಾಗ ಕೊಡಬೇಕಾಗಿ ಬಂದು, ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲದೆ, ಇಲ್ಲದ complication ಗಳೂ ಕೂಡ ಬರುತ್ತವೆ. ರೋಡ್ ಟ್ರಾನ್ಸ್‌ಪೋರ್ಟ್ ತೆಗೆದುಕೊಂಡರೆ, ಅದರ written down value ಸೊನ್ನೆಯಾಗಿದೆ. ಹೀಗಿರುವಾಗ,

book value ಮೇಲೆ ಬಸ್ಸುಗಳನ್ನು ವಹಿಸುವುದು ಎಂದರೆ ಸರ್ಕಾರಕ್ಕೆ ಬಹಳ ನಷ್ಟಪಾಡಿಕೊಂಡಂತಾಗುತ್ತದೆ. ಕೆಲವು ಬಸ್ಸುಗಳು ಎಂಟು-ಹತ್ತು ವರ್ಷ ಕೆಲಸಮಾಡಿವೆ. ಹೊಸಬಸ್ಸುಗಳು ಎಂಟು ವರ್ಷಗಳು ಸರಿಯಾಗಿ ಕೆಲಸಮಾಡುತ್ತವೆ. ಆದ್ದರಿಂದ book value ಮೇಲೆ ಹೋಗುವುದು ಕಷ್ಟ. ಇದೇ ಪ್ರಕಾರ ಇನ್ನೂ ಅನೇಕ ಪ್ರಶ್ನೆಗಳಿವೆ. ಇವುಗಳನ್ನೆಲ್ಲಾ ತಾವು ಪರ್ಯಾಲೋಚನೆಮಾಡಿ, ಆಖೈರು ತೀರ್ಮಾ ತೆಗೆದುಕೊಳ್ಳುವುದಕ್ಕೆ ಮುಂಚೆ ಈ ಸಭೆಯ ಅಭಿಪ್ರಾಯವನ್ನೂ ಕೇಳುತ್ತೀರೆಂದು ನಾನು ನಂಬಿದ್ದೇನೆ.

ಇನ್ನು ಕೊನೆಯದಾಗಿ, ಹೆಚ್ಚಿಗೆ ಸಮಯ ತೆಗೆದುಕೊಳ್ಳದ ಒಂದೆರಡು ವಿಷಯಗಳನ್ನು ಹೇಳಿ ಮುಗಿಸುತ್ತೇನೆ. ಒಂದನೆಯದಾಗಿ, ನಮ್ಮ ಕಡೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿ ಷೆಡ್ಯೂಲ್ಡ್ ಟ್ರೈಬ್ ಗಳೆಂದಿವೆ. ಹರಿಜನರು ಮತ್ತು ಗಿರಿಜನರು ಎಂದು ಅವರನ್ನು ಕರೆಯುತ್ತೇವೆ. ಇವುಗಳ ಅಭಿವೃದ್ಧಿಗಾಗಿ ಅನೇಕಕರೀತಿಯಲ್ಲಿ ಸರ್ಕಾರದವರು ಬಡ್ಜೆಟ್ಟಿನಲ್ಲಿ ಅವಕಾಶ ಮಾಡಿರುವುದು ಸಂತೋಷದ ವಿಷಯ. ಆದರೆ, ಒಂದು ವಿಷಾದವೆಂದರೆ, ಗಿರಿಜನರಿಗೆ ಕೊಟ್ಟ ಹಣ ಅಷ್ಟಾಗಿ ಖರ್ಚಾಗುತ್ತಿಲ್ಲ. ಅವರ ಹಿತ, ಕ್ಷೇಮ ಚಿಂತನೆ ಸಾಕಾದಷ್ಟು ಆಗುತ್ತಿಲ್ಲ. ಆದ್ದರಿಂದ ಸ್ವಲ್ಪ ಮೆಹನತ್ತು ವಹಿಸಿ ಇವರಿಗಾಗಿ ಪ್ರತ್ಯೇಕ ವ್ಯವಸ್ಥೆಯೊಂದನ್ನು ಮಾಡಬೇಕೆಂದು ಹೇಳುತ್ತೇನೆ. ಗಿರಿಜನರ ಆರ್ಥಿಕಾಭಿವೃದ್ಧಿ ಅದರಲ್ಲೂ ಮಲೆನಾಡಿನಲ್ಲಿರತಕ್ಕವರ ಅಭಿವೃದ್ಧಿ ಸಾಧನೆಯ ಕಡೆಗೆ ಗಮನಕೊಡಬೇಕೆಂದೂ ಪ್ರತ್ಯೇಕವಾಗಿ ಒಂದಿಷ್ಟು ಮೊಬಲಗನ್ನು ನಿರಖುಮಾಡಬೇಕೆಂದೂ ನಾನು ಹೇಳುತ್ತೇನೆ.

ಕೊನೆಯದಾಗಿ, ನಮ್ಮ ಕೊಡಗಿನ ವಿಷಯ, ಎರಡೇ ಮಾತಿನಲ್ಲಿ ಹೇಳಿ ಮುಗಿಸುತ್ತೇನೆ. ಶ್ರೀ ವೀರೇಂದ್ರ ಪಾಟೀಲರು ಅವರ ಜಿಲ್ಲೆಯ ವಿಷಯ ಹೇಳುವಾಗ ಒಂದು ಮಾತು ಹೇಳಿದರು. ಅವರ ಭಾಗಕ್ಕೆ ಸರ್ಕಾರದ ವತಿಯಿಂದ ಹೋದ ಮಂತ್ರಿಗಳೆಲ್ಲಾ, ಈ ಭಾಗ ಎಷ್ಟು ಹಿಂದುಳಿದಿದೆ! ಇವರಿಗೆ ಎಷ್ಟು ತೊಂದರೆಯಿದೆ! ಎಂದು ಹೇಳುತ್ತಾ ಎಷ್ಟೋ ಕೆಲಸಗಳನ್ನು ಸಾರೋದ್ಧಾರವಾಗಿ ಮಾಡಬೇಕೆಂದು ಹೇಳುತ್ತಾರೆ; ಮನಮುಟ್ಟಿ ಮಾತನಾಡುತ್ತಾರೆ, ಆದರೆ, ಅಲ್ಲಿಂದ ಹೊರಕ್ಕೆಬಂದಮೇಲೆ, ಏನೊಂದೂ ಕೆಲಸ ಮಾಡಿಸುವುದಿಲ್ಲ. ಅದರ ಯೋಚನೆಯನ್ನೆಲ್ಲಾ ಅಲ್ಲಿಗೇ ಬಿಟ್ಟುಬಿಡುತ್ತಾರೆ ಎಂದು ಹೇಳಿದರು. ಬಹುಶಃ ನಮ್ಮ ಕಡೆ ಆಗುತ್ತಿರುವುದು ಕೇವಲ ತದ್ವಿರುದ್ಧ. ಮಂತ್ರಿಗಳು ಕೊಡಗಿಗೆ ಬಂದತಕ್ಷಣ, ನಿಸರ್ಗೋಪಾಸಕ ಸಾಹಿತಿಗಳ ಹಾಗೆ 'ಇಲ್ಲಿನ ಸೌಂದರ್ಯ, ಎಷ್ಟಿದೆ! ಜನರು ಎಷ್ಟು ಸುಂದರವಾಗಿದ್ದಾರೆ; ಸೃಷ್ಟಿಕರ್ತ ನಿಮ್ಮ ವಿಷಯದಲ್ಲಿ ದಯಾಮಯನಾಗಿದ್ದಾನೆ' ಎಂದೆಲ್ಲಾ ಹೇಳಿ ಬೇಕಾದಷ್ಟು ಸಾಹಿತ್ಯಭಾಷೆಯಲ್ಲಿ ಮಾತನಾಡಿ—ಅಷ್ಟೇ ಅಲ್ಲ, ನೀವು 50 ವರ್ಷ ಮುಂದುವರಿದಿದ್ದೀರಿ, ಇನ್ನು 50 ವರ್ಷಗಳತನಕ ಆಗಬೇಕಾದ್ದು ಏನೂ ಇಲ್ಲ ಎಂದು ಮಾತನಾಡುವುದನ್ನು ಕೇಳಿ ಕೇಳಿ ನಮಗೆ ಸುಸ್ತಾಗಿದೆ.

ಶ್ರೀ ಜಿ. ವೆಂಕಟೇಗೌಡ.—3¾ ಕೋಟಿ ರೂಪಾಯಿಗಳನ್ನು ಕೊಡಗಿಗೆ ಕೊಟ್ಟಿದ್ದಾರೆ!

ಶ್ರೀ ಸಿ. ಎಂ. ಪೂಣಚ್ಚ.—ಮಾಡಿರತಕ್ಕ ವ್ಯವಸ್ಥೆಯನ್ನೆಲ್ಲಾ ನೋಡಿದ್ದೇವೆ. ಎಷ್ಟು ವ್ಯವಸ್ಥೆ ಮಾಡಬೇಕೋ ಅಷ್ಟು ಮಾಡಿಲ್ಲ. ಕರ್ನಾಟಕ ಏಕೀಕರಣ—ನವಮೈಸೂರು ರಚನೆಯಾಗುವುದಕ್ಕೆ ಮುಂಚಿತವಾಗಿ ಈ ರಾಜ್ಯಕ್ಕೆ ಬೇಕಾದಂಥ ಎಲ್ಲ ಏರ್ಪಾಡುಗಳೂ ಏನೆಂಬುದು ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಅಂಗವಾಗಿ ತೀರ್ಮಾನವಾಗಿತ್ತು. ಕೊಡಗಿನ ಮಟ್ಟಿಗೆ ಹೇಳುವುದಾದರೆ 3¾ ಕೋಟಿ ರೂಪಾಯಿಗಳ ಖರ್ಚಿನ ಅಂದಾಜು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸಿದ್ಧವಾಗಿ, ಅದು ಒಪ್ಪಿಗೆಯಾಗಿ, ಅದನ್ನು ಮೈಸೂರು ರಾಜ್ಯದ ಪ್ಲಾನಿನ ಪ್ರೋಗ್ರಾಮಿನಲ್ಲಿ ಅಡಕಮಾಡಿ ಕೈಕೊಳ್ಳುವ ಆಶ್ವಾಸನೆ ಕೊಟ್ಟಿದ್ದರು. ಅದರಂತೆ ಈಗ ಎಲ್ಲವನ್ನೂ ಮಾಡಬೇಕಾಗಿದೆ. ಆದರೆ ಕಾರ್ಯಾಚರಣೆಯಲ್ಲಿ ಅಷ್ಟು ಖರ್ಚುಮಾಡಲಿಲ್ಲ. ಅದನ್ನು ಕಾರ್ಯಾಚರಣೆಗೆ ತರುತ್ತೇವೆಂದು. ಈಗಾಗಲೇ ಮೂರುವರ್ಷಗಳು ಕಳೆಯಿತು ಈ ಬಗ್ಗೆ ಒದಗಿಸಿರುವ 3¾ ಕೋಟಿ ರೂಪಾಯಿಗಳ ಪೈಕಿ ಎಷ್ಟು ಖರ್ಚಾಗಿದೆಯೆಂಬುದನ್ನು ತಿಳಿಯಲು ಅಪೇಕ್ಷೆ ಪಡುತ್ತೇನೆ. ಏಕೆಂದರೆ ಬಹಳಮಟ್ಟಿಗೆ ಕೆಲಸ ಕಾರ್ಯಗಳು ಹಿಂದುಳಿದಿವೆ. ಮಂತ್ರಿಗಳು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಕಡೆಗೆ ಎಷ್ಟು ಖರ್ಚಾಗಿದೆ, ನಮ್ಮ ಕಡೆಯಲ್ಲಿ ಯೋಜನಾ ಕೆಲಸಗಳು ಎಷ್ಟರಮಟ್ಟಿಗೆ ಕಾರ್ಯಗತವಾಗಿದೆ ಎಂಬುದನ್ನು ಪರಿಶೀಲಿಸಿ ನೋಡುವುದಾದರೆ ಶೋಚನೀಯವಾಗಿದೆ. ತಾವು ಸ್ವಲ್ಪ ಈ ವಿಷಯವನ್ನು ಸ್ಪಷ್ಟೀಕರಿಸಿ ಅದರ ಬಗ್ಗೆ ಮಾಹಿತಿ ಕೊಡಬೇಕು. ನಮ್ಮ ಕಡೆಯ ಜನಗಳಲ್ಲಿ ನೀವು ಒಳ್ಳೆಯ ಸ್ಥಿತಿಯಲ್ಲಿದ್ದೀರಿ, ನಿಮ್ಮ ಅಭಿವೃದ್ಧಿ ಬಹಳ ಚೆನ್ನಾಗಿದೆ, ಇನ್ನೇನು ನಿಮಗೆ ಆಗಬೇಕಾದುದಿಲ್ಲ ಎಂದು ಈಪ್ರಕಾರ ನಮ್ಮಲ್ಲಿಗೆ ಬಂದ ಮಂತ್ರಿಗಳು ಹೇಳುವುದನ್ನು ನೋಡಿ ನಮ್ಮ ಜನಗಳಿಗೆ ಒಂದು ರೀತಿಯಾಗಿ ಮನಸ್ಸಿನಲ್ಲಿ ಜಿಗುಪ್ಸೆ ಬರುತ್ತದೆ. ಆದ್ದರಿಂದ ಆ ರೀತಿ ಆಗದ ಹಾಗೆ ಮಂತ್ರಿಗಳು ನೋಡಬೇಕು.

ಶ್ರೀ ಟಿ. ಮರಿಯಪ್ಪ.—ಮಾನ್ಯ ಸದಸ್ಯರು ಈಲ್ ಆದರೆ ಒಂದುಮಾತು ಹೇಳುತ್ತೇನೆ. ಆ ಕಡೆಗೂ ಏನೇನು ಅಭಿವೃದ್ಧಿಯಾಗಬೇಕೋ ಎಲ್ಲಕ್ಕೂ ಗಮನ ಕೊಡುತ್ತಿದ್ದೇವೆ. ಅಲ್ಲಿಯೂ ಒಂದೇ ರೇಟ್ ಆಫ್ ಇನ್ ಕಂಟ್ಯಾಕ್ಸ್ ಜನರಿಂದ ಬರುತ್ತದೆ.

ಶ್ರೀ ಸಿ. ಎಂ. ಪೂಣಚ್ಚ.—ಅದನ್ನು ಬರೀ ಸಂಸ್ಥಾನದ ಒಟ್ಟು ಖಜಾನೆಯಿಂದ ಪ್ರತ್ಯೇಕವಾಗಿ ತೆಗೆದು ಖರ್ಚುಮಾಡುವ ಪ್ರಮೇಯವಿಲ್ಲ. ಎರಡು ಬಾಬುಗಳಿಂದ ಉತ್ಪತ್ತಿ ಬರುತ್ತದೆ, ಅರಣ್ಯ ಶಾಖೆಯಿಂದ 75 ಲಕ್ಷಬರುತ್ತದೆ. ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ನಿಂದ 80ಲಕ್ಷ ಬರುತ್ತದೆ. ಈ ದೃಷ್ಟಿಯಿಂದ ಆದಾಯ ಹೆಚ್ಚುಹೆಚ್ಚಾಗಿ ಬರುತ್ತಿರುವಾಗ ಇಂತಹ ಯೋಜನಾ ಕಾರ್ಯಕ್ರಮಗಳೆಲ್ಲವೂ ಯಶಸ್ವಿಯಾಗಿ, ತ್ವರಿತವಾಗಿ ನೆರವೇರುವಂತೆ ಸರ್ಕಾರದವರು ಇನ್ನೂ ಹೆಚ್ಚಿನಶ್ರದ್ಧೆ ವಹಿಸಬೇಕೆಂದು ಹೇಳಿ, ಈ ಸಮಯದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಎಚ್. ವೆಂಕಟರೆಡ್ಡಿ (ಗೋರಿಬಿದನೂರು).—ಸ್ವಾಮಿ, ಈಗ ನಮ್ಮ ಮುಂದೆ ಇಟ್ಟಿರುವ 1959-60 ನೆಯ ಇಸವಿಯ ಬಡ್ಜೆಟ್ಟನ್ನು ವಿರೋಧಿಸುತ್ತಾ ನಾಲ್ಕಾರು ಮಾತುಗಳನ್ನು ಆಡಬೇಕೆಂದು ಇಚ್ಛೆಪಡುತ್ತೇನೆ. ಏಕೆ ವಿರೋಧ ಮಾಡುತ್ತೇನೆಂದರೆ ಮೊಟ್ಟಮೊದಲನೆಯದಾಗಿ ನಮ್ಮ ಮಂತ್ರಿಗಳು ಅನೇಕ ಕೆಲಸಕಾರ್ಯಗಳನ್ನು ಈಚೆ ಗೊತ್ತಾಗುವಂತೆ ಮಾಡುತ್ತಾರೋ ಅಥವಾ ಒಳಗೇ ಒಳಗೇ ಮಾಡುತ್ತಾರೋ ಏನೋ ತಿಳಿಯಲಿಲ್ಲ. ಅವರು ಕೊಟ್ಟಿರುವ ಪಟ್ಟಿಯಿಂದ ದೇಶದಲ್ಲಿ ನಡೆಯುವ ಕೆಲಸಕಾರ್ಯಗಳು ಅಷ್ಟಾಗಿ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಒಂದು ಉದಾಹರಣೆ ಹೇಳುವುದಾದರೆ, ನಾನು ಈ ಸಭೆಗೆ ಬಂದಾಗಿನಿಂದಲೂ ನೋಡು

(ಶ್ರೀ ಕೆ. ಎಚ್. ವೆಂಕಟರೆಡ್ಡಿ)

ತ್ತಿದ್ದೇನೆ, ಪಟ್ಟಿಯಲ್ಲಿ ಪ್ರತಿವರ್ಷವೂ ಹಣವನ್ನೊದಗಿಸುತ್ತಾರೆ. ಮೂರು ಕಾಸು ಕೂಡ ಖರ್ಚಾಗಿರುವುದಿಲ್ಲ. ವಿರೋಧ ಪಕ್ಷದವರು ಇರತಕ್ಕ ತಾಲ್ಲೂಕುಗಳ ಬಗ್ಗೆ ಉತ್ತರಕೊಡುವಾಗ, ಅಲ್ಲಿ ಹಾಗೆ ಮಾಡಿದ್ದೇವೆ, ಇಲ್ಲಿ ಹೀಗೆ ಮಾಡಿದ್ದೇವೆ ಎಂದು ಬಾಯಲ್ಲಿ ಹೇಳಿಬಿಡುತ್ತಾರೆ. ನಮ್ಮ ತಾಲ್ಲೂಕಿನಲ್ಲಿ ಹೋದ ವರುಷ ಎಷ್ಟು ಹಣವನ್ನು ಒದಗಿಸಿದ್ದರೋ ಈ ವರ್ಷವೂ ಅಷ್ಟೇ ಹಣವನ್ನೊಗಿಸಿದ್ದಾರೆ. ಪೂರ್ತಿ ಹಣ ಖರ್ಚಾಗುವುದೆಲ್ಲಾ ಮಂತ್ರಿಗಳು ವಾಸಮಾಡುವ ತಾಲ್ಲೂಕುಗಳಲ್ಲಿ ಮಾತ್ರ. ಆದರೆ ವಿರೋಧಪಕ್ಷದ ಸದಸ್ಯರು ವಾಸ ಮಾಡುವ ಕಡೆಗಳಲ್ಲಿ ಆ ಹಣವನ್ನು ಮಿಗಿಸುತ್ತಾರೆ. ಈ ವರ್ಷ ಹರಿಜನರಿಗೆ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹೋದವರ್ಷಕ್ಕಿಂತಲೂ ಜಾಸ್ತಿ ಕೊಟ್ಟಿದ್ದಾರೆ. ಆದರೆ ಆ ರೀತಿ ಕೊಟ್ಟಿರುವ ದುಡ್ಡು ಸರಿಯಾಗಿ ವಿನಿಯೋಗವಾಗುತ್ತಿಲ್ಲ. ಅದು ಕಾಲಕ್ಕೆ ಸರಿಯಾಗಿ ಹರಿಜನರ ಕೈ ಸೇರುತ್ತಿಲ್ಲ. ಇನ್ನು ಕಮಿಟಿಗಳೆಂದು ಬೇರೆ ಮಾಡಿಕೊಂಡಿದ್ದಾರೆ. ಈ ಕಮಿಟಿಗಳಲ್ಲಿ ಏನುಮಾಡಿದ್ದಾರೆಂದರೆ, ತಾಲ್ಲೂಕಿನಿಂದ ತಾಲ್ಲೂಕಿಗೆ ಬರೀ ಕಾಂಗ್ರೆಸ್ನವರನ್ನೇ ಹಾಕಿದ್ದಾರೆ. ಒಬ್ಬರಿಬ್ಬರನ್ನೇನೋ ಅಲ್ಲಿ ಬೇರೆ ಪಕ್ಷದವರನ್ನು ಹಾಕಿದ್ದಾರೆ. ತಾಲ್ಲೂಕಿನಲ್ಲಿ ಕಾಂಗೆಸ್ಸಿನವರು ಯಾರು ಯಾರು ಎಂಬುದನ್ನು ಮೊದಲೇ ತಿಳಿದುಕೊಂಡು ಮಂತ್ರಿಗಳು ಕಾಂಗ್ರೆಸ್ಸಿನವರನ್ನೇ ಆ ಕಮಿಟಿಗಳಲ್ಲಿ ಹಾಕುತ್ತಾರೆ. ಅವರು ಏನು ಮಾಡುತ್ತಾರೆಂದರೆ ಕುಂಭಕೋಣಂ ಮಾಡುತ್ತಾರೆ. ಅದುಎಲ್ಲರಿಗೂ ಗೊತ್ತಿದೆ.

Sri T. MARIAPPA.—Very unfair.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕುಂಭಕೋಣಂ ಎಂದರೆ ಏನು ?

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಒಳ್ಳೆಯ ಪಕ್ಕಾ ಕೆಲಸ ಎಂದು.

Sri K. PUTTASWAMY (Mysore).—I rise to a point of order. My friend used the word "Kumbakonam" and "Kumbakonam" as ordinarily understood is unparliamentary.

Mr. SPEAKER.—I understand that "Kumbakonam" has been held as parliamentary in Andhra Pradesh and even in Madras. Then let us take it that it is not unparliamentary.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಸ್ವಾಮಿ, ಇನ್ನು ಮುಂದೆ ಹೇಳುತ್ತಾ ಹೆಲ್ತ್ ವಿಚಾರ ತೆಗೆದುಕೊಂಡರೆ, ಹಳ್ಳಿಗಳ ವಿಚಾರ ಹಾಗಿರಲಿ, ಬೆಂಗಳೂರು ಪಟ್ಟಣದಲ್ಲಿರುವ ಆಸ್ಪತ್ರೆಗಳ ವಿಚಾರದಲ್ಲಿ ಒಂದು ಸೂಚನೆಕೊಡುತ್ತೇನೆ. ದಯವಿಟ್ಟು ಸರ್ಕಾರಿ ಕಾರಿನಲ್ಲಿ ಹೋಗದೆ ಯಾವಾಗಲಾದರೂ ಮಂತ್ರಿಗಳು ಗಾಂಧಿಟೋಪಿ ಇಟ್ಟುಕೊಂಡು ಒಂದು ಧೋತಿ ಉಟ್ಟುಕೊಂಡು ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿಬಂದರೆ, ಆ ಆಸ್ಪತ್ರೆಯ ಸ್ಥಿತಿಗತಿಗಳು ಹೇಗೆ ನಡೆಯುತ್ತಿವೆ ಎಂಬುದು ಗೊತ್ತಾಗುತ್ತದೆ. ಸ್ಟೇಟ್ ಕಾರಿನಲ್ಲಿ ಯಾರಾದರೂ ದೊಡ್ಡ ಮನುಷ್ಯರು ಬಂದರೆ ಡಾಕ್ಟರುಗಳು ಕೂಡಲೆ ಬಂದು ಹೆಚ್ಚಿಗೆ ಗೌರವವನ್ನು ತೋರಿಸುತ್ತಾರೆ. ಆಗ ಅವರು ದೇಶದಲ್ಲೆಲ್ಲಾ ಎಲ್ಲರಿಗೂ ಇದೇರೀತಿ ಮನ್ನಣೆಯನ್ನು ಡಾಕ್ಟರುಗಳು ತೋರಿಸುತ್ತಾರೆಂದು ವಾಪಸ್ಸು ಬಂದುಬಿಡುತ್ತಾರೆ. ಆದ್ದರಿಂದ ತಾವು ಮಂತ್ರಿಗಳು ಎಂಬುದಾಗಿ ಕಾಣಿಸಿಕೊಳ್ಳದೆ ಆಸ್ಪತ್ರೆಗಳಿಗೆ ಹೋಗಬೇಕು. ಅಲ್ಲಿ ಯಾವ ರೀತಿಯಲ್ಲಿ ರಾತ್ರಿ 8-9 ಗಂಟೆಗೆ ಕುಡಿಯುವವರು ಮತ್ತು ಆಸ್ಪತ್ರೆಯಲ್ಲಿ ಕೆಲಸಮಾಡುವವರು ಆಸ್ಪತ್ರೆಯ ಕಾಂಪೌಂಡಿನಲ್ಲಿ ಸೇರಿರುತ್ತಾರೆಂಬುದನ್ನು ನೋಡಬಹುದು. ನಾನು ನಾಲ್ಕು ದಿವಸಗಳು ಆಸ್ಪತ್ರೆಯಲ್ಲಿದ್ದೆ. ನನಗೇನೋ ಚೆನ್ನಾಗಿ ನೋಡಿಕೊಂಡರು. ಆದರೆ ದುಡ್ಡಿಗೆ ಗತಿಯಿಲ್ಲದೆ ಇರುವವರು ಯಾವರೀತಿ ಆಸ್ಪತ್ರೆಯಲ್ಲಿ ಉಪಚಾರ, ಔಷಧಿಗಳನ್ನು ಪಡೆದು ತಮ್ಮ ಕಾಯಿಲೆಗಳನ್ನು ಗುಣಪಡಿಸಿಕೊಳ್ಳಬೇಕು? ಬೆಂಗಳೂರಿನಂತಹ ದೊಡ್ಡ ಪಟ್ಟಣದಲ್ಲಿಯೇ ಈ ರೀತಿ ಇರುವಾಗ ಇನ್ನು ಹಳ್ಳಿಗಳ ವಿಚಾರ ಹೇಳಬೇಕೇ? ಆ ವಿಚಾರವನ್ನು ಏಕೆ ಹೇಳಬೇಕೆನ್ನಿಸುತ್ತದೆ. ಇಷ್ಟು ಜನ ಆ ವಿಚಾರಗಳನ್ನು ಹೇಳಿದ್ದರೂ ಮಂತ್ರಿಗಳ ಮನಸ್ಸಿಗೆ ಹಿಡಿಯುತ್ತದೋ ಇಲ್ಲವೋ, ಗೊತ್ತಿಲ್ಲ. ಗ್ರಾಮಗಳಲ್ಲಿಯೂ ಕೆಲವು ಡಾಕ್ಟರುಗಳಿರುತ್ತಾರೆ. ಅವರದು ಬಹಳ ವಿಚಿತ್ರ. ಯಾರಾದರೂ ಪೇಷಂಟ್ ಅತನಲ್ಲಿ ಹೋಗಿ ಹೊಟ್ಟೆ ನೋಯುತ್ತಿದೆ ಎಂದು ಹೇಳಿದರೆ ಏತಕ್ಕೆ ಹೆಚ್ಚಿಗೆ ಊಟಮಾಡಬೇಕು? ಎಂದು ಕೇಳುತ್ತಾರೆ. ಇಂತಹ ಡಾಕ್ಟರುಗಳೂ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವರು ಇರುತ್ತಾರೆ. ಆದ್ದರಿಂದ ಅನುಭವಸ್ಥರಾದ ಡಾಕ್ಟರುಗಳನ್ನು ಗ್ರಾಮಗಳಲ್ಲಿ ನೇಮಿಸಬೇಕು.

ಇನ್ನು ಮಂತ್ರಿಗಳ ಪ್ರವಾಸದ ವಿಷಯ. ನಾನು ಎರಡುವರ್ಷಗಳಿಂದ ಈ ಬಗ್ಗೆ ಟೀಕೆಮಾಡಿದ್ದು ವ್ಯರ್ಥವಾಯಿತು. ಈ ವಿಚಾರದಲ್ಲಿ ಟೀಕೆ ಇನ್ನೂ ಹೆಚ್ಚಾಗಿ ಮಾಡಬೇಕು. ಮಂತ್ರಿಗಳು ಪ್ರವಾಸ ಹೋದಾಗ ಅದರಲ್ಲೂ ಎಂ.ಎಲ್.ಎ. ಗಳಿರುವ ಕ್ಷೇತ್ರಗಳಿಗೆ ಹೋದರೆ ಅಲ್ಲಿ ಕಾಂಗ್ರೆಸ್ ಸದಸ್ಯರು ಇದ್ದರೆ ಅವರೊಡನೆ ಮಾತನಾಡುತ್ತಾರೆ. ವಿರೋಧಪಕ್ಷದ ಸದಸ್ಯರು ಇದ್ದರೆ ಅವರ ಕಡೆ ನೋಡುವುದೇ ಇಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಅಲ್ಲಿನ ಜನರಿಗೆ ಬುದ್ಧಿ ಇಲ್ಲದೆ ಮಂತ್ರಿಗಳನ್ನು ಆ ಕ್ಷೇತ್ರಗಳಿಗೆ ಕರೆಸುತ್ತಾರೆ ಎಂದು. ಇದು ನನಗಂತೂ ಅರ್ಥವಾಗುವುದಿಲ್ಲ. ಕೆಲವು ಮಂತ್ರಿಗಳು ಕ್ಷೇತ್ರಗಳಿಗೆ ಬಂದರೆ ಅಲ್ಲಿ ಅವರ ಭಾಷಣ ಏನೆಂದರೆ ಅವರನ್ನು ಯಾವ ಉದ್ದೇಶಕ್ಕಾಗಿ ಕರೆದುಕೊಂಡು ಹೋಗಿರುತ್ತಾರೋ ಅದನ್ನು ಮರೆತುಬಿಟ್ಟು ಕಾಂಗ್ರೆಸ್ಸಿಗೆ ಯಾರು ಓಟು ಮಾಡಿದ್ದು, ಕಾಂಗ್ರೆಸ್ ಸಂಸ್ಥೆಗೆ ಎಲ್ಲರೂ ಸದಸ್ಯರಾಗಬೇಕು—ಎಂಬೀ ಪ್ರಚಾರ ಭಾಷಣ ಮಾಡುವುದಕ್ಕೆ ಬರುತ್ತಾರೆ. ಇದಕ್ಕಾಗಿ ಅಗತಕ್ಕ ಟಿ.ಎ. ಮತ್ತು ಡಿ.ಎ. ಕೂಡ ತೆಗೆದುಕೊಳ್ಳುತ್ತಾರೆ. ಒಂದುಸಾರಿ ಮಂತ್ರಿಗಳು ನಮ್ಮ ಗೋರಿಬಿದನೂರು ತಾಲ್ಲೂಕಿಗೆ ಬಂದಿದ್ದರು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ಮಂತ್ರಿಗಳು ?

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಯ್ಯಾರಾರು ಹೋಗಿದ್ದರು ಎಂಬುದು ಮಂತ್ರಿಗಳಿಗೇ ಗೊತ್ತಾಗುತ್ತದೆ. ಅಷ್ಟಿಲ್ಲದೆ ಅಲ್ಲಿರುವ ಜನರು ಬುದ್ಧಿಇಲ್ಲದೆ ಇವರನ್ನು ಕರೆಸುತ್ತಾರೆಯೋ ಏನೋ ಗೊತ್ತಿಲ್ಲ. ಇಲ್ಲಿರುವ 200 ಜನ ಎಂ.ಎಲ್.ಎ.ಗಳು ಬುದ್ಧಿಇಲ್ಲದೆ ಮಂತ್ರಿಗಳಾಗಿರುವಂತೆ ತಮ್ಮನ್ನು ಆ ಸ್ಥಾನದಲ್ಲಿ ಕೂಡಿಸಿದರೇ ? ಅದನ್ನು ವಿಚಾರಮಾಡಿ ನೋಡಬೇಕು. ಮಂತ್ರಿಗಳು ಎಲ್ಲಿ ಭಾಷಣ ಮಾಡುವುದಕ್ಕೆ ಹೋದರೂ, ಯಾವ ತಾಲ್ಲೂಕಿಗೆ ಪ್ರವಾಸ ಮಾಡಿದರೂ, ಅಲ್ಲಿಗೆ ಬೇಕಾದ ಒಂದು ಉಪಕಾರ ಮಾಡೋಣ ಆ ತಾಲ್ಲೂಕಿ

ನಲ್ಲಿ ನಡೆಯುವ ಕೆಲಸಗಳನ್ನು ನೋಡೋಣ ಎಂದು ಬರುವುದಿಲ್ಲ. ಕೊಳಕುಮಂಡಲಕ್ಕೆ ಹೋಗಿ ಆ ಮಂಡಲದೊಳಗೆ ನುಗ್ಗಿ ಕುರಿ, ಕೋಳಿ ಕತ್ತರಿಸಿ, ಊಟಮಾಡಿ ಅಲ್ಲಿನ ಆಫೀಸರುಗಳಿಗೆ ಒಂದು ಭಯ ಬರುವಹಾಗೆ ಮಾಡುವುದು. ಅಮಲ್ದಾರ್, ಡೆಪ್ಯುಟಿ ಕಮೀಷನರ್‌ಗಳನ್ನು ಹೇಗೆ ಟ್ರೀಟ್ ಮಾಡಬಹುದೋ ದೇವರಿಗೇ ಗೊತ್ತು. ಮಂತ್ರಿಗಳು ಈ ರೀತಿ ಕೊಳಕುಮಂಡಲಕ್ಕೆ ನುಗ್ಗಿ ಹತ್ತಾರು ನಿಮಿಷಗಳು ಅಲ್ಲಿ ಮಾತನಾಡುವುದು ನೋಡಿದ್ದೇವೆ.

Sri T. MARIAPPA.—There must be some limit to these vague allegations. The same could be turned against him. Specific instances must be brought to our notice. He must say whether he was present on that occasion, and whether he has written any letter to Government about that.

Sri K. PUTTASWAMY.—My friend used the word "Kolakumandal". It is an insinuation against an organisation. He can pass any remarks on the organisation, but he cannot call it names. This insinuation is made against a Congress Mandal. He can make any remarks against the organisation; we are here to take it and rebut it, but he cannot be allowed to call names.

Mr. SPEAKER.—I did not know what was meant by "Kolakumandal". If it refers to any organisation, I think it is not right for the Hon'ble Member to use such a word. The member can use any word he likes so far as the *Mantrimandal* is concerned. He can attack the Cabinet or the Congress Legislature Party because they are represented here and they can defend themselves, but so far as that organisation is concerned there is no representative of it here to defend it.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಇನ್ನು ಮಂತ್ರಿಗಳು ಪ್ರವಾಸ ಮಾಡುವಾಗ ಪ್ರೋಗ್ರಾಂ ಇಲ್ಲದೆಯೂ ಬರುತ್ತಾರೆ, ಪ್ರೈವೇಟಾಗಿಯೂ ಬರುತ್ತಾರೆ. ಪ್ರೈವೇಟಾಗಿ ಬರಬೇಕಾದರೆ ಸರ್ಕಾರಿ ಕಾರಿನಲ್ಲಿ ಬರುತ್ತಾರೆ. ಆಗ ಅಲ್ಲಿ ಡೆಪ್ಯುಟಿ ಕಮೀಷನರ್, ಎ.ಎಸ್.ಪಿ. ಡಿ.ಎಸ್.ಪಿ. ಪೋಲೀಸ್ ಆಫೀಸರುಗಳು ಅಮಲ್ದಾರರುಗಳು ಕಾದಿರುತ್ತಾರೆ. ಮಂತ್ರಿಗಳು ಪ್ರೈವೇಟಾಗಿ ಬರಬೇಕಾದರೆ ಆಫೀಸರುಗಳು, ಅಫಿಷಿಯಲ್ಸ್ ಏತಕ್ಕೆ ಕಾದಿರಬೇಕು ? ಇದನ್ನು ಮಂತ್ರಿಗಳು ದೀರ್ಘವಾಗಿ ಆಲೋಚನೆ ಮಾಡಬೇಕು. ಇವನ್ನೆಲ್ಲಾ ಹೇಳಿದರೆ ಸದಸ್ಯರು ವ್ಯಾಜ್ಯ ಮಾಡುತ್ತಾರೆಂದು ಹೇಳುತ್ತಾರೆ. ಆದ್ದರಿಂದ ಮಂತ್ರಿಗಳು ಯಾವಾಗ ಪ್ರವಾಸ ಮಾಡಿದರೂ, ಪ್ರೈವೇಟಾಗಿ ಯಾವ ಕ್ಷೇತ್ರಕ್ಕೆ ಭೇಟಿಕೊಟ್ಟರೂ ಯಾವ ಆಫೀಸರೂ ಕಾಯಬೇಕಾಗಿಲ್ಲ. ಆಫೀಸರುಗಳಿಗೆ ಪ್ರೋಗ್ರಾಂ ಕೊಡುವುದು ಸರಿಯಲ್ಲ. ಸದಸ್ಯರಿಗೆ ಮಂತ್ರಿಗಳ ಪ್ರೋಗ್ರಾಂ ತಿಳಿಸಬಹುದು. ಸರ್‌ಪ್ರೈಸ್ ವಿಸಿಟ್ ಕೊಟ್ಟರೆ ಚೆನ್ನಾಗಿರುತ್ತದೆ. ಮೊನ್ನೆ ಮಾನ್ಯ ಮಂತ್ರಿಗಳು ಮಂಡಲ ಕಾಂಗ್ರೆಸ್ ಸಂಸ್ಥೆಯನ್ನು ಪ್ರಾರಂಭಮಾಡಲು ಬಂದಿದ್ದರು. ಅವರು ಯಾರಿಗೂ ಪ್ರೋಗ್ರಾಂ ಕೊಡದೆಯೇ ಬಂದಿದ್ದರು. ಆಗಲೂ ಅಲ್ಲಿಗೆ ಎ.ಎಸ್.ಪಿ., ಡಿ.ಎಸ್.ಪಿ., ಅಮಲ್ದಾರರು, ರಿಜರ್ವ್ ಪೋಲೀಸ್, ಅಸಿಸ್ಟೆಂಟ್ ಕಮೀಷನರ್ ಎಲ್ಲರೂ ಇವರ ಜೊತೆಗೆ MYA 1 ಸರ್ಕಾರಿ ಕಾರಿನಲ್ಲಿ ಬಂದಿದ್ದರು. ಜನಗಳು ಕರೆಯುವಾಗ ಪ್ರೈವೇಟಾಗಿ ಬರಬೇಕಾದರೆ ಅಲ್ಲಿನ ಅಫೀಸರುಗಳು ಏತಕ್ಕೆ ಬರಬೇಕು ? ಈ ಕ್ರಮವನ್ನು ಇನ್ನು ಮುಂದೆ ನಿಲ್ಲಿಸಬೇಕು. ಮಂತ್ರಿಗಳು ಸರ್‌ಪ್ರೈಸ್ ವಿಸಿಟ್‌ಗಳನ್ನು ಕೊಡಬೇಕು.

ಇನ್ನು ಸಹಕಾರ ಸಂಘಗಳ ವಿಷಯ. ಅವು ದೇಶದಲ್ಲಿ ಏನು ಆಗಿಬಿಟ್ಟಿವೆಯೋ ನನಗೆ ಗೊತ್ತಿಲ್ಲ. ಎಲ್ಲಾ ಸಂಘಗಳೂ ಬಿದ್ದು ಹೋಗಿವೆ. ಇದರಲ್ಲಿ ಸರ್ಕಾರದವರು ನಾಮಿನೇಷನ್ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಎಷ್ಟೋ ಜನ ಈ ವಿಷಯ ಗೊತ್ತಿಲ್ಲದೆಯೇ ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಒಪ್ಪಿಕೊಂಡಿದ್ದಾರೆ. ಅವರು ನಾಮಿನೇಷನ್ ಮಾಡುವಾಗ ಎಷ್ಟೋ ಸಾರಿ ತಕರಾರು ಹಾಕಿಬಿಡುತ್ತಾರೆ. ಅದರಲ್ಲಿ ಎಲ್ಲಾ ಒಂದೇ ಪಕ್ಷದವರನ್ನು ಹಾಕುತ್ತಾರೆ. ಈ ಸಂಘಗಳಲ್ಲಿ ಏನಾದರೂ ಹೆಚ್ಚುಕಡಿಮೆಯಾದರೆ ಎಷ್ಟೋ ಸಾರಿ ವಾರಸುದಾರರೂ ಕೂಡ ಇರುವುದಿಲ್ಲ. ಕೊನೆಗೆ ಸಂಘಗಳನ್ನು ಹಾಳುಮಾಡುವ ಸ್ಥಿತಿಗೆ ತಂದುಬಿಟ್ಟಿದ್ದಾರೆ. ಆದ್ದರಿಂದ ಸಹಕಾರ ಶಾಖಾ ಮಂತ್ರಿಗಳು ಈಗಿರತಕ್ಕ ನಾಮಿನೇಷನ್ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಅಲ್ಲಿನ ಷೇರ್ ಹೋಲ್ಡರುಗಳು ಯಾರನ್ನು ಬೇಕಾದರೂ ಎಲೆಕ್ಟ್‌ಮಾಡಿ ಆ ಸಂಘದ ಮ್ಯಾನೇಜ್‌ಮೆಂಟನ್ನು ತೆಗೆದುಕೊಳ್ಳಲಿ. ಸರ್ಕಾರದವರು ಮೊದಲಿನಿಂದಲೂ ಆ ನಾಮಿನೇಷನ್ ಮಾಡುವವರ ಮುಖವನ್ನೇ ಎಷ್ಟೋಸಾರಿ ನೋಡಿರುವುದಿಲ್ಲ. ಅಂತಹವರ ಹೆಸರನ್ನು ನಾಮಿನೇಟ್ ಮಾಡುತ್ತಾರೆ. ಅದೇ ಪ್ರಕಾರ ಒಂದು ಸರ್ಕಾರದ ಆಜ್ಞೆಯನ್ನೂ ಕೂಡ ಹೊರಡಿಸಿಬಿಡುತ್ತಾರೆ. ಈ ರೀತಿಯಾಗಿ ಬಹಳ ಅನ್ಯಾಯ ಮಾಡುತ್ತಿದ್ದಾರೆ. ಈರೀತಿ ನಮ್ಮ ಕೋ-ಆಪರೇಟಿವ್ ಸೊಸೈಟಿಗಳಲ್ಲಿಯೂ ಮಾಡುತ್ತಿದ್ದಾರೆ, large scale ಸೊಸೈಟಿಗಳಲ್ಲಿಯೂ ಈ ರೀತಿಯಾಗಿಯೇ ಮಾಡುತ್ತಿದ್ದಾರೆ. ಎಲೆಕ್ಟ್ ಆಗಿ ಬಂದರೆ, ಆಗ ಯಾರನ್ನು ಬೇಕೋ ಅವರನ್ನು ಸೆಲೆಕ್ಟ್‌ಮಾಡಿಕೊಂಡು ಸಂಘದ ಮ್ಯಾನೇಜ್‌ಮೆಂಟನ್ನು ನಡೆಸಿಕೊಳ್ಳಲಿ. ಇಲ್ಲದಿದ್ದರೆ ದೇಶದಲ್ಲಿ ಬಹಳ ಅನ್ಯಾಯವಾಗುತ್ತದೆ ಅನೇಕ ಸಂಘಗಳು ತಲೆಯನ್ನೇ ಎತ್ತುವುದಿಲ್ಲ. ಅನೇಕವೇಳೆ ಸರ್ಕಾರದವರಿಗೇ ಗೊತ್ತಿಲ್ಲದ ಅದರಲ್ಲಿ ಅನುಭವವಿಲ್ಲದವರನ್ನೇ ಆ ಸಂಘಗಳಿಗೆ ನಾಮಿನೇಟ್ ಮಾಡುತ್ತಾರೆ. ಅದು ಬಹಳ ತಪ್ಪು.

ಶ್ರೀ ಮಾಲಿ ಮರಿಯಪ್ಪ (ಸಹಕಾರ ಶಾಖೆಯ ಮಂತ್ರಿಗಳು).-15 ಜನಗಳು ಸಂಘದಲ್ಲಿ ಇರುವ ಕಡೆ ಹತ್ತು-ಹನ್ನೆರಡು ಜನರನ್ನು ಎಲೆಕ್ಟ್ ಮಾಡಿಕೊಳ್ಳಲಿ. ಇನ್ನೆರಡು ಮೂರುಸ್ಥಾನಗಳಿಗೆ ಮಾತ್ರ ನಾಮಿನೇಷನ್ ಪದ್ಧತಿ ಇರಲಿ. ಇನ್ನುಮುಂದೆ ನಾಮಿನೇಷನ್ ಪದ್ಧತಿಯ ಬಗ್ಗೆ ಕೆಲವು ಕ್ರಮಗಳನ್ನು ಬದಲಾಯಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಜಿ. ವೆಂಕಟಪ್ಪ (ಶಿಡ್ಲಘಟ್ಟ).—ಸ್ವಾಮಿ, 1959-60ನೆಯ ವರ್ಷದ ಆಯುವ್ಯಯ ಪಟ್ಟಿಯಮೇಲೆ ಮಾತನಾಡುತ್ತಾ ನಾನು ನಾಲ್ಕಾರು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ಪ್ರಜಾ ಸರ್ಕಾರದ ರಾಜ್ಯಸ್ಥಾಪನೆಯಾದ ಮೇಲೆ ದೇಶದ ಅಭಿವೃದ್ಧಿಗಾಗಿ ಒಂದು ಯೋಜನೆ ಹಾಕಿಕೊಂಡು ಮುಂದುವರಿಯುವುದು ಉಚಿತ ಹಾಗೂ ಸರ್ಕಾರದ ಕರ್ತವ್ಯ. ಹಾಗೆ ಯೋಜನೆ ಹಾಕಿಕೊಂಡಿದ್ದರಿಂದ ಮೊದಲನೆಯ ಪಾಂಚವಾರ್ಷಿಕ ಯೋಜನೆ ಮುಗಿದು ಎರಡನೆಯ ಪಾಂಚವಾರ್ಷಿಕ ಯೋಜನೆಯ ಬಹುಭಾಗದ ಮೂರು ವರ್ಷಗಳ ಕಾಲವನ್ನು ಕಳೆದಿದ್ದೇವೆ. ಆದರೆ ನಾವು ಎಷ್ಟರಮಟ್ಟಿಗೆ ಈ ಯೋಜನೆಗಳನ್ನು ಪೂರೈಸಲಿಕ್ಕೆ ಮುಂದುವರಿದಿದ್ದೇವೆ, ಎಷ್ಟರ ಮಟ್ಟಿಗೆ ಈ ಕಾರ್ಯಾಲಯದಲ್ಲಿ ಒಂದು ಫಲಪ್ರದವಾದ ಗುರಿಯನ್ನು ಮುಟ್ಟಿದ್ದೇವೆಂದು ಯೋಚಿಸುವುದಾದರೆ, ಅನೇಕ ಕಾರಣಗಳ ಸಲುವಾಗಿ, ನಾವು ಹಿಂದೆ ಬಿದ್ದಿದ್ದೇವೆ. ಈ ಯೋಜನೆಗಳಿಗಾಗಿ ಸುಮಾರು 146 ಕೋಟಿ ರೂಪಾಯಿಗಳ ಖರ್ಚಿನಿಂದ ಎರಡನೆ ಪಾಂಚವಾರ್ಷಿಕ ಯೋಜನೆಗಳನ್ನು ಮೈಸೂರು ದೇಶದಲ್ಲಿ ಜಾರಿಗೆ ತರಬೇಕೆಂದಿದ್ದರು ಆದರೆ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿ ಆ ಖರ್ಚನ್ನು 135 ಕೋಟಿ ರೂಪಾಯಿಗಳಿಗೆ ಇಳಿಸಲಾಗಿದೆ. ಆದರೂ ಖರ್ಚಾಗತಕ್ಕ ಹಣ ಸರಿಯಾದ ರೀತಿಯಲ್ಲಿ ದಕ್ಷರ ಕೈಲಿ ಸಿಕ್ಕಿಲ್ಲ. ಪಕ್ಷಪಾತ ಮನೋಭಾವದಿಂದ ಕೂಡಿದ್ದು ಸಂಕುಚಿತ ಮನೋಭಾವವನ್ನು ಬೆಳಿಸಲಿಕ್ಕೆ ಅನೇಕ ಅವಕಾಶಗಳನ್ನು ಕಲ್ಪಿಸಿಕೊಳ್ಳತಕ್ಕ ಅನುಭವಸ್ಥರ ಕೈಲಿ ಇವತ್ತಿನದಿವಸ ಈ ಪ್ಲಾನನ್ನು ಮುಂದುವರಿಸಲಿಕ್ಕೆ ಕೊಟ್ಟು ಎಲ್ಲಾ ಕ್ಷೇತ್ರಗಳಲ್ಲೂ ಸಮಾನಾವಕಾಶ ಕೊಡುವುದಕ್ಕೆ ಸಾಧ್ಯವಾಗದ ಹಾಗೆ ನಾವು ಹಿಂದುಳಿದಿದ್ದೇವೆ.

1 P.M.

ಇದಕ್ಕೆ ಅನೇಕ ನಿದರ್ಶನಗಳುಂಟು, ಈ ದಿವಸ ಈ ಯೋಜನೆಗಳಿಂದ ಕೇವಲ ರೋಗ, ಅಜ್ಞಾನ, ಆರ್ಥಿಕ ಅಸಮಾನತೆ, ಇತ್ಯಾದಿ ವಿಚಾರಗಳನ್ನೆಲ್ಲಾ ನಿವಾರಣೆ ಮಾಡಿ ನಾವು ಅಭಿವೃದ್ಧಿಹೊಂದಬೇಕಾಗಿದ್ದರೆ, ಮುಂದುವರಿಯಬೇಕಾಗಿದ್ದರೆ, ನಾವು ನಮ್ಮ ನಿರ್ಧರದ ಗುರಿಯನ್ನು ತಲುಪಬೇಕಾಗಿದ್ದರೆ, ಈ ಯೋಜನೆಗಳಲ್ಲಿರತಕ್ಕ ನ್ಯೂನತೆಗಳನ್ನೆಲ್ಲ ಮೊದಲು ತೊಡೆದು ಹಾಕಬೇಕು. ಹಾಗೆ ಮಾಡದಿದ್ದರೆ ನಾವು ಪ್ರಗತಿ ಮಾರ್ಗದಲ್ಲಿ ನಡೆಯುತ್ತಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಆದಕಾರಣ ಈಗ ನಾವು ಕೈಗೊಂಡಿರತಕ್ಕ ಯೋಜನೆಗಳೆಲ್ಲ ಯಶಸ್ವಿಯಾಗಬೇಕಾಗಿದ್ದರೆ ಈ ಯೋಜನೆಗಳಲ್ಲಿ ಯಾರಿಗೆ ಪೂರ್ಣ ನಂಬಿಕೆ, ಶ್ರದ್ಧೆಗಳಿವೆಯೋ ಯಾರು ಈ ಕಾರ್ಯಗಳನ್ನು ಯಶಸ್ವಿಗೊಳಿಸುವಂಥ ಶಕ್ತಿ ಸಾಮರ್ಥ್ಯಗಳನ್ನು ಪಡೆದಿದ್ದಾರೋ ಅಂಥ ದಕ್ಷರನ್ನು ಈ ಕಾರ್ಯಗಳಿಗೆ ನೇಮಕ ಮಾಡದಿದ್ದರೆ ನೀವು ಎಷ್ಟೋ ಕೋಟಿ ರೂಪಾಯಿಗಳನ್ನು ಈ ಮಾರ್ಗದಲ್ಲಿ ಖರ್ಚುಮಾಡಿದರೂ ಅದರಿಂದ ದೇಶಕ್ಕೆ ಮೂರುಕಾಸಿನ ಉಪಕಾರ ಕೂಡ ಆಗುವುದಿಲ್ಲವೆಂದು ಹೇಳುತ್ತೇನೆ. ಆದುದರಿಂದ ಸರ್ಕಾರದವರು ಕೂಡಲೇ ಈ ಬಾಬುಗಳಲ್ಲಿರತಕ್ಕ ನ್ಯೂನತೆಗಳನ್ನು ತಿದ್ದಿಕೊಳ್ಳಬೇಕು. ಈ ದಿವಸ ಜಾರಿಯಲ್ಲಿರತಕ್ಕ ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕುಗಳು, N.E.S. ಬ್ಲಾಕುಗಳು—ಇತ್ಯಾದಿ ಯೋಜನೆಗಳಲ್ಲಿ ಏನು ಕೆಲಸವೂ ಸಾಧನೆಯಾಗುತ್ತಿಲ್ಲ. ಅಲ್ಲಿ ಕಾರ್ಯಗಳು ಆಗದಿರುವುದಕ್ಕೆ ಕಾರಣ ಅಲ್ಲಿಯ ಅಧಿಕಾರಿಗಳಲ್ಲಿರತಕ್ಕ ಅನನುಭವ, ಅದಕ್ಷತೆಯೇ ಆಗಿದೆ. ನಾವು ಮುಂದುವರಿಯತಕ್ಕಂಥ ಸರಿಯಾದ ದಾರಿ ಯಾವುದೆಂಬುದೇ ಅವರಿಗೆ ಗೊತ್ತಿಲ್ಲ. ಕಾರ್ಯಗಳನ್ನು ದಕ್ಷತೆಯಿಂದ ನಡೆಸತಕ್ಕ ಶಕ್ತಿಯಿಲ್ಲ. ಇಂಥ ಅಧಿಕಾರಿಗಳನ್ನೇ ನೀವು ಈ ದಿವಸ ಆರಿಸಿ ಆ ಕಾರ್ಯಗಳಿಗೆ ನೇಮಿಸಿದ್ದೀರಿ. ಅಂಥ ದಕ್ಷತೆ ಶೂನ್ಯರಾದ ಅಧಿಕಾರಿಗಳ ಮೂಲಕ ಸರ್ಕಾರ ದೇಶವನ್ನು ಮುಂದಕ್ಕೆ ತರಲು ಹೊರಟಿರುವುದು ನಮ್ಮ ದುರ್ದೈವ. ಈಗಲಾದರೂ ಆ ಕೆಲಸಕಾರ್ಯಗಳಿಗೆ ಶಕ್ತರಾದಂಥ ಅಧಿಕಾರಿಗಳು ಬಂದರೆ ಸ್ವಲ್ಪ ಮಟ್ಟಿಗಾದರೂ ಅಭಿವೃದ್ಧಿದಾರಿಯಲ್ಲಿ ಬೆಳಕು ಬಿದ್ದೀತೆಂದು ಆಶಿಸಬಹುದು. ಈ ದಿವಸ ನಮ್ಮ ದೇಶಕ್ಕೆ ಬೇಕಾಗುವಷ್ಟು ಆಹಾರಧಾನ್ಯವನ್ನು ನಾವು ನಮ್ಮ ದ್ವಿತೀಯ ಪಾಂಚವಾರ್ಷಿಕಯೋಜನೆ ಪೂರೈಸುವುದರೊಳಗಾಗಿಯಾದರೂ ಬೆಳೆದುಕೊಳ್ಳುತ್ತೇವೆಂಬ ಒಂದು ದೊಡ್ಡ ಆಸೆಯನ್ನಿಟ್ಟುಕೊಂಡಿದ್ದೇವೆ. ಆದರೆ ಈ ಹಾದಿಯಲ್ಲಿ ನಾವು ಎಷ್ಟು ತೀವ್ರಗತಿಯಿಂದ ಮುಂದುವರಿಯಬೇಕೋ ಅಷ್ಟು ತೀವ್ರಗತಿಯಿಂದ ಮುಂದುವರಿಯುತ್ತಿಲ್ಲ. ಈಗಾಗಲೇ ಈ ಆಸೆಯೂ ನಿರಾಶೆಯನ್ನು ಸೂಚಿಸುತ್ತಿದೆ. ಈ ದಿವಸ ವ್ಯವಸಾಯದ ಇಲಾಖೆಗೆ ಇರಿಗೇಷನ್ ಬಾಬಿಗಾಗಿ ತೆಗೆದಿಟ್ಟಿದ್ದ ಹಣ ಮತ್ತು ಈ ಕಮ್ಯುನಿಟಿ ಡೆವಲಪ್‌ಮೆಂಟ್ ಬ್ಲಾಕುಗಳಲ್ಲಿ ವ್ಯವಸಾಯಾಭಿವೃದ್ಧಿಗಾಗಿ ತೆಗೆದಿಟ್ಟಿದ್ದ ಹಣವೆಲ್ಲ ಖರ್ಚಾಗದೆ ಹಾಗೆಯೇ ಉಳಿದಿದೆ. ಇದಕ್ಕೆಲ್ಲ ಕಾರಣ ಅಲ್ಲಿ ಅನನುಭವಿಗಳಾದ ಅಧಿಕಾರಿಗಳಿರುವುದೇ ಆಗಿದೆ. ಉತ್ತಮವಾದ ಬಿತ್ತನೆ ಬೀಜದ ಸರಬರಾಯಿಯಿಂದ ದೇಶದಲ್ಲಿ ಶೇಕಡ ಆರರಷ್ಟು ಬೆಳೆಯ ಉತ್ಪನ್ನವನ್ನು ಹೆಚ್ಚಿಸಬಹುದೆಂಬುದಾಗಿ ದ್ವಿತೀಯಪಾಂಚವಾರ್ಷಿಕ ಯೋಜನೆಯ ರೆವಿನ್ಯೂ ಹೆಡ್ಡಿನಲ್ಲಿ ಸೂಚಿಸಲಾಗಿದೆ. ಸರ್ಕಾರದವರು ಎಷ್ಟೋ ಕಷ್ಟಪಟ್ಟು ಸರಬರಾಯಿ ಮಾಡಿದರೂ ಶೇಕಡ 60-70ಕ್ಕಿಂತ ಹೆಚ್ಚಿಗೆ ಉತ್ತಮ ಬಿತ್ತನೆ ಬೀಜವನ್ನು ಸರಬರಾಯಿಮಾಡುವುದಕ್ಕಾಗುವುದಿಲ್ಲ. ಇದರ ಜೊತೆಗೆ ರೈತರಿಗೆ ಬೇಕಾಗತಕ್ಕ ಉಪಕರಣಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸಲು ಇನ್ನೂ ಸಾಧ್ಯವಾಗಿಲ್ಲ. ಈ ತೊಂದರೆಗಳನ್ನೆಲ್ಲಾ ನಿವಾರಣೆ ಮಾಡಲು ನಮಗಿರತಕ್ಕ ಒಂದೇ ಒಂದು ಮಾರ್ಗವೆಂದರೆ ಸಹಕಾರ ಸಂಘಗಳ ಆಶ್ರಯದಲ್ಲಿ ಈ ಕಾರ್ಯಗಳನ್ನು ನಡೆಸುವುದು. ಆದರೆ ಈ ಸಹಕಾರ ಸಂಘಗಳ ವ್ಯವಹಾರವೂ ಕೂಡ ಈ ದಿವಸ ಬಹಳ ಹದಗೆಟ್ಟಿದೆ. ರೈತರಿಗೆ ಸೊಸೈಟಿಗಳ ಮೂಲಕ ಸರಬರಾಯಿಯಾಗತಕ್ಕ ಸರಕುಗಳೆಲ್ಲವೂ ಅವು ಮಧ್ಯೆ ದಾರಿಯಲ್ಲೇ ಮಾಯವಾಗಿ ಹೋಗುತ್ತಿವೆ. ಅವು ರೈತರ ಕೈಸೇರುತ್ತಿಲ್ಲ. ಈ ದಿವಸ ನಮ್ಮ ಕೋಲಾರ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಸೊಸೈಟಿಗಳನ್ನು ವಡಗೇನಹಳ್ಳಿ, ಚಿಕ್ಕಬಳ್ಳಾಪುರ ಮತ್ತು ಗೌರಿಬಿದನೂರುಗಳಲ್ಲಿ ಸ್ಥಾಪಿಸಲಾಗಿದೆ. ಈ ಸಂಘಗಳ ವ್ಯವಹಾರ ನಡೆಸತಕ್ಕ ಸಮಿತಿಯಲ್ಲಿ ನಿಷ್ಠಾವಂತರಿಲ್ಲದೆ ಈ ಸಂಘಗಳಲ್ಲಿ ಈಗ ದುರ್ವ್ಯಾಪಾರ ನಡೆಯುವುದಕ್ಕೆ ಪ್ರಾರಂಭವಾಗಿದೆ. ನಮ್ಮ ಜಿಲ್ಲೆಯ ಬಾರ್ಡರಿನಲ್ಲಿ ಆಂಧ್ರಕ್ಕೆ ಸೇರಿದ ಹಿಂದೂಪುರಕ್ಕೆ ಈ ಸೊಸೈಟಿಗಳಿಗೆ ರೈತರಿಗಾಗಿ ಹಂಚಲು ಬರತಕ್ಕ ಸಾಮಾನುಗಳೆಲ್ಲ ಬ್ಲಾಕಿನಲ್ಲಿ ಹೋಗುತ್ತಿವೆ. ಈ ನ್ಯೂನತೆಗಳನ್ನೆಲ್ಲ ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಸರಿಪಡಿಸದಿದ್ದರೆ ರೈತನನ್ನು ಹೇಗೆ ಉದ್ಧಾರಮಾಡಿದಂತಾಗುತ್ತದೆ? ಇಂಥ ಅಕ್ರಮ, ಅನ್ಯಾಯಗಳನ್ನು ಕೂಡಲೇ ತಡೆಗಟ್ಟದಿದ್ದರೆ ಸರ್ಕಾರ ಕೈಗೊಂಡಿರತಕ್ಕ ಯೋಜನೆಗಳಲ್ಲಿ ಅಡಗಿರತಕ್ಕ ಧ್ಯೇಯ ಒಳ್ಳೆಯದೇ ಆಗಿದ್ದರೂ, ಆ ಉತ್ತಮ ಧ್ಯೇಯಸಾಧನೆಯಾಗಿ ದೇಶಕ್ಕೆ ಫಲ ಲಭಿಸುವುದಿಲ್ಲ ಮತ್ತು ಈ ಯೋಜನೆಗಳಿಂದ ಒಂದು ಇಂಚಿ

ನಷ್ಟುಕೂಡ ದೇಶಾಭಿವೃದ್ಧಿಯಸಾಧನೆ ಆಗಲಾರದೆಂದು ಹೇಳುತ್ತೇನೆ. ಅಷ್ಟೇ ಏಕೆ ದೇಶವೂ ಉಳಿಯುವುದಿಲ್ಲ, ಹಾಳಾಗಿ ಹೋಗುತ್ತದೆ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ ಮುಂದಕ್ಕೆ ನಮ್ಮ ದೇಶದಲ್ಲಿ ಮೂಲಶಿಕ್ಷಣ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕೆಂದು ಪ್ರಯತ್ನ ಇದೆ. ಆದರೆ ಈಗ ಅಲ್ಲಲ್ಲೇ ಸ್ಥಾಪಿಸಲಾಗಿರತಕ್ಕ ಶಾಲೆಗಳಿಗೆ ಸರಿಯಾದ ನೈಪುಣ್ಯತೆಯಿಲ್ಲದ ಶಿಕ್ಷಕರನ್ನು ನುರಿತಿಲ್ಲದ ಶಿಕ್ಷಕರನ್ನು ನೇಮಕ ಮಾಡಿರುವುದಲ್ಲದೆ ಆ ಶಾಲೆಗಳಿಗೆ ಅತ್ಯವಶ್ಯಕವಾದ ಉಪಕರಣಗಳನ್ನೂ ಕೂಡ ಒದಗಿಸಿರುವುದಿಲ್ಲ. ಇಂಥ ಶಾಲೆಗಳಲ್ಲಿ ನಮ್ಮ ಮಕ್ಕಳಿಗೆ ಮೂಲಶಿಕ್ಷಣ ವಿದ್ಯಾಭ್ಯಾಸ ದೊರೆಯುತ್ತದೆಂದು ಹೇಳುವುದು ನಾಚಿಕೆಗೇಡಿನ ಮಾತೇ ಸರಿ. ಸರ್ಕಾರದವರು ತಮಗೆ ನಿಭಾಯಿಸಲು ಶಕ್ತಿಯಿಲ್ಲದಿದ್ದಾಗ ನಾನಾ ಯೋಜನೆಗಳನ್ನು ಕೈಗೊಳ್ಳುವುದಕ್ಕೆ ಬದಲಾಗಿ ಚೊಕ್ಕಟವಾಗಿ ನ್ಯಾಯ ರೀತಿಯಲ್ಲಿ ನಾಲ್ಕು ಕಾರ್ಯಗಳನ್ನು ಕೈಗೊಂಡು ಅವುಗಳನ್ನು ಯಶಸ್ವಿಯಾಗಿ ಮುಗಿಸಿದರೆ ಅಷ್ಟೇ ಸಾಕೆಂದು ಹೇಳುತ್ತೇನೆ. ಜನರಿಗೆ ಬೇಕಾದದ್ದು ಸರ್ಕಾರ ಎಷ್ಟು ಯೋಜನೆಗಳನ್ನು ಕೈಗೊಳ್ಳುತ್ತದೇ ಎಂಬುದಲ್ಲ, ಅವರಿಗೆ ಎಷ್ಟು ಉಪಕಾರ ಆಗುತ್ತದೆ ಎಂಬುದು ಮುಖ್ಯವಾದ ವಿಚಾರ. ಎಷ್ಟು ಉಪಕಾರ ನೀಡಲು ಸಾಧ್ಯವೋ ಅಷ್ಟು ಕಾರ್ಯಗಳನ್ನು ಕೈಗೊಂಡರೆ ಸಾಕು. ಈ ದಿವಸ ನಾವು ಉದ್ದೇಶಿಸಿರತಕ್ಕ ಕಾರ್ಯಗಳಲ್ಲಿ ಎಷ್ಟರಮಟ್ಟಿಗೆ ಅವು ಸಾಧನೆಯಾಗಿವೆ ಅವುಗಳಿಂದ ನಮಗೆ ಎಷ್ಟರಮಟ್ಟಿಗೆ ಫಲಪ್ರಾಪ್ತವಾಗಿದೆ ಎಂಬುದನ್ನು ಜನತೆ ಕಾಣುವಂಥ ರೀತಿಯಲ್ಲಿ ಕೆಲಸಗಳನ್ನು ನೆರವೇರಿಸುವಂಥ ದಕ್ಷರೂ, ದೂರದೃಷ್ಟಿಯುಳ್ಳಂಥವರೂ ಆದ ಅಧಿಕಾರಿಗಳನ್ನೇ ಆರಿಸಿ ಈ ಕೆಲಸ ಕಾರ್ಯಗಳಿಗೆ ನೇಮಿಸಬೇಕಾದದ್ದು ಅಗತ್ಯ. ಇನ್ನು ನಮ್ಮ ದೇಶದ ಆಹಾರೋತ್ಪತ್ತಿಯನ್ನು ಹೆಚ್ಚಿಸತಕ್ಕ ಮಾರ್ಗದಲ್ಲಿ ಸರ್ಕಾರ ಮುಖ್ಯವಾಗಿ ಗಮನ ಕೊಡಬೇಕಾದಂಥ ಮತ್ತೊಂದು ವಿಚಾರ ಯಾವುದೆಂದರೆ, ಅದು ಆಹಾರಧಾನ್ಯಗಳ ಧಾರಣೆಗಳನ್ನು ನಿಗದಿ ಮಾಡುವುದು. ಈ ದಿವಸ ನಮ್ಮ ದೇಶದಲ್ಲಿ ರೈತರು ಬೆಳೆಯತಕ್ಕ ಆಹಾರಧಾನ್ಯಗಳ ಉತ್ಪತ್ತಿಯ ಹಾದಿಯಲ್ಲಿ ಆ ರೈತರೇನು ಖರ್ಚುಮಾಡಿರುತ್ತಾರೆಂಬುದನ್ನು ಮೊದಲು ನಿಗದಿಮಾಡಿ ಆನಂತರ ಆ ಧಾನ್ಯಗಳ ಬೆಲೆಯನ್ನು ನಿರ್ಧರಿಸುವುದು ನ್ಯಾಯವಾದದ್ದು. ಸರ್ಕಾರದವರು ಈ ದಿವಸ ಒಂದನೆಯ ವೆರೈಟಿ ಭತ್ತಕ್ಕೆ $10\frac{1}{2}$ ರೂಪಾಯಿ ರೇಟಿಟ್ಟಿದ್ದಾರೆ. ಅಷ್ಟನ್ನೇ ಕೊಡುವುದಾದರ ರೈತನಿಗೆ ಆ ಭತ್ತದ cost of production ಏನಿದೆ ಎಂಬುದನ್ನು ನೋಡಿ ಅಷ್ಟನ್ನಾದರೂ ಆತನಿಗೆ ಕೊಡದಿದ್ದರೆ ಆತನಿಗೇನು ಪ್ರೋತ್ಸಾಹ ನೀಡಿದಂತಾಯಿತು? ಹಾಗೆ ಧಾರಣೆ ನಿಗದಿಮಾಡುವಾಗ ನಿಮಗೆ ಆಹಾರಧಾನ್ಯಗಳನ್ನು ಅಗ್ಗದ ದರದಲ್ಲಿ ಮಾರಾಟಮಾಡಿಸಬೇಕೆಂಬ ಆಸೆಯಿದ್ದರೆ cost of production ಎಷ್ಟೆಂಬುದನ್ನು ಗಣನೆಗೆ ತೆಗೆದುಕೊಂಡು ಕೇಂದ್ರದವರು ಹೇಳಿರತಕ್ಕ ರೇಟೇನಿದೆ ಅದಕ್ಕೆ ಜಾಸ್ತಿಯಾಗತಕ್ಕದ್ದನ್ನು ಸರ್ಕಾರದವರು ಸಬ್‌ಸಿಡೈಜ್‌ಮಾಡಿ ಕೊಡತಕ್ಕದ್ದು ಉತ್ತಮ. ಹಾಗೆ ಮಾಡದಿದ್ದರೆ ದೇಶದಲ್ಲಿ ಆಹಾರೋತ್ಪತ್ತಿಯನ್ನು ಹೆಚ್ಚು ಮಾಡಲು ಖಂಡಿತ ಸಾಧ್ಯವಿಲ್ಲ.

ಇನ್ನು ಸರ್ಕಾರದವರು ಹರಿಜನರ ಹಾಗೂ ಷೆಡ್ಯೂಲ್ಡ್ ಪಂಗಡಗಳವರ ಅಭಿವೃದ್ಧಿಗಾಗಿ ಎಮಿಲಿಯೋರೇಷನ್ ಗ್ರಾಂಟ್‌ನ್ನು ಕೊಡುತ್ತಿದ್ದಾರೆ. ಹಿಂದುಳಿದಿರತಕ್ಕ ವರ್ಗಗಳನ್ನು ಮುಂದಕ್ಕೆ ತರಲು ಸರ್ಕಾರದವರು ಹರಿಜನರ ವಸತಿ ಸೌಕರ್ಯಕ್ಕಾಗಿ ಮನೆಗಳನ್ನು ಕಟ್ಟಿಕೊಳ್ಳಲು ಅವರಿಗೆ 200-300 ರೂಪಾಯಿಗಳಂತೆ ಗ್ರಾಂಟ್ ಕೊಡುತ್ತಿದ್ದಾರೆ. ಆದರೆ ಈ ಹಣ ಏತಕ್ಕೂ ಸಾಲದು. ಹೆಚ್ಚಿಗೆ ಬೀಳತಕ್ಕ ಖರ್ಚನ್ನು ಆ ಪಾರ್ಟಿಗಳೇ ವಹಿಸಬೇಕು. ಆದರೆ ಆ ಜನರಿಗೆ ಅಷ್ಟು ಶಕ್ತಿಯಿಲ್ಲದಿರುವುದರಿಂದ ಈ ಹಾದಿಯಲ್ಲಿ ಇಲ್ಲಿಯವರೆಗೆ ಅನೇಕ ಜನರಿಗೆ ಹಣವನ್ನೊದಗಿಸಿದ್ದಾಗ್ಯೂ ಕೇವಲ 100ಕ್ಕೆ 50-60 ಜನರು ಮನೆಗಳನ್ನು ಕಟ್ಟಿಸಿಕೊಂಡಿರಬಹುದು. ಅಷ್ಟು ಮನೆಗಳೀಗ ನಿಂತಿರುತ್ತವೆ. ಉಳಿದವರೆಲ್ಲ ಆ ಹಣವನ್ನು ತಿಂದು ಹಾಕಿ ಬಿಟ್ಟಿದ್ದಾರೆ. ಹೀಗಾಗಿ ಇಲ್ಲಿಯವರೆಗೂ ಈ ಬಾಬಿಗೆ ವೆಚ್ಚಮಾಡಿರತಕ್ಕ ಹಣ ದುಂದು ಖರ್ಚಾಗಿ ಹೋಗಿದೆ. ಆ ಜನರನ್ನು ಸರ್ಕಾರ ನಿಜವಾಗಿಯೂ ಉತ್ತಮ ಮಟ್ಟಕ್ಕೆ ತರಬೇಕೆಂಬ ಆಸೆಯಿದ್ದರೆ ಅವರಿಗೆ ಈಗ ಹಣವನ್ನೇನು ಖರ್ಚುಮಾಡಲಾಗುತ್ತಿದೆ ಅದೆಲ್ಲವನ್ನೂ ಅವರ ವಿದ್ಯಾಭಿವೃದ್ಧಿಗೆ ಉಪಯೋಗ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇದರಿಂದ ಅವರ ಜ್ಞಾನದ ಮಟ್ಟವಾದರೂ ಹೆಚ್ಚುತ್ತದೆ. ಇದರ ಜೊತೆಗೆ ದೇಶದಲ್ಲಿ ಎಲ್ಲೆಲ್ಲಿ ಕೈಗಾರಿಕಾ ಕೇಂದ್ರಗಳನ್ನು ತೆರೆಯಲಾಗುವುದೋ ಅಲ್ಲೆಲ್ಲಾ ಹಿಂದುಳಿದ ವರ್ಗದ ಜನರಿಗೆ ಅದರಲ್ಲಿ ಕೆಲಸಪಡೆಯುವಂಥ ಒಂದು ಸದವಕಾಶವನ್ನುಂಟುಮಾಡಿ ಕೊಟ್ಟರೆ ಅಲ್ಲಿಗೆ ಅವರು ಸ್ವಲ್ಪಮಟ್ಟಿಗಾದರೂ ಮುಂದುವರೆಯಲಿಕ್ಕೆ ಅವಕಾಶವಾಗುತ್ತದೆಂದು ನಾನೀ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ.

ಇನ್ನು ಫ್ಯಾಮಿಲಿಪ್ಲಾನಿಂಗ್ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಆದರೆ ಈ ವಿಚಾರದಲ್ಲಿ ದೇಶದಲ್ಲಿ ಸ್ವಲ್ಪಮಟ್ಟಿಗೆ ಯಾರಿಗೆ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆಯೋ ಅಂಥವರ ವಿಚಾರವೇ ಬೇರೆ ಆಗುತ್ತೆ. ಆದರೆ ರಸ್ತೆಗಳಲ್ಲಿ ಅಲೆದಾಡತಕ್ಕ ಭಿಕ್ಷುಕ ವೃತ್ತಿ ಜನರಿಗೆ ಇದರ ಅಗತ್ಯ ಹೆಚ್ಚಾಗಿದೆ. ಈಗಾಗಲೇ ಅವರಲ್ಲಿ ಅನೇಕ ಹೆರೆಡಿಟರಿ ರೋಗಗಳೂ ಅನೇಕ ತೆರನಾದ ಅಂಟುರೋಗಗಳೂ ಬೇರೂರಿರುವುದರಿಂದ ಅವರು ದಾರಿಗಳಲ್ಲಿ ಅಲೆದಾಡುತ್ತಿದ್ದರೂ ಆ ರೋಗಗಳು ಇತರರಿಗೂ ಹರಡುವ ಅವಕಾಶ ವಿಶೇಷವಾಗಿದೆ. ಈ ಜನರಿಗೆ ಈಗ ಡಜನ್‌ಗಟ್ಟಲೆ ಮಕ್ಕಳುಗಳಾಗುತ್ತಿವೆ. ಇದರಿಂದ ದೇಶದಲ್ಲಿ ಈ ದಿವಸ ನಾನಾ ಬಗೆಯ ರೋಗಗಳು ಹರಡುವುದಕ್ಕೆ ಅವಕಾಶವಾಗಿದೆ. ಆದಕಾರಣ ಈ ವರ್ಗದ ಜನರಿಗೆ ಈ ಫ್ಯಾಮಿಲಿ ಪ್ಲಾನಿಂಗ್ ಚಿಕಿತ್ಸೆಯನ್ನು ದೇಶದಕ್ಷೇಮಾಭ್ಯುದಯಗಳ ದೃಷ್ಟಿಯಿಂದ ಬಲಾತ್ಕಾರದಿಂದಲಾದರೂ ನಡೆಸತಕ್ಕದ್ದು ಅತ್ಯಗತ್ಯ. ಅದರಿಂದ ದೇಶಕ್ಕೆ ಹೆಚ್ಚಿನ ಕ್ಷೇಮ ಉಂಟಾಗುವುದೆಂದು ಹೇಳುತ್ತೇನೆ.

ಮತ್ತೆ ಸೆರಿಕಲ್ಚರ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ವ್ಯವಸಾಯದಲ್ಲಿ ಹೊಂದಿಕೊಂಡಿದ್ದು ವ್ಯವಸಾಯದಲ್ಲಿ ನಿರತರಾಗಿರತಕ್ಕ ಲಕ್ಷೋಪಲಕ್ಷ ರೈತರಿಗೆ ಉಪಕಸಬನ್ನು ಒದಗಿಸಿಕೊಡುವುದಕ್ಕೆ, ಅವರ ಆರ್ಥಿಕಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ, ರೇಷ್ಮೆ ಕೈಗಾರಿಕೆಯ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ತಾನೇತಾನಾಗಿ ನೂರಾರು ವರ್ಷಗಳಿಂದ ವ್ಯವಸಾಯಗಾರನು ದೇಶದಲ್ಲಿ ಬೆಳಸಿಕೊಂಡು ಬಂದಿರತಕ್ಕ ರೇಷ್ಮೆ ವ್ಯವಸಾಯವನ್ನು ಉತ್ತಮ ರೀತಿಯಲ್ಲಿ, ಹೆಚ್ಚಿನ ಉಳಿತಾಯದ ರೀತಿಯಲ್ಲಿ ಮುಂದುವರಿಸಲು ಸಾಧ್ಯವಾಗಬೇಕಾದರೆ, ಈ ಕೈಗಾರಿಕೆಯನ್ನು stabilise ಮಾಡಬೇಕಾಗುತ್ತದೆ.

(ಶ್ರೀ ಜಿ. ವೆಂಕಟಪ್ಪ)

ಹಾಗೆ ಮಾಡದೆ ಹೋದರೆ ಹೊರದೇಶಗಳಾದ ಜಪಾನ್ ಮತ್ತು ಚೈನಾ ದೇಶದವರ ಕಾಂಪಿಟಿಷನ್ನಿಂದ ನಮ್ಮ ವ್ಯಾಪಾರವು ಕುಸಿದುಬೀಳುತ್ತದೆ. ಇದಕ್ಕಾಗಿ ಟಾರಿಫ್ ಕಮಿಟಿಯ ರಿಪೋರ್ಟಿನ ಮೇಲೆ ಕೇಂದ್ರ ಸರ್ಕಾರದವರು ಶೇಕಡ 30ರಷ್ಟು ತೆರಿಗೆಯನ್ನು ಹೊರದೇಶಗಳಿಂದ ಬರತಕ್ಕ ರೇಷ್ಮೆಯ ಮೇಲೆ ಹೇರದೆ ಹೋಗದಿದ್ದರೆ ನಮ್ಮ ರೇಷ್ಮೆ ಕೈಗಾರಿಕೆ ಉಳಿಯುತ್ತಿರಲಿಲ್ಲ.

ಇದೇ ಏಷ್ಯಾ ಖಂಡಕ್ಕೆ ಏಕೈಕ ಕೈಗಾರಿಕೆಯಾಗಿದ್ದಂಥ ಸ್ಪನ್‌ಸಿಲ್ಕ್‌ಮಿಲ್ಲನ್ನು ನಿಲ್ಲಿಸುವುದಕ್ಕೆ ಅನುಕೂಲವಾದಂಥ ವಾತಾವರಣವನ್ನು ಸರ್ಕಾರ ಉಂಟುಮಾಡಿತು ಎಂದು ಹೇಳುವುದು ಬಹಳ ಶೋಚನೀಯವಾದ ವಿಷಯ. ಕಾರ್ಖಾನೆಯನ್ನು ಕಂಪೆನಿ ಮುಖೇನ ನಡೆಸಲು ಸಾಧ್ಯವಾಗದೇ ಇದ್ದರೆ, ಸರ್ಕಾರದವರೇ ತಮ್ಮ ನೇತೃತ್ವದಲ್ಲಿ ನಡೆಸಬಹುದಾಗಿತ್ತು. ಹಾಗೆ ಮಾಡದೆ ಹೀರಾಲಾಲ್ ಭಿಕಾಭಾಯಿ ಅಂಡ್ ಸನ್ಸ್ ಅವರ ಮ್ಯಾನೇಜ್‌ಮೆಂಟಿಗೆ ಈ ಕಾರ್ಖಾನೆಯನ್ನು ವಹಿಸಿದ್ದರಿಂದ, ಈ ಕೈಗಾರಿಕೆಗೆ ಧಕ್ಕೆ ಬಂತು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರು ನಾಲ್ಕು ಕಂಪೆನಿಗಳ ಹೆಸರಿನಲ್ಲಿ ಈ ಕಾರ್ಖಾನೆಯ ಮಾಲನ್ನು 23 ರೂಪಾಯಿಗಳಿಗೆ ಖರ್ಚುಹಾಕಿ ತೆಗೆದುಕೊಂಡು ಹೋಗಿ ಅನಂತರ 33 ರೂಪಾಯಿಗಳ ದರದಲ್ಲಿ ಮಾರಾಟಮಾಡುತ್ತಿದ್ದರು. ಈ ನಾಲ್ಕು ಕಂಪೆನಿಗಳೂ ಇವರಿಗೇ ಸೇರಿದುವು. ಇವರುಗಳೇ ಕಾರ್ಖಾನೆಯಿಂದ ಒಪ್ಪಂದಮಾಡಿಕೊಂಡು ಮಾಲನ್ನೆಲ್ಲ ಖರೀದಿಮಾಡುತ್ತಿದ್ದರು. ಇವೊತ್ತು ಈ ಕಾರ್ಖಾನೆಯನ್ನು ಮುಚ್ಚಲಿಕ್ಕೆ ಕಾರಣ ಕೇವಲ ಮೂರುವರ್ಷಗಳ ಹಿಂದೆ ಇವರನ್ನು ಮ್ಯಾನೇಜ್‌ಮೆಂಟಿಗೆ ಕರೆಸಿಕೊಂಡದ್ದೇ ಆಗಿದೆ. ಇದರಲ್ಲಿ ಉತ್ಪತ್ತಿ ಹೆಚ್ಚಾಗಿದ್ದು, ಇದರಲ್ಲಿ ಹುಟ್ಟಿದ ದುಡ್ಡಿನಿಂದಲೇ ಎರಡೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಈ ಕಾರ್ಖಾನೆಗೆ ಕೊಡಲು ಮುಂದೆ ಬಂದಿದ್ದಾರೆ. ಕಾರ್ಖಾನೆಯಲ್ಲಿ ನಷ್ಟವೇನಾದರೂ ಆಗಿದ್ದರೆ ಅವರು ಎರಡೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಕೊಡಲು ಮುಂದೆ ಬರುತ್ತಿರಲಿಲ್ಲ. ಈ ಹಣವನ್ನು ಸಹ ಅವರು ಈ ಮೂರುವರ್ಷಗಳ ಅವಧಿಯಲ್ಲಿ ಇದೇ ಕಾರ್ಖಾನೆಯಿಂದ ಸಂಪಾದನೆ ಮಾಡಿದ್ದಾರೆ. ಆ ಭಾಗದ ರೇಷ್ಮೆ ವ್ಯವಸಾಯಗಾರರು ಅವರಲ್ಲಿರುವ ಸೊಸೈಟಿಯಿಂದ ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಮುಂದೆ ಬಂದಿದ್ದಾರೆ. ಈ ಕೈಗಾರಿಕೆ ಬೆಳೆಯಬೇಕೆಂದು ತಮಗೆ ಇಷ್ಟವಿದ್ದ ಪಕ್ಷದಲ್ಲಿ ಸರಿಯಾದ ವಾತಾವರಣವನ್ನು ಕಲ್ಪಿಸಿ, ಮೂರುಲಕ್ಷ ರೂಪಾಯಿಗಳಿಗೆ ರೈತರ ಸೊಸೈಟಿಗೆ ಕೊಡುತ್ತಿದ್ದರೆ, ಆದರೆ ಆ ನೀತಿಯನ್ನು ಬದಲಾಯಿಸಿದ್ದರಿಂದ ಇವೊತ್ತಿನ ದಿವಸ ಅದು ಲಿಕ್ವಿಡೇಷನ್ನಿಗೆ ಹೋಗಬೇಕಾಗಿ ಬಂತು.

ಜೋಡಿ ಮತ್ತು ಇನಾಂಗಳ ಬಗ್ಗೆ ಒಂದೇ ಒಂದು ವಿಷಯವನ್ನು ಹೇಳುತ್ತೇನೆ ಜೋಡಿ ಇನಾಂಗಳ ರದ್ದಿಯಾತಿಯ ಬಗ್ಗೆ ಸರ್ಕಾರದವರು ದಿಟ್ಟತನದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಇನಾಂಗಳನ್ನು ರದ್ದುಮಾಡಲು ಮನಸ್ಸು ಮಾಡಿರುವುದು ತೃಪ್ತಿಕರವಾದ, ಸಮಾಧಾನಕರವಾದ ಸಂಗತಿ. ಜೋಡಿ ಮತ್ತು ಇನಾಂ ಗ್ರಾಮಗಳಲ್ಲಿ ಅನೇಕ ಕ್ಲಿಷ್ಟಸಮಸ್ಯೆಗಳಿವೆ. 14 ಮತ್ತು 15ನೆಯ ನಂಬರಿನ ಲೆಕ್ಕಗಳನ್ನು ಅದಕ್ಕೆ ಸಂಬಂಧಪಟ್ಟವರು ಮೇಂಟೇನ್ ಮಾಡದೆ ಇರುವುದರಿಂದ ಯಾರ ಯಾರ ಹಕ್ಕು ಏನಿದೆ ಎಂಬುದನ್ನು ನಿಗದಿ ಮಾಡಲು ಕಷ್ಟವಾಗಿದೆ. ಅಲ್ಲಿನ ಪರಿಸ್ಥಿತಿಯನ್ನು ಅನುಸರಿಸಿ, ಅಲ್ಲಿನ ನೈಜತ್ವವನ್ನು ಅರಿತು, ರೈತರು ಜೋಡಿದಾರರು ಮತ್ತು ಇನಾಂದಾರರುಗಳು ಕೋರ್ಟುಗಳಿಗೆ ಹೋಗದಂತೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಇದಕ್ಕಾಗಿ ಮೊಬೈಲ್ ಕೋರ್ಟುಗಳನ್ನು ನಡೆಸಿ ಅವುಗಳ ಮುಖೇನ ಇನಾಂ ಮತ್ತು ಜೋಡಿ ಗ್ರಾಮಗಳಿಂದ ಬರತಕ್ಕ ಕ್ಲಿಷ್ಟ ಸಮಸ್ಯೆಗಳನ್ನು ಪರಿಹರಿಸದೆ ಇದ್ದರೆ ರೈತನ ಹಿತಕ್ಕೆ ಧಕ್ಕೆ ಬರುತ್ತದೆ. ಯಾವ ಉದ್ದೇಶದಿಂದ ಇನಾಂಗಳ ರದ್ದಿಯಾತಿಯನ್ನು ಮಾಡಿದಿರೋ ಆ ಉದ್ದೇಶವು ಪೂರ್ಣವಾಗಬೇಕಾದರೆ, ಈ ಪದ್ಧತಿಯನ್ನು ಜಾರಿಮಾಡಿ ಮೊಬೈಲ್ ಕೋರ್ಟ್‌ಗಳ ತೀರ್ಮಾನವೇ ಕಡೆಯದು ಎಂದು ಮಾಡಬೇಕು. ಕೋರ್ಟುಗಳಿಗೆ ಹೋಗಿ ಸಿಕ್ಕಾಪಟ್ಟೆ ಖರ್ಚುಮಾಡಿಕೊಂಡು, ಒಂದು ಸಾವಿರ ರೂಪಾಯಿ ಬೆಲೆಬಾಳತಕ್ಕ ಜಮೀನಿಗೆ ಎರಡು ಮೂರು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಇನಾಂದಾರರೂ, ಜೋಡಿದಾರರೂ ಮತ್ತು ರೈತರೂ ಸಹ ಹಾಳಾಗದಂತೆ ಮಾಡಬೇಕಾದರೆ ಡಿಸ್ಟ್ರಿಕ್ಟ್ ಜಡ್ಜ್‌ಗಳ ಅಧೀನದಲ್ಲಿ ಮೊಬೈಲ್ ಕೋರ್ಟುಗಳನ್ನು ಏರ್ಪಡಿಸಿ ಪರಿಹರಿಸಿಕೊಡಬೇಕು ಎಂದು ತಿಳಿಸಿ, ಇಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ನಿಲ್ಲಿಸುತ್ತೇನೆ.

Mr. SPEAKER.—Before we rise, I would like to announce the result of our discussion. In all, we have taken 27 hours to discuss on the general aspects of the Budget; 51 members have taken part; 28 Congress and 23 Opposition. Out of 23 Opposition, 9 are P.S.P. and 14 other Opposition. In terms of hours, the Congress members have taken 12 hours 45 minutes; the Opposition, which is very clamorous, has taken 13 hours 15 minutes; P.S.P 7 hours and other Opposition members 6 hours 15 minutes. In all, we have taken 27 hours.

The House now rises and meets at 3-30 P.M.

The House adjourned at Fifteen Minutes past One of the Clock and re-assembled at Thirty-five Minutes past Three of the Clock.

[MR. SPEAKER in the Chair]

Member's Representations.

Sri C. M. ARUMUGHAM (Kolar Gold Fields).—May I remind the Speaker about my privilege motion? I want to know the procedure, why he has to refer to the Chief Minister, why it has been delayed for nearly one week, why should the Chief Minister be consulted.